ಶ್ರೀಃ

ಶ್ರೀ ಮಣವಾಳ ಮಾಮುನಿಗಳ ವೈಭವ

ಪ್ರಕಾಶಕರು :

ಶ್ರೀ ಲಕ್ಷ್ಮೀಜನಾರ್ದನಸ್ವಾಮಿ ದೇವಸ್ಥಾನ,

ಮಂಡ್ಯ.

ಶ್ರೀ ಮಣವಾಳ ಮಾಮುನಿಗಳ ಷಷ್ಟಿ-ಶತಾಬ್ದಿ ಉತ್ಸವದ ಸಂದರ್ಭದಲ್ಲಿ ಭಾಗವಹಿಸಿದ ವೈದಿಕ ಗೋಷ್ಠಿ.

ಶ್ರೀಮತೇ ರಾಮಾನುಜಾಯ ನಮಃ

"ಮಂಡ್ಯ ಮತ್ತು ಮಂಡಿಯಂ ಶ್ರೀವೈಷ್ಣವರು"

ಶ್ರೀ ಮಾಂಡವ್ಯಕ್ಷೇತ್ರದ ಚರಿತ್ರೆ ಸಾವಿರವರ್ಷಕ್ಕೂ ಪುರಾತನ ವಾದದ್ದು. ಶ್ರೀ ಮಾಂಡವ್ಯ ಮುನಿಯು ತಪಸ್ಸು ಮಾಡಿ ಇಲ್ಲಿಯ ಶ್ರೀ ವೈಷ್ಣವರುಗಳಿಗೆ ಭಗವದಾರಾಧನಕ್ಕಾಗಿ ದೇವಸ್ಥಾನವನ್ನು ನಿರ್ಮಿಸಿದರು. ಅದರಿಂದ ಈ ಊರಿಗೆ ಮಂಡಯಂ ಎಂಬ ಹೆಸರು ಬಂದಿತು. ಈ ವಿಚಾರವು ಕೆಲವಾರು ಶಾಸನಗಳಲ್ಲಿಯೂ, ಓಲೆಗರಿಗಳಲ್ಲಿಯೂ ಮತ್ತು ಗೆಜೆಟ್ಟು (Gezette) ನಲ್ಲಿಯೂ ಪ್ರಕಟವಾಗಿದೆ.

ಕೃತಯುಗದಲ್ಲಿ ಈ ಸ್ಥಳವು ಅರಣ್ಯವಾಗಿದ್ದಿತು. ಟೆಂಕಮಹರ್ಷಿಯು ವೇದ ಶಬ್ದವನ್ನು ಉಪದೇಶಿಸಿದುದರಿಂದ 'ವೇದರಣ್ಣ್ಯರು' (ವೇದಾರಣ್ಯ) ಎಂದು ಹೆಸರಾಯಿತು. ದ್ವಾಪರಯುಗಾಂತ್ಯದಲ್ಲಿ 'ಇಂದ್ರವರ್ಮ' ನೆಂಬ ರಾಜನು ಸಂತಾನಾರ್ಥಿಯಾಗಿ ಈ ದೇವರನ್ನು ಪ್ರಾರ್ಥಿಸಿದನು. ಆಗ ಅವನಿಗೆ ವಿಷ್ಣುವು ಪ್ರತ್ಯಕ್ಷನಾಗಿ ವರವನ್ನು ನೀಡಿ ಸೋಮವರ್ಮನೆಂಬ ಪುತ್ರನನ್ನು ಅನುಗ್ರಹಿಸಿದನು. ಈಗಲೂ ಈ ಊರಿನ ಲಕ್ಷ್ಮೀಜನಾರ್ದನ ಸ್ವಾಮಿಯವರ ಹತ್ತಿರ ಸಾಲ್ಗ ಮಕ್ಕಳು (ಹಶುರ್ವೇದಪುರುಷರು) ಇರುವುದರಿಂದ ಅನೇಕ ಸ್ತ್ರೀಯರು ಸಂತಾನಾಪೇಕ್ಷೆಯಿಂದ ಉಳ್ಳವರಾಗಿ ರಥೋತ್ಸವದಲ್ಲಿ ಪ್ರಸಾದ ಸ್ವೀಕರಿಸಿ ಪುತ್ರವತಿಯರಾಗುತ್ತಿರುವುದು ಈವತ್ತಿಗೂ ಪ್ರಸಿದ್ಧಿಯ ವಿಷಯವಾಗಿದೆ. ಈ ಸೋಮವರ್ಮನೇ ಇಲ್ಲಿ ಅಗ್ರಹಾರ ಮತ್ತು ಕೋಟೆಯನ್ನು ಕಟ್ಟಿ 'ಮನಸ್ಯೆವಮು' ಎಂದನು. ಅದೇ ಮಂಡಯಂ ಎಂದಾಯಿತು. ಈ ಅಗ್ರಹಾರವನ್ನು ಜನಾದಿ ಅಗ್ರಹಾರವೆನ್ನುತ್ತಾರೆ. ಈ ದೇವಸ್ಥಾನದಲ್ಲಿ ಅನಾದಿ ಕಾಲದಿಂದ ನಿತ್ಯೋತ್ಸವ, ಮಾಸೋತ್ಸವ ಮತ್ತು ಬ್ರಹ್ಮೋತ್ಸವಗಳು ಕ್ರಮಾನುಸಾರ ನಡೆದು ಬರುತ್ತಿವೆ.

ಇದೇ ಪೀಠದ ಶ್ರೀರಂಗನಿಲ್ಲಿ ಸುಮಾರು 11ನೇ ಶತಮಾನದ ಶ್ರೀ ಅನಂತಾಚಾರ್ಯರು (ಅನಂತಾಳ್ವಾರ್) ಒಂದು ಸಾರಿ ಶ್ರೀರಂಗದಲ್ಲಿ ಶ್ರೀ ಭಗವದ್ರಾಮಾನುಜಾಚಾರ್ಯರ ಪಕ್ಕದಲ್ಲಿ ದಿವ್ಯಪ್ರಬಂಧ ಕಾಲಕ್ಷೇಪ ಕೇಳುತ್ತಿದ್ದರು. ಆಗ ಶ್ರೀ ಸ್ವಾಮಿಯವರು "ನಿಮ್ಮಲ್ಲಿ ಯಾರಾದರೂ ತಿರುಮಲೆಗೆ ಹೋಗಿ ಶ್ರೀನಿವಾಸನಿಗೆ ನಂದನವನವನ್ನು ಮಾಡಿ ಕೈಂಕರ್ಯ ಮಾಡುವಿರಾ?" ಎಂದರು. ಆಗ ಆ ಸಭೆಯಲ್ಲಿ ಎಲ್ಲರೂ ಮೌನವಾಗಿದ್ದಾಗ ಶ್ರೀ ಅನಂತಾಚಾರ್ಯರು ಭಗವಂತನ ಕೈಂಕರ್ಯವನ್ನು ತನಗೆ ದಯಪಾಲಿಸಬೇಕೆಂದರು. ಇದನ್ನು ಕೇಳಿದ ಶ್ರೀ ಸ್ವಾಮಿಯವರು ಸಂತೋಷಗೊಂಡು ಇವರಿಗೆ 'ಅಣ್ಣಪಿಳ್ಳೈ' ಎಂದು ಬಿರುದನ್ನು ಕೊಟ್ಟರು. ಇವರು ಧಾರವಾಡ ಗೋತ್ರದವರು. ಇವರ ವಂಶದವರೆಲ್ಲಾ ತಿರುಮಲೈ ಅನಂದಾಳ್ ಪಿಳ್ಳೈ, ಮಂಡಯಂ ಅಪ್ಪಂದಾನ್ ಪಿಳ್ಳೈಗಳೆಂದು ಪ್ರಸಿದ್ಧಿ!

ತಿರುಮಲೆಯ ಶ್ರೀನಿವಾಸನ ಮಹಿಮೆಯನ್ನು ಜಗತ್ತಿಗೆ ಪ್ರಕಾಶಗೊಳಿಸಿದವರು ಶ್ರೀ ಅನಂತಾಚಾರ್ಯರು. ಇವರಿಗೆ ವಿಜಯನಗರದ ರಾಜರು ಜಹಗೀರಿಯಾಗಿ ಕೊಟ್ಟ ಊರಿಗೆ ತಮ್ಮ ಸ್ವಂತ ಸ್ಥಳದ ಹತ್ತಿರ ಇರುವ ಮಂಡಯದ ನೆನಪಿಗಾಗಿ ತಿರುಮಂಡಯವೆಂದು ಹೆಸರು ಕೊಟ್ಟರು. ಈ ಅನಂತಾಚಾರ್ಯರ ಪೂರ್ವಾಶ್ರಮವನ್ನು ತಿರುಪತಿಯ ಗೋವಿಂದರಾಜಸ್ವಾಮಿದೇವಸ್ಥಾನ, ಕಾಂಚೀಪುರ ಮತ್ತು ನಮ್ಮ ಮಂಡಯದ ಶ್ರೀ ಲಕ್ಷ್ಮೀಜನಾರ್ದನಸ್ವಾಮಿ ಈ ಮೂರನವರೆ ಸನ್ನಿಧಿಯಲ್ಲೂ ಮತ್ತೂ ಕೆಲವೆಡೆಗಳಲ್ಲಿಯೂ ಪ್ರತಿಷ್ಠಾಪಿಸಿದುತ್ತಾರೆ.

ಇವರ ವಂಶದಲ್ಲಿ ಶ್ರೀ. ಉ. ವೇ. ಗೋವಿಂದರಾಜ ಉಡ್ಯೆಯರ್ ಎಂಬ ಮಹನೀಯರು ಶ್ರೀ ಮಣವಾಳ ಮಾಮುನಿಗಳ ಶಿಷ್ಯರಾಗಿದ್ದು 'ಉಭಯ ವೇದಾಂತಾಚಾರ್ಯ' ಎಂಬ ಬಿರುದನ್ನು ಪಡೆದು ಕಾಲಕ್ಷೇಪ ನಿರತರಾಗಿದ್ದರು.

ಶ್ರೀವೈಷ್ಣವ ಗುರುಪರಂಪರೆಯಲ್ಲಿ ಶ್ರೀ ನಮ್ಮಾಳ್ವಾರರ ಪ್ರಥಮ ಪೀಠದಿಂದ ಭಗವದ್ರಾಮಾನುಜರು ಏಳನೆಯವರು. ಶ್ರೀಮಣವಾಳ

ಮೂಮುನಿಗಳು ಪರಿಷಾತ್ಕರಿಸಿದರು. ಶ್ರೀ ಮಣವಾಳ ಮೂಮುನಿಗಳ ಸಮಯ ಶ್ರೀ. ಶ. 1870 ರಿಂದ 1421ನೆ ಪರಿಧಿ.

ಶ್ರೀ ಮಣವಾಳ ಮೂಮುನಿಯವರ ಚರಮೂರನೆಯ ಶತಮಾನೋತ್ಸವವನ್ನು ಮಂಡಯಂ ನೇಮಸ್ಥಾನದ ಧರ್ಮಾಧಿಕಾರಿಗಳೂ ಪ್ರಮುಖ ಕಾರ್ಯಕರ್ತರೂ ಆದ ಶ್ರೀ. ಉ. ವೇ. ಎಕ್. ಎ. ಶಿಂಗ್ಲಾಚಾರ್ಯರವರು, ಮುಖಾವಿದ್ವಾಂಸರಾದ ಶ್ರೀ ಮಂಡಯಂ ಆ. ಅಳ್ವಾರ್ ತಿರುಮಲೈ ಅಯ್ಯಂಗಾರ್ಯರ ಪರಿಷತ್ಪ್ರಜೆಯಲ್ಲಿ ವಿಜ್ಞಾಪಿಸಿಕೊಂಡರು.

ಈ ಸಂದರ್ಭದಲ್ಲಿ ಅನೇಕ ವಿದ್ವಾಂಸರುಗಳ ಮತ್ತು ಭಕ್ತರ ಉಪನ್ಯಾಸ, ಸಂಗೀತ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಇವುಗಳಲ್ಲಿ ಶ್ರೀ. ಉ. ವೇ. ಎಕ್. ಎ. ಶಿಂಗ್ಲಾಚಾರ್ಯರು ಮತ್ತು ಇತರ ಕಾರ್ಯಕರ್ತರು ಈ ಮಹೋತ್ಸವದ ಸ್ಮರಣೆ ಆಜೀವಪರ್ಯಂತವಾಗಿ ಇರಬೇಕೆಂಬ ಉದ್ದೇಶದಿಂದಲೂ, ಭಗವದ್-ಭಾಗವತ-ಆಚಾರ್ಯ ಪ್ರತಿಷ್ಠೆಯಿಂದಲೂ ಈ ಕೃತಿಯನ್ನು ಮುದ್ರಿಸಲು ಏರ್ಪಾಡು ಮಾಡಿಸಿಕೊಟ್ಟಿದ್ದಾರೆ.

ಇದರಲ್ಲಿ ಉಕ್ತವಾಗಿರುವ ಎರಡನೆಯ ಭಾಗದ ಮಣವಾಳ ಮೂಮುನಿಯವರ ಮಂಗಳಾಶಾಸನದ ಸ್ತುತಿಯನ್ನು "ಜಗದಾಚಾರ್ಯ ಪ್ರತಿವಾದಿ-ಭಯಂಕರಂ ಅಣ್ಣಂಗರಾಚಾರ್ಯ" ರ ಗ್ರಂಥದಿಂದ ಸಂಗ್ರಹಿಸಲಾಗಿದೆ. ತತ್ಪ್ರತ್ಯಯನೆಂಬ ಮತ್ತೊಂದು ಕೃತಿಯನ್ನು ಶ್ರೀ. ಉ. ವೇ. ನ್ಯಾಯ ವೇದಾಂತ ವಿದ್ವಾನ್ ಕೆ. ವರದಾಚಾರ್ಯ ಸ್ವಾಮಿಯವರ ಗಾಲಕ್ಷೇಪದ ಸಾರಸಂಗ್ರಹವಾಗಿ ರಚಿಸಲಾಗಿದೆ. ಈ ಮುದ್ರಣವನ್ನು ಆಚಾರ್ಯ ಪ್ರತಿಷ್ಠೆಯಿಂದಲೇ ಮಾಡಲಾಗಿದೆ. ಏನಾದರೂ ದೋಷದೋಷವಿದ್ದರೆ ಜ್ಞಾನಿಗಳು ಮನ್ನಿಸಬೇಕಾಗಿ ವಿನಂತಿ.

ಅತ್ಯಂತ ದುಃಖದಾಯಕವಾದ ವಿಷಯ:—

ಸಾತ್ವಿಕಾಗ್ರೇಸರರಾದ, ಶ್ರೀ ಮಣವಾಳ ಮಾಮುನಿಗಳಂತೆ ಶ್ರೀ ವೈಷ್ಣವ ಶ್ರೀಯನ್ನು ಅಭಿವೃದ್ಧಿಗೊಳಿಸುವುದರಲ್ಲಿಯೇ ಕಾಲಕ್ಷೇಪ ಮಾಡು ತ್ತಿದ್ದ ಮತ್ತು ಮಂಡಯಂ ಸಮುದಾಯಕ್ಕೇ ಶಿರೋಭೂಷಣರಾಗಿಯೂ,

ಅಪ್ಪತಿಯು ವಿದ್ವತ್ಪ್ರಜೆಯಾಗಿಯೂ, ನಮ್ಮಂತಹ ಸ್ತ್ರೀಯರಿಗೂ ಸಾತ್ಸಂಪ್ರದಾಯದಿಂದ ಭಗವದ್ಭಾಗವತ ಸೇವೆಮಾಡಬೇಕೆಂದು ಪ್ರೋತ್ಸಾಹಿಸುತ್ತಿದ್ದವರೂ ಆದ ಶ್ರೀ. ಉ. ವೇ. ಮಂಡಯಂ ಅನಂದಾಳ್ವಾನ್ ಪಿಳ್ಳೈ ಅಳ್ವಾರೆಂಬ ತಿರುಮಲೈ ಅಯ್ಯಂಗಾರ್ಯ ಸ್ವಾಮಿಯವರು ಮೇಲ್ಕಂಡ ಷಷ್ಟಿಶತಾಬ್ದಿ ಮಹೋತ್ಸವವನ್ನು ಸ್ವತಃ ಅತ್ಯಂತ ಶ್ರದ್ಧೆಯಿಂದಿಗೆ ನಡೆಸಿದವರು ಈ ಕೃತಿ ಬೆಳಕು ಕಾಣುವಷ್ಟರಲ್ಲಿ " ನಲಮಂದನಲ್ಲದೊರು ನಾಡುವುದುವರ್ " ಎಂಬಂತೆ ಆಚಾರ್ಯರ ತಿರುವಡಿಯನ್ನು ಸೇರಿದರು. ಅವರು ನಮ್ಮಂತ ಅಣ್ಣಂದಿರಾಗಿ ಒಂದು ಸಂವತ್ಸರವಾಗುತ್ತದೆ.

ಶ್ರೀ ಮಣವಾಳ ಮಾಮುನಿಗಳ ಪ್ರಿಯವರೊಂದಿಗೆ ಮಂಡಯಂ ಶ್ರೀ ವೈಷ್ಣವರಲ್ಲಿ ಕೆಲವರಿಗೆ ಆಚಾರ್ಯರಾದ ಶ್ರೀ. ಉ. ವೇ. ಆಳ್ವಾರ್ ತಿರುಮಲೈ ಅಯ್ಯಂಗಾರ್ಯ ಸ್ವಾಮಿಯವರನ್ನು ಸ್ಮರಿಸಿ ಈ ವಿಷಯವನ್ನು ಮುಗಿಸುತ್ತೇನೆ.

ತಮ್ಮ ಸೋದರಿ,
ಶ್ರೀದೇವಿ.

ಶ್ರೀ ಮಣವಾಳ ಮಾಮುನಿಗಳ ಷಷ್ಟಿ ಶತಾಬ್ದಿ ಮಹೋತ್ಸವದ
ಆಧ್ಯಕ್ಷರಾದ ಶ್ರೀ ಉ. ವೇ. ಮಂ. ಅ. ಆಳ್ವಾರ್
ತಿರುಮಲೈಯ್ಯಂಗಾರ್ಯ ಸ್ವಾಮಿಗಳ ತನಿಯನ್ :

ಶ್ರೀಮಚ್ಛೈಷಶಿಲಾಗ್ರಣೀಂ ಶುಭಗುಣಾಂ ಶ್ರೀಕಾಂತವರ್ಯಾತ್ಮಜಾಂ
ಶ್ರೀಶೈಲಾಖ್ಯ ಪದಾಂಕಯುತ್ತೋತ್ತಮಗುರೋಃ ಜ್ಞಾನಾಗಮಾಂ
ತಪ್ಪಯುಮ್ ।
ತಚ್ಛಾದಾಂಬುಜಪಟ್ಟುದಂ ಪನುದಯಾಧೀಭಕ್ತಭಿಃ ಭೂಷಿತಂ
ವಂದೇಯಂ ವಿಜವೈರಿಪೂರ್ವಳವಮಾಖ್ಯಾಲಾಖ್ಯವರ್ಯಂ ಗುರುಮ್ ॥

ವಿಶ್ವಾವಸೌ ಸಿಂಹಮಾಸೇ ವಿಶಾಖಾಯಾಂ ಕೃತೋದಯಮ್ ।
ಪದಾಂಕಯುತಾಖ್ಯ ಶ್ರೀಶೈಲಗುರುವರ್ಯಮುಪಂ ಭಜೇ ॥



ಶ್ರೀ ಮಣಿವಾಳ ಮಹಾಮುನಿಗಳ ವೈಭವ

ತಿಂಡನಿಳಾ ಚೋಣಯರ ನಿರತ್ಕೆ ತಳಿಂದು ತಿರೆನ್ದು ಮೂಲಿಳಾ ನ್ದುನಾಳಾ
ತೀನುಲಗಾತಿಯರ ಬೆಲಂವರುಳಾ ನರ್ಕಲ್ಕೆ ತೋಲು ಪುಲಿಂದಿಡುನಾಳಾ
ಮುಂದಮಿಪ್ಪುನಿ ಮಾಮುನಿರ ತಂಗಳ್ಕೆ ಪಾಪುಲಯರ್ತ್ತಿಡುನಾಳಾ
ಸುಂದರು ಬ್ರುಂದುರುರ ಬೆಲಿತಿರಾಜರ್ ತನರ್ಗಾಳಾ.ವು ಪುಂಳ್ಕೆತ್ತಿಡುನಾಳಾ
ಕಂದ ಮುಲರ್ ಶ್ರೀಂ.ಲ್ ಕಮಳಾ ತಾಯುಕಾಣ್ಬನ್ ಕಲ್ಕೆಹಳಾ ವಿಲಂಗಡುನಾಳಾ
ಕಾತಮರ್ ಮುಂಡಿಮುದಂಗನಗರ್ತ್ತಿಳ್ಕೆಳಣ್ಣಾ ಲ ಕಳಿತ್ತಿಡುನಾಳಾ
ತಂದಮಿಳ್ ತೀರ್ ಮಣಾಳಮುನ್ಬಿಬಾನಪದಾರಂ ತಿಟ್ಟಿಡುನಾಳಾ
ಅಳಿ.ಕಾತಿಕಳ್.ನ್ದುಮ್ಬೈಪ್ಪಿಟಿಮುಲ್ ತಮುನಾಮಲಮದೆನು ನಾಗೇ ॥

ನಮ್ಮ ಶ್ರೀವೈಷ್ಣವ ಸಂಪ್ರದಾಯವು ಆಳ್.ವಾರ್‌ಗಳಿಂದಲೂ ಆಚಾರ್ಯರುಗಳಿಂದಲೂ ಕನ್ನ ಶ್ರೇಷ್ಠತೆಯನ್ನು ಉಳಿಸಿಕೊಂಡು ಬಂದಿದೆ. ಆಳ್.ವಾರ್-ಆಚಾರ್ಯರುಗಳ ಪರಂಪರೆಯು ಪ್ರಾಯಶ್ಚಿತ್ತಕ್ಕೆ ಅಳ್ವಾರ್‌ರಾಗಿದ್ದ ಪೆರಿಯ್ವಾಡೆ ಮಣವಾಳ ಮಾಮುನಿಗಳ ವರೆಗೆ ಕ್ರಮಾನುಸಾರ ಮುಂದುವರಿದಿದೆ. ಶ್ರೀ ಮಣವಾಳ ಮಾಮುನಿಗಳು ಕ್ರಿ.ಶ. 1370ನೆಯ ಸಾಧಾರಣ ವರ್ಷದ ತುಲಾಮಾಸ ಮೂಲಾ ನಕ್ಷತ್ರದಲ್ಲಿ ಜನಿಸಿದರು. ಇವರ ವೈಭವವನ್ನು ಎಷ್ಟು ಪ್ರಶಂಸಿಸಿದರೂ "ಅಪ್ಪ್ಳಿಳು ದಕ್ಕಪ್ಪ್ಳು ಮು.ದೆನ್ಬಾರಾವಮುದಮೇ" ಎನ್ನುವ ಹಾಗಿದೆ, ಇವರ ಹಿರಿಮೆ. ಭಗವದ್ರಾಮಾನುಜರು 120 ವರ್ಷ ಈ ಪುಣ್ಯ ಭೂಮಿಯನ್ನು ಅಲಂಕರಿಸಿ ಅಪಾರ ಕಾರ್ಯಗಳನ್ನು ಮಾಡಿದ್ದರೂ, ಮುಕ್ಕಾ ಉಳಿದಿದ್ದ ಅನೇಕ ಕಾರ್ಯಗಳನ್ನು ಮಾಡಬೇಕೆಂದು ಮಣವಾಳ ಮಾಮುನಿಗಳಾಗಿ ಪುನಃ ಅವತರಿಸಿದರೆಂದು ಶ್ರೀವೈಷ್ಣವರಲ್ಲಿ ಸ್ಮರಣೀಯ.

ನಾವುಗಳು, ಈ ಮಹಾನುಭಾವರು ರಚಿಸಿರುವ ಶ್ಲೋಕ(ಶರಣ್ಯ)ಗಳನ್ನು ಅಳವಾಗಿ ಅಭ್ಯಾಸಮಾಡಿ, ಅವುಗಳ ಸಾರವನ್ನು ಪಳಯುಬೇಕಾದುದು ಅಗತ್ಯ.

ಶ್ರೀ ಭಗವದ್ರಾಮಾನುಜರ ಕಾಲದಲ್ಲಿ ಶ್ರೀವೈಷ್ಣವಸಂಪ್ರದಾಯ

ಅನೇಕರು ಪಂಪಾಚಲವಿಯರ್ಯಂತ ಪರಡಿತ್ತು. 'ಎಲಾ ದುಷ್ಟ ತಿರಾಲಿನಿ ಬುದಿಶ್ಚಾನ್ ವಾಳಿ.ಯೇ' ಎಂದು ಮಣವಾಳ ಮಾಮುನಿಗಳ ಜನ್ಮ ಪುನರವತಾರವಾಗಿದೆ. ಈಗೆ ಭಗವದ್ಯಾಮಾಮುಜಾಚಾರ್ಯರು ಶ್ರೀ ಭಾಷ್ಯ, ವೇದಾಂತದೀಪ, ವೇದಾಂತಸಾರ, ಗೀತಾಭಾಷ್ಯ ಮುಂತಾದ ವಿಮರ್ಶಾತ್ಮಕವಾದ ದಿವ್ಯಗ್ರಂಥಗಳನ್ನು ರಚಿಸಿದರೋ, ಈಗೆಯೇ ಮಣವಾಳ ಮಾಮುನಿಗಳೂ ಸಹ 'ದಿವಿರಾಜ ವಿಂಶತಿ' 'ಉಪದೇಶರತ್ನಮಾಲೈ' 'ಆರ್ತಿ ಪ್ರಬಂಧಂ' ಮೊದಲಾದ ಇತರ ಪದಿನೈದು ವಿಮರ್ಶಾತ್ಮಕ ಗ್ರಂಥಗಳನ್ನು ರಚಿಸಿರುತ್ತಾರೆ.

ಇವರ ವಿಷಾರ ಪಾಂಡಿತ್ಯದಿಂದ ಸಂತುಷ್ಟರಾದವರನೇಕರು ಇವರನ್ನು ಸ್ತುತಿಸಿ 'ವರವರಮುನಿ ಶತಕಂ' 'ವರವರಮುನಿ ಕಾವ್ಯಂ' 'ವರವರ ಮುನಿಕಾವ್ಯಾವ್ಯಾಖ್ಯಂ' ಮೊದಲಾದ ಕೃತಿಗಳನ್ನು ರಚಿಸಿರುತ್ತಾರೆ.

ಶ್ರೀ ರಾಮಾನುಜಾಚಾರ್ಯರು ಸೂರ್ಯನಾರಾಯಣಪುರಿಯಲ್ಲಿ ದೇವೀಸ್ಥಾನವಾಗಿಯೂ, ಮಣವಾಳ ಮಾಮುನಿಗಳು ಚಂದ್ರನಂತೆ ಆಹ್ಲಾದಕರರಾಗಿಯೂ ಕಂಗೊಳಿಸುತ್ತಿದ್ದಾರೆ. ಜಗತ್ತಿನಲ್ಲಿ ಅನೇಕರು ಪುರುಷರೆಂದೂ, ವಿದ್ವಾಂಸರೆಂದೂ ಹೊಗಳಲ್ಪಡುತ್ತಾರೆ. ಆದರೆ ಮಣವಾಳ ಮಾಮುನಿಗಳೊಬ್ಬರಿಗೆ ಮಾತ್ರ 'ಏಶವರಾಕ್ ಶಿಖಾಮಣಿ' ಗಳೆಂಬ ಬಿರುದು ದೊರೆತಿದೆ.

'ಸಂಬಿಳ್ಳೈ' ಎನ್ನುವ ಆಚಾರ್ಯರು ಶ್ರೀರಂಗದ ದೇವಸ್ಥಾನದಲ್ಲಿ ಸ್ಥಾಪಿಸಿದ 'ತಿರುವಾಯ್ ಮೊಳಿ' ಯ ಪಾಠ್ಯಕ್ರಮವನ್ನು ಹೇಳುತ್ತಿದ್ದರೆಂಬುದು ಸ್ಮರಣೆಯಿದ್ದಿ. ಆದರೆ, ಶ್ರೀರಂಗನಾಥನು ಇವರನ್ನು ಆಚಾರ್ಯರನ್ನಾಗಿ ಸ್ವೀಕರಿಸಲೋ ಅಥವಾ ಇವನಿಗೆ 'ಕನಿಯನ್ ಮುನ್ನಿ' ಶ್ಲೋಕವನ್ನು ರಚಿಸಲೋ ಇಷ್ಟಪಡಲಿಲ್ಲ. ಶ್ರೀರಂಗನಾಥನು ಮಣವಾಳ ಮಾಮುನಿಗಳಿಗೆ ಮಾತ್ರ ಶಿಷ್ಯರಾಗಿದ್ದು, ಆಚಂದ್ರಾರ್ಕವಾಗಿ ನಿಲ್ಲುವಂತೆ, ಜಗತ್ತೆಲ್ಲಾ ಪ್ರಶಂಸಿಸುವಂತೆ ಒಂದು ತನಿಯನ್ ಶ್ಲೋಕವನ್ನು ರಚಿಸಿದ್ದು ಆತ್ಯದ್ಭುತ!

ಮಣವಾಳ ಮಾಮುನಿಗಳಿಗೆ ಭಗವದಾಜ್ಞೆಯಾಯಿತು. ಭಗವದ್ಧಿ

ಹಯಕ್ಕೆ ಈತನು ಮುಖ್ಯಪ್ರಾಣಾಯಿರಪ್ಪದಿ ಕಾಲಕ್ಷೇಪ ವ್ಯಾಖ್ಯಾನ ಮಾಡಬೇಕೆಂದು। ಅದನ್ನು ಕೇಳಿದ ಮಾಮುನಿಗಳು—

ನಾಮಾರ್ ಪೆರಿಯ ತಿರುಮುಂಡಪಡಿಯಾರ್
ನೆಂ ಪೆರುಮಾಳ್ ತಾವೂದ ವೆಮ್ಬೆರುಮ್ತನಿತ್ತಳೈ-ತ್ತು
ಪೀ ಮೂರನ್ ಶಿನ್ವಿಂಞ್. ಪೇಪಕ್ಷಿನ್
ಲೆಮುಗ್ ಪೊರುಳ್ಳೈ ನಾಳುವಿಂಗೇ ವಂಮಿನ್ರೈಯಿನ್ರೇವುಮ್ವುದೇ
ನಾಯನ್ವದು

ಎಂದು ಶ್ವನ್ಮೈತ್ರಾನುಸಂಧಾನವನ್ನು ಮಾಡಿದರು. ಆ ಒಂದು ವರ್ಷ ಪೂರ್ತಿ. ದೇವಸ್ಥಾನದ ಕೈಂಕರ್ಯಗಳನ್ನೆಲ್ಲಾ ಬದಿಗೊತ್ತಿ, ದೇವ ಸ್ಥಾನದ ವಿಶಾಲವಾದ ಮಂಟಪದಲ್ಲಿ ಏಕಾಂತವಾಗಿ ವ್ಯಾಖ್ಯಾನವು ನಡೆದು, ಒಂದು ಆಷಾಢಮಾಸದ ಮೂಲಾನಕ್ಷತ್ರದ ಶುಭದಿನದಲ್ಲಿ ಈ ಪ್ರಬಂಧದ 'ತಾತ್ಪರ್ಯಮುರ್ಪೈ' ನೆರವೇರಿಸಲು ನಿಶ್ಚಯಿಸಲ್ಪಟ್ಟಿತು. ಪ್ರವಚನಕಾರರಿಗೆ ಶ್ರೋತೃಗಳೆಲ್ಲರೂ ತಮ್ಮ ಗೌರವ ಸಲ್ಲಿಸುತ್ತಿರುವಾಗ ಆ ಗೋಷ್ಠಿಯ ಮಧ್ಯದಲ್ಲಿ ಶ್ರೀ ರಂಗನಾಥನು ಚಿಕ್ಕ ಬಾಲಕನಾಗಿ ಬಂದು ನಿಂತು:

"ಶ್ರೀಶೈಲೇಶ ದಯಾಪಾತ್ರಂ ಧೀಭಕ್ತ್ಯಾದಿಗುಣಾರ್ಣವಮ್
ಯತೀಂದ್ರಪ್ರವಣಂ ವನ್ದೇ ರಮ್ಯಜಾಮಾತರಂ ಮುನಿಮ್"

ಎಂದು ತೈ ಮಡಿಗಿದುಕೊಂಡು ನಿಂತು ಸ್ವಲ್ಪ ಗಮಯದಲ್ಲಿಯೇ ಅದೃಶ್ಯ ನಾದನು

ಈ ಚಮತ್ಕಾರವನ್ನು ಮಾಮುನಿಗಳ ಶಿಷ್ಯರುಗಳಾದ ಅನ್ಬಿಲ್ಲೈ ಜೀಯರ್ ಎಂದು ಪ್ರಸಿದ್ಧರಾದವರು, ಸಂಸ್ಕೃತ-ದ್ರಾವಿಡ ಭಾಷೆಗಳಲ್ಲಿ ಶ್ಲೋಕರೂಪವಾಗಿ ಸ್ತುತಿಸಿರುತ್ತಾರೆ. ಆ ದಿನದಿಂದ ಶ್ರೀ ರಂಗನಾಥನ ಆಜ್ಞಾನುಸಾರವಾಗಿ ದಿವ್ಯದೇಶಗಳಲ್ಲಿಯೂ, ದೇವಸ್ಥಾನಗಳಲ್ಲಿಯೂ, ಮಠ ಗಳಲ್ಲಿಯೂ, ಗೃಹಗಳಲ್ಲಿಯೂ ದಿವ್ಯಪ್ರಬಂಧಗಳನ್ನು ಪ್ರಾರಂಭಿಸುವಾಗ ಮತ್ತು 'ತಾತ್ಪರ್ಯಮುರ್ಪೈ' ಸಮಯದಲ್ಲಿ ಈ ಕನಿಯನನ್ನು (ಧ್ಯಾನಶ್ಲೋಕ) ತಪ್ಪದೇ ಹೇಳುತ್ತಾರೆ.

ಶ್ರೀವೈಷ್ಣವ ಗುರುಪರಂಪರೆಯಲ್ಲಿ ಪರಮಾಚಾರ್ಯಸನ್ನಿಧಿಗಳಾದ, ಶ್ರೀ ಪಿಳ್ಳೈ-ಲೋಕಾಚಾರ್ಯರು ರಚಿಸಿರುವ 'ಅಷ್ಟಾದಶ ರಹಸ್ಯ' 'ತತ್ತ್ವತ್ರಯ' ಮತ್ತು 'ಶ್ರೀವಚನ ಭೂಷಣ' ವೆನ್ನುವ ಕೃತಿಗಳಿಗೆ ಇವರ ವಿಮರ್ಶಾತ್ಮಕವಾದ ವ್ಯಾಖ್ಯಾನವು ಅನುಪಮವಾಗಿದೆ. ಮಾಮುನಿಗಳಿಗೆ 'ವರದವಾಕ್ ಶಿರೋಮಣಿ' ಎಂಬ ಬಿರುದು ಯುಕ್ತವೇ ಆಗಿದೆ. ಇವರ ಶಬ್ದ ಪ್ರಯೋಗ, ಉಕ್ತಿಚಾತುರ್ಯ ಇತರರಲ್ಲಿ ಕಾಣುವುದು ದುರ್ಲಭ. ಇವರು ಅತ್ಯಂತ ನಾಸ್ತಿಕರಾಗಿದ್ದರು. ಇವರ ಪ್ರತಿಯೊಂದು ಕೃತಿಯಲ್ಲೂ ಈ ವೈಶಿಷ್ಟ್ಯ ನಮಗೆ ಕಂಡುಬರುತ್ತವೆ.

ನಾನಾಶಾಸ್ತ್ರಗಳನ್ನು ಹೃದಯಂಗಮ ಮಾಡಿಕೊಂಡು ತತ್ತ್ವಾರ್ಥಗಳನ್ನು ವಿವರಿಸುವ ಸೊಬಗು ಮಧ್ವಾದಿ ಆಚಾರ್ಯರಲ್ಲೂ ಕಾಣಸಿಗುವುದಿಲ್ಲ. ವಿಮರ್ಶನ ಶಕ್ತಿ, ನಿರೂಪಣಾ ನೈಪುಣ್ಯ, ಚಾತುರ್ಯಗಳು ಇವರ ವ್ಯಾಖ್ಯಾನಗಳಲ್ಲಿ ವ್ಯಕ್ತವಾಗುತ್ತವೆ.

'ಅಬ್ಧಿರ್ಲಂಘಿತ ಏವ ವಾನರ ಭಟೈಃ....' ಎಂದು 'ಮುರಾರಿ' ಎನ್ನುವ ಮಹಾಕವಿ ಹೇಳಿರುತ್ತಾನೆ. ವಾನರವೀರರು ಸಮುದ್ರವನ್ನು ದಾಟಿ ಆ ಕಡೆಗೆ ತಲುಪಿದರೂ, ಅವರುಗಳು ಸಮುದ್ರದ ಆಳವನ್ನು ಸ್ವಲ್ಪ ಮಾತ್ರವೂ ತಿಳಿಯಲಾಗದವರಾದರು. ಸಮುದ್ರದ ಆಳದವರೆಗೆ ಅಂದರೆ ಪಾತಾಳದವರೆಗೆ ಅದುಮುಳ್ಳುಟ್ಟ ಮಂಧರ ಪರ್ವತಕ್ಕಲ್ಲವೇ ಆ ಆಳ ತಿಳಿದಿರುತ್ತೆ! ಆಚಾರ್ಯರೆಂಬ ನುಡಿಗೆ ಮಣವಾಳ ಮಾಮುನಿಗಳು ಒಬ್ಬರೇ ತಕ್ಕವರಾಗಿರುವರೆಂದೂ, 'ಸೂಕ್ತಿ' 'ಶ್ರೀಸೂಕ್ತಿ' 'ದಿವ್ಯ ಸೂಕ್ತಿ' ಎಂದು ಹೇಳಲ್ಪಡಲು ಯೋಗ್ಯವಾದ ನುಡಿಗೆಲ್ಲಾ ಇವರ ಅಮೃತವಾಣಿಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಲು ತಕ್ಕುದಾಗಿದೆ ಎಂಬುದೂ ನಿಷ್ಪಕ್ಷ ಪಾತವಾಗಿ ವಿಮರ್ಶಿಸಿ ಹೇಳಿರುವವರ ಸಿದ್ಧಾಂತ.

ಶ್ರೀ ಭಗವದ್ರಾಮಾನುಜರು ತಮ್ಮ ಶ್ರೀವೈಕುಂಠಗದ್ಯದಲ್ಲಿ "ಅಮೃತ ಸಾಗರಾಂತರ್ನಿಮಗ್ನ ಸರ್ವಾವಯವಃ ಸುಖಮಾಸೀತ" ಎಂದು ಅನುಗ್ರಹಿಸಿರುತ್ತಾರೆ. ಸರ್ವಾವಯವಗಳೂ ಶ್ರೀಮತ್ಸಾಗರದಲ್ಲಿ ನಿಮಜ್ಜಿತವಾಗಿರಬೇಕೆಂಬುದೇ ಇದರ ಅರ್ಥ. ಮಣವಾಳ ಮಾಮುನಿಗಳ ಶ್ರೀಸೂಕ್ತಿಗಳು "ಉಳ್ಳಂಬೋರುಂ ತಿಕ್ಕ್ಮುವ್ವಾ" ಎನ್ನುವಂತಿದೆ.

ಮಾಮುನಿಗಳ "ತಿರುವಾಯ್ ಮೊಳಿ. ನೂತ್ತಂದಾದಿ"ಗೆ ತನಿಯನ್ ರಚಿಸುವಾಗ ಆಚಾರ್ಯರು "ಅಟ್ಟುಮ್ ಪಹಲುಮ್ ಅನುಭವಿ ಪ್ಪಾರ್ ತಂಗಳುಕ್ಕು ಕೊಲ್ಲುಮ್ ಪೊರುಳುಮ್ ತೊಹುತ್ತುರ್ರೈತ್ತಾನ್ ನಲ್ಲ ಮಣವಾಳ ಮಾಮುನಿವನ್" ಎನ್ನುತ್ತಾರೆ.

ರಾಮಾನುಜಾಚಾರ್ಯರ ಗೀತಾಭಾಷ್ಯಕ್ಕೆ ಅನೇಕ ಆಚಾರ್ಯರು ವ್ಯಾಖ್ಯಾನಗಳನ್ನು ರಚಿಸಿದ್ದರೂ ಸಹ, ಶಾಸ್ತ್ರಾರ್ಥ-ನಿಷ್ಕರ್ಷೆ ಮಾಡಲು ರಹಸ್ಯ ಗ್ರಂಥಗಳಿಗೆ ವಿವರ್ಶಾತ್ಮಕವಾದ ವ್ಯಾಖ್ಯಾನವನ್ನು ಮಣವಾಳ ಮಾಮುನಿಗಳು ಮಾಡಿರುವ ರೀತಿಯೇ ಬೇರೆ. ಇತರ ಆಚಾರ್ಯರುಗಳ ಸರಣಿಯೇ ಬೇರೆ. ಇವರ ಸಂಕ್ತಿಗಳಲ್ಲಿ ಯಾವ ಪ್ರಭಂದದಲ್ಲಿ ನೋಡಿದರೂ "ತೇನುಮ್ ಪಾಲುಮ್ ನೆಯ್ಯುಮ್ ಕನ್ನಲುಮಮುದುಮೊತ್ತ್ರೇ" ಇದೆಯಲ್ಲದೇ ಸಾಧಾರಣಪ್ರತಿಗಳಲ್ಲಿ ಯಾವುದೂ ಇಲ್ಲ. ಸೂತ್ರದಂತಿರುವ ಜೂರ್ಣಿಕೆಗಳಿಗೆ ಅವತಾರಿಕೆಗಳನ್ನು ಹೇಳುವ ಸೌಂದರ್ಯವೇ ಅತಿ ವಿಲಕ್ಷಣವಾಗಿದೆ. ಮುಂದಮತಿಗಳಿಗೂ ಮೂಲದಲ್ಲಿ ತೋರುವ ಸಂದೇಹಗಳನ್ನು ಪರಿಹರಿಸುವುದೂ, ಪುರಾಪೋಧಾವಿಗಳಿಗೂ ತೋಚದಿರುವ ಅಶಂಕೆಗಳನ್ನು ಲೀಲಾಜಾಲವಾಗಿ ಪರಿಹರಿಸಿರುವುದೂ, ಸಕಲ ಇತಿಹಾಸ-ಪುರಾಣಗಳಿಂದಲೂ, ಶ್ರೀಭಾಷ್ಯ, ಶ್ರುತಿ ಪ್ರಕಾಶಿಕಾ, ಸಾಂಖ್ಯ, ಬೌದ್ಧ, ಯಾದವಪ್ರಕಾಶಾದಿ ಗ್ರಂಥಗಳಿಂದಲೂ ಅಹಿರ್ಬುಧ್ನ್ಯ ಸಂಹಿತೆ, ವಿಷ್ವಕ್ಸೇನ ಸಂಹಿತೆ, ವಿಹಗೇಂದ್ರ ಸಂಹಿತೆ, ಲಕ್ಷ್ಮೀತಂತ್ರ ಮುಂತಾದ ಅನೇಕ ಸಂಹಿತೆಗಳಿಂದಲೂ ಪ್ರಮಾಣವಚನಗಳನ್ನು ಉಪರಿಮಿತವಾಗಿ ತೋರಿಸಿರುವುದೂ ಅತ್ಯದ್ಭುತವಾದ ಕಾರ್ಯವೇ ಆಗಿರುತ್ತದೆ.

ಆ ಕಾಲದಲ್ಲಿಯೂ ಇಂತಹ ಅಮೂಲ್ಯ ಸದ್ಗ್ರಂಥಗಳು ಮಾಮುನಿಗಳಿಗೆ ಹೇಗೆ ತಾನೇ ದೊರೆತುವೋ ಆಶ್ಚರ್ಯ! ಇವರು ವಿವರ್ಶಿಸಿರುವ ವ್ಯಾಖ್ಯಾನಗ್ರಂಥಗಳಲ್ಲಿ ಉದಾಹರಿಸಿರುವ ವಚನಗಳ ಸಂಖ್ಯೆ ಅಸಂಖ್ಯೇಯ. ಸಂಸ್ಕೃತ, ದ್ರಾವಿಡ ಗ್ರಂಥಗಳಿಂದ ಅನೇಕ ವಿಚಾರಗಳನ್ನು ಉದಹರಿಸಿರುವ ವಿಷಯವನ್ನು ಅಲ್ಲಲ್ಲಿಯೇ ಸ್ಪಷ್ಟಪಡಿಸಿರುತ್ತಾರೆ. ಅವುಗಳ ಸಂಖ್ಯೆ:

1. ಮುಮುಕ್ಷುಬ್ಧಿ ಎನ್ನುವ ತಿರುಮಂತ್ರ ವ್ಯಾಖ್ಯಾನದಲ್ಲಿ ತೋರಿಸಿರುವ ಪ್ರಮಾಣ ವಚನಗಳ ಸಂಖ್ಯೆ ... 189.

2. ತತ್ವತ್ರಯದ ವ್ಯಾಖ್ಯಾನದಲ್ಲಿ " 542

3. ಶ್ರೀವಚನಭೂಷಣದಲ್ಲಿ " 498

4. ಆಚಾರ್ಯ-ಹೃದಯದಲ್ಲಿ " 555

ಇವುಗಳಲ್ಲದೇ ಸಂಸ್ಕೃತಗ್ರಂಥಗಳಿಂದ ಉದಾಹರಿಸಲ್ಪಟ್ಟ ಮಾಮುನಿಗಳ ವ್ಯಾಖ್ಯಾನದಲ್ಲಿ 177ನ. ಈ ರೀತಿ ಈ ಮಹಾನುಭಾವರು ಪ್ರಮಾಣವಾಗಿ ತೋರಿಸಿರುವ ವಿಷಯಗಳನ್ನು ಸತ್ಯವಾಗಿ ನಿರೂಪಿಸಿರುತ್ತಾರೆ. ಇದಲ್ಲದೇ ಆಚಾರ್ಯರುಗಳ ಶ್ರೀಸೂಕ್ತಿಯಿಂದ ಉದಾಹರಿಸಿದ್ದರೆ ಅದನ್ನು ಸ್ಪಷ್ಟಪಡಿಸುವುದರಿಂದಲೂ ಈ ಅರುನೂರು ವರ್ಷಗಳಿಂದ ಅವರನ್ನು "ಪೊಯ್ಯಾದ ಮಣವಾಳ ಮಾಮುನಿ ಪುಂದಿವಾಳ." ಎನ್ನುವ ನಾಣ್ಣುಡಿ ಬಳಕೆಗೆ ಬಂದಿರುತ್ತೆ. ಇವರ ಕೃತಿಗಳಲ್ಲಿ ಅನೇಕ ಆಚಾರ್ಯರ ಪ್ರಸ್ತಾಪವಿದೆ ಎನ್ನುವುದು ಸುಲಭವಾಗಿ ತಿಳಿಯುವುದು. ಪ್ರಮಾಣಗಳನ್ನು ಉದಾಹರಿಸುವ ಪ್ರತಿಸ್ಥಳದಲ್ಲಿಯೂ ವಿವರಗಳನ್ನು ನೀಡಿರುತ್ತಾರೆ. ಸಕಲ ಶಾಸ್ತ್ರಗಳನ್ನೂ ಅವಗಾಹಿಸಿರುವವರು ಮಾಮುನಿಗಳೊಬ್ಬರೇ ಎಂಬುದನ್ನು ನಿರ್ವಿವಾದವಾಗಿ ಹೇಳಬಹುದು. "ನೂರ್‌ಕಡಲ್ ಹಳ್ ಎಲ್ಲಾವತ್ತ್ರೈಯುಂ ಕರ್ಕ್ಕಂಡವರ್ ಇವರ್ ಒರುವರೇ!" ಎನ್ನುವ ಬಿರುದೂ ಇವರಿಗೆ ಸಾರ್ಥಕವಾಗಿಯೇ ಇದೆ. ಚತುಃಶಾಸ್ತ್ರಗಳನ್ನೂ ಓದಿ "ಚತುಸ್ಸಂತ್ರ-ಸಾರಾವಾರ ಹಾರೀತ!" ಎನ್ನುವ ಬಿರುದೂ "ಅಬ್ಧಿರ್ ಲಂಘಿತ ಏವ" ಎನ್ನುವ ರೀತಿಯಲ್ಲಿ ವಿಷಯಗಳ ಕಿರಿಮೆ-ಹಿರಿಮೆಗಳನ್ನು ನೋಡದೇ ಪ್ರತಿಯೊಂದು ಪದವನ್ನೂ ಪರಿಶೀಲಿಸಿರುವುದನ್ನೂ ಮಾಮುನಿಗಳ ವ್ಯಾಖ್ಯಾನದಲ್ಲಲ್ಲದೇ ಬೇರೆಲ್ಲಿಯೂ ಕಾಣಲಾಗುವುದಿಲ್ಲ.

ಶಿವಾ ಬಹುನಾ! ನಾವೆಮ್ಮಾಹ್ಯಕ್ಕೆ ದ್ರಾವಿಡ ಭಾಷೆಯಲ್ಲಿ ರಚಿಸಿರುವ ಗ್ರಂಥಗಳಾದರೂ, ಸಕಲ ಶಾಸ್ತ್ರಾರ್ಥಸಾರಸಂಗ್ರಹವಾಗಿ ಪ್ರಕಾಶಿಸುವ ಈ ದಿವ್ಯ ಶ್ರೀಸೂಕ್ತಿಗಳು ಆರ್ಷಾವಿಗ್ರಹದಂತೆ ಪ್ರತಿದಿನ ಅರಾಧಿಸಿ ಅನುಸಂಧಾನ ಮಾಡಲು ಯೋಗ್ಯವಾಗಿವೆ!

ಲೋಕಸಂರಕ್ಷಣಾರ್ಥವಾಗಿ ವಿಭವಾವತಾರದಲ್ಲಿ ಶ್ರೀ ರಾಮಚಂದ್ರನಾಗಿ ಅವತರಿಸಿದ ಸಮಯದಲ್ಲಿ ವಿಶ್ವಾಮಿತ್ರಮುನಿ, ಋಗ್ವೇದ, ಸಮುದ್ರರಾಜ ಮುಂತಾದವರಿಗೆ ಭಗವಂತನು ವಿನಯವನ್ನು ತೋರಿಸಿದನು! ಶಕ್ತಾನಂದರಿಂದ ವಿಶ್ವಾಮಿತ್ರರ ಚರಿತ್ರೆಯನ್ನು ಕೇಳಿದ ನಂತರ ರಾಜಸರೂ ತಾಮಸರೂ ಇವತ್ತಿನವರೆಗೂ ತಾನು "ಕಂಚಿದ್ಗೌ ಸಮುಪಸ್ಥಿತೌ, ಉಚ್ಚಾವಚಪದಂ ಯಚ್ಛೇಚ್ಛ್ರವಃ" ಎಂದಿದ್ದು ತಪ್ಪು ಎಂದು ವ್ಯಥಿತನಾದನು!

ಹೀಗೆ ವಿಭವಾವತಾರದಲ್ಲಿ ಮೊರೆಯಿಡಿ ಇದ್ದ ಸಂತೃಪ್ತಿಯನ್ನು ಅರ್ಚಾವತಾರದಲ್ಲಿಯಾದರೂ ತನ್ನ ಮನಸ್ಸಿಗೆ ಸಂತೋಷಪಡಿಸಿಕೊಳ್ಳಲು ಮಾಡುವ ಸದಾಚಾರ್ಯ ಸಮಾಶ್ರಯಣವನ್ನು ಪಡೆದು ಬಾಳಬೇಕೆಂದು ಇಚ್ಛಿಸಿ, ಅರ್ಚಾರೂಪಿಯಾದ ಅಳಗಿಯ ಮಣವಾಳನನ್ನು (ಶ್ರೀರಂಗನಾಥನು) ಆಚಾರ್ಯತ್ವ ಪೂರ್ಣಯುಕ್ತ ಮಣವಾಳ ಮಾಮುನಿಗಳ ಹತ್ತಿರ ಶಿಷ್ಯವೃತ್ತಿಯನ್ನು ಅನುಸರಿಸಿದನು!

ಮಣವಾಳ ಮಾಮುನಿಗಳ ಶ್ರೀಸೂಕ್ತಿಗಳ ವಿವರಣೆ

ಪ್ರಪಂಚದಲ್ಲಿ ಅನೇಕ ಆಚಾರ್ಯರುಗಳ ಶ್ರೀಸೂಕ್ತಿಗಳಿದ್ದರೂ, ಮಣವಾಳ ಮಾಮುನಿಗಳ ದಿವ್ಯ ಶ್ರೀಸೂಕ್ತಿಗಳ ಮಾಧುರ್ಯವೂ, ಗಾಂಭೀರ್ಯವೂ ಅರ್ಥಪುಷ್ಟಿಯೂ ಅತ್ಯದ್ಭುತವಾಗಿದೆ. "ನಾಮೂಲಮಪಿ ಲಿಖ್ಯತೇ ಕಿಂಚಿತ್ ನಾನಪೇಕ್ಷಿತಮುಚ್ಯತೇ" ಎನ್ನುವಂತೆ ಇರುವ ವ್ಯಾಖ್ಯಾನಗಳು ಮಣವಾಳ ಮಾಮುನಿಗಳದೆಂದು ಕೇಳಿದರೆ ಏನೂ ಅತಿಶಯೋಕ್ತಿಯಾಗಲಾರದು. ಇತರ ವ್ಯಾಸಂಗ ಪ್ರವೃತ್ತಿ "ಸ್ಥಿತೇರವಿಂದೇ ಮಕರಂದಸಿಧ್ಧರೇ ಮಧುವ್ರತೋನೇಕ್ಷುರಕಂ ಹಿ ವೀಕ್ಷತೇ" ಎನ್ನುವ ಬಳವಂದಾರ್ ಆವರೆ ಶ್ರೀಸೂಕ್ತಿಯನ್ನು ಸ್ವರ್ಣಕ್ಕೆ ತರುವ್ಯವಾಗಿದೆ. ಇತರರ ಗ್ರಂಥವನ್ನು ನೋಡುವಾಗ ಅವರವರ ಜ್ಞಾನವನ್ನು ತಿಳಿದುಕೊಳ್ಳಬಹುದು. ಆದರೆ ಮಾಮುನಿಗಳ ವ್ಯಾಖ್ಯಾನವನ್ನು ಅನುಭವಿಸುವಾಗ ಶ್ರೀರಾಮಚಂದ್ರನು ಹನುಮಂತನನ್ನು ಕುರಿತು ಹೇಳಿದ "ನಾನೃಗ್ವೇದ ವಿನೀತಸ್ಯ ನಾಯಜುರ್ವೇದ ಧಾರಿಣಃ| ನಾನಾವಾವೇದವಿದುಷಃ ಶಕ್ಯಮೇವಮ್ ಪ್ರಭಾಷಿತುಮ್" ಮುಂತಾದ ವಾಲ್ಮೀಕಿಮುನಿಯ ವಾಕ್ಯಗಳೇ ನೆನಪಿಗೆ ಬರುತ್ತವೆ.

ವೈಷ್ಣವದರ್ಶನದ ಆಚಾರ್ಯರುಗಳಲ್ಲಿ ಸಂಸ್ಕೃತ-ದ್ರಾವಿಡ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದವರು ಸುಮಾರು ಇಪ್ಪತ್ತು ಆಚಾರ್ಯರುಗಳು ಆಗಿದ್ದಾರೆ. ಮಾಮುನಿಗಳು ತಾವು ರಚಿಸಿರುವ ಅರ್ಚಿರಾದಿ ಪ್ರಬಂಧದಲ್ಲಿ "ಪಂಡುಪಲವಾರಿಯರುಂ ಪಾರುಲಗೋರುಯ್ಯ ಪದಿವುಡನೇ ಶೆಯ್ದ ರುಳುವಂ ಪಲಕಲೈಪಲ್ಲಾ ಪನ್ನ್ರಿ| ಕಂಡವೆಲ್ಲಾಮೆಳುದಿಯವೈ ಕತ್ತಿರುಂದುಂ ಪಿರವಾ ಕಾದಲುಡನೆ ಕರ್ಪಿಪ್ಪವರ್ ಕಾಲತ್ತೈ ಕಳೆತ್ತೀರ್ ||" ಎಂದು ತಾನೇ ಹೇಳಿದಂತೆ ಪೂರ್ವಾಚಾರ್ಯರುಗಳ ಸ್ಮರಣಾವಾಣಿಯನ್ನು ಪ್ರವಚನ ಮಾಡುತ್ತಾ ಕಲಿಯುಗವನ್ನೂ ಕೃತಯುಗವನ್ನಾಗಿ ಮಾಡಿ ಈ ಪ್ರಪಂಚದಲ್ಲಿ 79 ವರ್ಷ ಬಾಳಿ 'ನಲಮಂದಮಿಲ್ಲದೋರ್ ನಾಡು ಪುಗುಂದರ್' ಎಂದು ಅಂದಂತಾಯಿತು.

ಅರ್ಚಿರಾದಿ ಪ್ರಬಂಧದಲ್ಲಿ :

ತೆನ್ನರಂಗರ್ ತೀರರುಳುಕ್ಕಿಲಕ್ಕಾಹ ಪ್ಪೆತ್ತೋವುಂ
ತಿರುವರಂಗನ್ ತಿರುಪ್ಪತಿಯೇ ಇರುಪ್ಪಾಹ ಪ್ಪೆತ್ತೋವುಂ
ಮುನ್ನಿಯ ತೀರ್ ವಾರ್ಕಡಲೈ ಉಣವಾದ ಪ್ಪೆತ್ತೋವುಂ
ವಂಧುರಕವಿ ಶೊರ್ಪಡಿಯೇ ನಿಲೈಯಾಹ ಪ್ಪೆತ್ತೋವುಂ
ಮುನ್ನಿವಧಾಂ ನಮ್ಮ ಕುರವರ್ ಮೊಳಿಗಳುಳ್ಳ ಪ್ಪೆತ್ತೋವುಂ
ಮುಳುದುಂ ನಮುಕ್ಕವೈ ಪೊಳುದುಪೋಕ್ಕಾಗ ಪ್ಪೆತ್ತೋವುಂ
ಪಿನ್ನ್ರ ಒನ್ರುದನಿಲ್ ನೆಂಜು ಪೇರಾಮಲ್ ಪ್ಪೆತ್ತೋವುಂ
ಪಿರಿವ್ ಮಿನುಮ್ಕ್ಕೆವುಂ ಪೊರಾವೆಯ್ಯಿಲ್ಲಾ ಪೆರುಮ್ಮೈಯ್ಯಿ
ಪ್ಪೆತ್ತೋವುಮೇ

ಈ ಸಾಲುಗಳನ್ನು ಹೃದಯಂಗಮ ಮಾಡಿಕೊಳ್ಳಬೇಕಾದ್ದು ಅವಶ್ಯಕ.

ಜೀಯರ್ ತಿರುವಡಿಗಳೇ ಶರಣಂ.

ಮಣವಾಳ ಮಾಮುನಿಹಳ್ ತಿರುವಡಿಗಳೇ ಶರಣಂ

ಮಂಗಳಾಶಾಸನಸ್ತೋತ್ರಮ್

ಶ್ರೀಶೈಲೇಶೇತಿ ಮಂತ್ರಸ್ಥ ವರ್ಣಾನುಕ್ರಮ ಶೋಭಿತಮ್ ।
ವಚ್ಮಿ ನಿಷ್ಕ್ರಮ್ಯ ಸೋಹಾರಿ ವರಯೋಗೀಂದ್ರ ಮಂಗಲಮ್ ॥

"ಶ್ರೀಶೈಲೇಶ ದಯಾಪಾತ್ರಂ" ಶನಿಯುನ್ನಲ್ಲಿರುವ ಅಕ್ಷರಗಳನ್ನು ಮೊದಲನೇ ಅಕ್ಷರವನ್ನಾಗಟ್ಟುಕೊಂಡು ರಚಿಸಲ್ಪಟ್ಟ ಮಣವಾಳ ಮಾಮುನಿಗಳ ಮಂಗಳಾಶಾಸನ ಸ್ತುತಿ.

ಶ್ರೀಶಶಾರಿಯುತೀಶಾನ-ಶ್ರೀಸೂಕ್ತ್ಯೈಕ ಮೃತಜಾಯಿನೇ ।
ಶ್ರೀಮತ್ಸುಂದರಜಾನೂಶ್ಯ ಮುನೀಂದ್ರಾಯಾಸ್ತು ಮಂಗಲಮ್ ॥೧

ನಮ್ಮಾಳ್ವಾರ್, ಭಗವದ್ರಾಮಾನುಜರ ಶ್ರೀಸೂಕ್ತಿಗಳೆಂಬ ಅಮೃತವನ್ನೇ ಪಾನಮಾಡುವವರಾದ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಕೃಶವಾಕ್ಕೃಷ್ಣ ಶ್ರೀಮನ್ನಾರಾಯಣಗುಣಾಂಬುಧೌ ।
ನಿಮಗ್ನಹೃದಯೋಯಾಸ್ತು ಮುನಿನಿರ್ಯಾಯ ಮಂಗಲಮ್ ॥೨॥

ಬಾಲ್ಯದಿಂದಲೇ ಶ್ರೀಮನ್ನಾರಾಯಣಗುಣವೆಂಬ ಸಾಗರದಲ್ಲಿ ಮುಳುಗಿರುವ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಲೇಖನೇ ವಿಶದವ್ಯಾಖ್ಯಾನಿಬಂಧಾನಾಂ ಪಟೀಯಸೇ ।
ಲೀಲಿಹಾನೇಂದ್ರಯೋಷಾಯ ಮುನೀಂದ್ರಾಯಾಸ್ತು ಮಂಗಲಮ್ ॥

ವಿವರವಾದ ಮತ್ತು ಸ್ಪಷ್ಟವಾದ ವ್ಯಾಖ್ಯಾನಗಳನ್ನು ಅನುಗ್ರಹಿಸುವುದರಲ್ಲಿ ಸಮರ್ಥರಾದ, ಆದಿಶೇಷಾವತಾರರಾದ ಮಾಮುನಿಗಳಿಗೆ ಜಯವಾಗಲಿ.

ಕಠಾರಿ-ಪರಕಾಲಾದಿ-ದಿವ್ಯಸೂರಿ-ಸುಧೋಕ್ತಿಭಿಃ ।
ಸೌರಭಾಂಜಿತಪಕ್ಷ್ಮಾಯ ಸೌಮ್ಯಾಚಾರ್ಯಾಯ ಮಂಗಲಮ್ ॥೪

ಶ್ರೀ ನಮ್ಮಾಳ್ವಾರ್, ತಿರುಮಂಗೈ ಆಳ್ವಾರ್ ಮೊದಲಾದ ಆಳ್ವಾರುಗಳ ದಿವ್ಯಪ್ರಬಂಧಗಳ ಪರಿಮಳವನ್ನು ಹೊರಸೂಸುವಂತಹ ಸಿರಸುಡಿಗಳನ್ನು ಅನುಗ್ರಹಿಸಿರುವ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ದಯಾಪಾಲಮುನೀಂದ್ರೋಕ್ತ-ದಿವ್ಯಗ್ರಂಥಾರ್ಥವರ್ಷಿಣೇ ।
ಜಯಾಬ್ಧಯೇ ಮುನೀಂದ್ರಾಯ ಶಾಂತಕೃತೇ ಶುಭಾತ್ಮನೇ ಮಂಗಲಮ್

ಅದುರಾಳ ಪ್ಪೆರುಮಾಳ್ ಎಂಬೆದುಮಾನಾರ್ ಅವರು ಅನುಗ್ರಹಿಸಿರುವ (ಜ್ಞಾನಸಾರ, ಪ್ರಮೇಯಸಾರ ಇತ್ಯಾದಿ) ಗ್ರಂಥಗಳನ್ನು ವ್ಯಾಖ್ಯಾನ ಮಾಡಿರುವ, ವಿಶೇಷ ಮಹಿಮೆಯುಳ್ಳ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಯಾತಾಯಾತ ಶ್ರಮಂ ಘೋರಸಂಸಾರಮರುಕಾನನೇ ।
ಲಂಘತೇ ರಮ್ಯಜಾಮಾತೃಮುನಿವರ್ಯಾಯ ಮಂಗಲಮ್ ॥೫॥

ಜನನಮರಣಕ್ಕೆಡೆಕೊಡುವ ಸಂಸಾರವೆಂಬ ಬೆಂಗಾಡಿನಲ್ಲಿ ನಾವು ತೊಳಲಾಡುವುದನ್ನು ತಪ್ಪಿಸುವ ಮಣವಾಳಮಾಮುನಿಗಳಿಗೆ ಜಯವಾಗಲಿ.

ಸಾದಾಬ್ಜ ಶ್ರವಣಾನ್ನಿತ್ಯಂ ಪಾದಾಂಭೋರುಹಸಾಧನಾ ।
ಪುನತೇ ಪುಣ್ಯಯುಕ್ತೇ ಪೂಜ್ಯಶ್ರೀಶಾಯ ಮಂಗಲಮ್ ॥೬॥

ಚರಣಾರವಿಂದಗಳಲ್ಲಿ ಆಶ್ರಯಿಸಿದವರಿಗೆ ನಿತ್ಯವೂ ಶ್ರೀಪಾದತೀರ್ಥವನ್ನು ಕೊಟ್ಟು, ಅನುಗ್ರಹಿಸಿ, ಉದ್ಧಾರಮಾಡಿದ ಮಾಮುನಿಗಳಿಗೆ ಜಯವಾಗಲಿ.

ಶ್ರಯ್ಯಂಕಾರ್ಥಾನಶೇಷೇಣ ತಚ್ಛ್ರುತ್ಯಶ್ರಿತಯಟೀಕಯಾ ।
ವಿವೃಣ್ವತೇ ಮುನೀಂದ್ರಾಯ ಮಹತೇ ನಿತ್ಯಮಂಗಲಮ್ ॥೭॥

ತಚ್ಛ್ರುತ್ಯ ವ್ಯಾಖ್ಯಾನ ಮೊದಲಾದ ವೇದಾಂತಾರ್ಥಗಳನ್ನು ವಿವರಿಸಿ ಅನುಗ್ರಹಿಸಿದ ಮಹಾಮುನೀಂದ್ರರಿಗೆ ಜಯವಾಗಲಿ.

ಧೀಮದ್ಭಿರ್ವರದಾರ್ಯಾದಿಗುರುಭಿಸ್ಸೇವಿತಾಂಘ್ರಯೇ ।
ಧೀರಾಯ ರಮ್ಯಜಾವಾತೃಮುನೀಂದ್ರಾಯಾಸ್ತು ಮಂಗಲಮ್ ॥

ಕೋಯಿಲಾಂಡಾನ್ ಮೊದಲಾದ ಹಿರಿಯರು ಆಶ್ರಯಿಸಿರುವಂತಹ ಮಹಾಧೀರರಾದ ರಮ್ಯಜಾವಮಾತೃಮುನೀಂದ್ರರಿಗೆ ಜಯವಾಗಲಿ.

ಭಯಂ ಭವಾಬ್ಧಿಮಗ್ನಾನಾಂ ಸಮುನ್ಮೂಲಯತೇ ಸತಾಮ್ ।
ಭವ್ಯಾಯ ರಮ್ಯಜಾವಮಾತೃಮುನಯೇ ನಿತ್ಯಮಂಗಲಮ್ ॥೧೦॥

ಸಂಸಾರ ಸಾಗರದಲ್ಲಿ ಮುಳುಗಿರುವವರ ಭಯವನ್ನು ಸಂಪೂರ್ಣವಾಗಿ ಕೊಲಗಿಸುವ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಯಾತನಾಂ ನರಕೇಽಕಸ್ಮಾತ್ಕಂ ಯಃ ಕೃಪಾಂಬುಧಿರಚ್ಛಿನತ್ ।
ಯತೀಂದ್ರಪ್ರವಣಾಯಾಸ್ಮೈ ಮುನೀಂದ್ರಾಯಾಸ್ತು ಮಂಗಲಮ್

ನರಕದಲ್ಲಿ ಬಿಂಟಾಗುವಂತಹ ಯಾವ ದುಃಖವೂ ನಮಗೆ ಉಂಟಾಗದಂತೆ ದಯೆಗೈಯ್ತಿರುವ (ಮಣವಾಳ ಮಾಮುನಿ) ಯತೀಂದ್ರ ಪ್ರವಣರಿಗೆ ಜಯವಾಗಲಿ.

ದಿವ್ಯಸೂಕ್ತಿಸುಧಾಸ್ವಾದ-ಪ್ರಫುಲ್ಲಮನಸೇ ಸದಾ ।
ದಿವ್ಯಾಮಲಮುನಿಂದ್ರಾಯಾಸ್ತು ದೇಶಿಕೇಂದ್ರಾಯ ಮಂಗಲಮ್ ॥

ದಿವ್ಯಪ್ರಬಂಧವೆಂಬ ಅಮೃತವನ್ನು ಅನವರತವೂ ಪಾನಮಾಡಿ ದಿವ್ಯತೇಜಸ್ಸಿನಿಂದ ಬೆಳಗುವ ಮುನಿವರ್ಯ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಗುರೂಣಾಮಪ್ಯಶೇಷಾಣಾಮಗ್ರಗಣ್ಯಾಯ ಯೋಗಿನೇ ।
ಗುಣ್ಯಾನಾಮರ್ಥತತ್ತ್ವಾನಾಂ ನಿಧಯೇ ನಿತ್ಯಮಂಗಲಮ್ ॥೧೩॥

ಸಕಲ ಆಚಾರ್ಯರುಗಳಿಗೂ ಪ್ರಥಮನೆಂದು ಪರಿಗಣಿಸಲ್ಪಡುವಂತಹವರೂ ರಹಸ್ಯಾರ್ಥತತ್ವನಿಧಿಯೂ ಆದ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಗುಣಾನಾಮಪ್ಯನೋಯಾನಾಂ ಸಿಂಧವೇ ಭಕ್ತಬಂಧವೇ ।
ಗುರೂತ್ತಮಾಯ ಮುದತೇ ಮುನಯೇ ನಿತ್ಯಮಂಗಲಮ್ ॥೧೪॥

ಎಣಿಕೆಗೆ ಮೀರಿದ ಶುಭಗುಣಗಳಿಗೆ ಸಾಗರದ ಹಾಗೆ ಅದ್ಭುತವಾದ ಜ್ಞಾನಸಂಪತ್ತನ್ನು ಪಡೆದಿರುವ, ಆಶ್ರಿತರಿಗೆ ಉತ್ತಮ ಗುರುಗಳಾದ ಮಾಮುನಿಗಳಿಗೆ ಜಯವಾಗಲಿ.

ಅಣ್ಣಾವಾಯ ಮಹಾರ್ಥಾನಾಮೂಢ್ಯರ್ಯ-ಪದವಿಸಂಪದೇ ।
ಅಭಿರಾಮಮುನೀಂದ್ರಾಯ ಗಭೀರಾಯಾಸ್ತು ಮಂಗಲಮ್ ॥೧೫॥

ಶ್ರೇಷ್ಠವಾದ ಅರ್ಥಗಳಿಗೆ ಮಹಾಸಾಗರದ ಹಾಗೆ ಅದ್ಭುತವಾದ

ಮತ್ತು ಅಳವಾದ ಜ್ಞಾನಸಂಪತ್ತನ್ನು ಪಡೆದಿರುವ ಮಾಮುನಿಗಳಿಗೆ ಜಯವಾಗಲಿ.

ವಂದೇ ಸ್ತೌಮಿ ನಮಾಮೀತಿ ಕ್ರಿಯಾಣಾಂ ಮುಖ್ಯಲಕ್ಷ್ಮತಾ ।
ಯಸ್ಮಿನ್ನೇವ ಸಮ್ಯಗ್ವಾಽಸ್ಕ್ಯ ಯತಿಶ್ರೇಷ್ಠಾಯ ಮಂಗಲಮ್ ॥

ಗೌರವಿಸುವೆ, ನುತಿಸುವೆ, ನಮಿಸುವೆ ಎಂಬ ಕ್ರಿಯೆಗಳಿಗೆ ಮುಖ್ಯಗುರಿ ಯಾರಲ್ಲಿ ಪೂರ್ಣವೋ ಆ ಯತಿರಾಜರಿಗೆ ಮಂಗಳವಾಗಲಿ.

ಯಚ್ಚಕ್ರೇ ಶಠಜಿತ್ಸೂಕ್ತಿಸಹಸ್ರಾರ್ಥಾನ್ ಪಕೋಕ್ತಿತಃ ।
ಯತೀಂದ್ರಮತದೀಪಾಯ ಯತಿಶ್ರೇಷ್ಠಾಯ ಮಂಗಲಮ್ ॥೧೬॥

ಸೂತ್ರಂದಾಽಽದಿ (ಸೂರೇ ದ್ಲೋಕ) ಯಿಂದಲೇ ತಿರುವಾಯ್‌ಮೊಳಿ, ಸಹಸ್ರಗಾಥಾಪನ ಅರ್ಥವನ್ನು ಅನುಗ್ರಹಿಸಿರುವ ಭಗವದ್ರಾಮಾನುಜದರ್ಶನ–ಜ್ಯೋತಿ–ಪುಂಜರಾದ ಮಾಮುನಿಗಳಿಗೆ ಶುಭವಾಗಲಿ.

ತೀರ್ತ್ವಾ ಸಂಸಾರವಾರಾಶಿಂ ಸಿಸೇವಿಷುಭಿರಚ್ಯುತಮ್ ।
ಸೇವ್ಯಾಯೈ ಸೌಮ್ಯಜಾಮಾತೃಮುನೀಂದ್ರಾಯಾಸ್ತು ಮಂಗಲಮ್

ಈ ಸಂಸಾರ ಸಾಗರವನ್ನು ದಾಟಿ ಪರವಾಸುದೇವನನ್ನು ದರ್ಶನ ಮಾಡಲು ಅಪೇಕ್ಷಿಸುವವರಿಂದ ದರ್ಶನ ಮಾಡಲ್ಪಡುವ ಮಾಮುನಿಗಳಿಗೆ ಜಯವಾಗಲಿ.

ಪ್ರಪೀಭವತಿ ಯತ್ಸೂಕ್ತಿಧ್ಯಾನೇನ ಹೃದಯಂ ಸತಾಮ್ ।
ಪಾಪವಿಷಾನ್ನಾಯ ಫಾಗ್ಯಾಯ ತಸ್ಮೈ ಜ್ಞಾಜ್ಞಾಯ ಮಂಗಲಮ್

ಮಾಮುನಿಗಳ ಶ್ರೀಸೂಕ್ತಿಗಳನ್ನು ಸ್ಮರಿಸುವವರ ಮನಸ್ಸನ್ನು ಮೃದುಗೊಳಿಸುವ ಪಾಪವಿಷ, ದಿವ್ಯ ಪ್ರಬಂಧಗಳ ಭಾಗ್ಯವೇ ಮೂರ್ತ–ಸ್ವರೂಪರಾಗಿರುವ ಮಣವಾಳಮಾಮುನಿಗಳಿಗೆ ಮಂಗಳವಾಗಲಿ.

ಪ್ರಲಯೇಽಪಿ ನ ಲೀಯೇತ ಯನ್ಮಂತ್ರವಿಭವೋ ಭುವಿ ।
ತಸ್ಮೈ ಪ್ರಖ್ಯಾತಯತಯೇ ಪುಣ್ಯಶ್ಲೋಕಾಯ ಮಂಗಲಮ್ ॥೨೦॥

ಪ್ರಳಯಕಾಲದಲ್ಲಿಯೂ ನಾಶವಾಗದಂತಹ ತನಿಯನ್ [ಸ್ತುತಿ ಪದ್ಯ] ನಿಂದ ವೈಭವವನ್ನು ಪಡೆದಿರುವ, ಪ್ರಪಂಚದಲ್ಲೆಲ್ಲಾ ಪ್ರಖ್ಯಾತರಾದ ಶ್ರೀ ಮಣವಾಳ ಮಾಮುನಿಗಳಿಗೆ ಶುಭವಾಗಲಿ.

ವಚೋಭೂಷಣತತ್ಪಾರ್ಥವಿನ್ಯಸ್ತೋತ್ಪಲ್ಲಕೀರ್ತಯೇ ।
ವಿದಿತಾಶೇಷವೇದ್ಯಾಯ ವದಾನ್ಯಾಯಾಸ್ತು ಮಂಗಲಮ್ ॥೨೧॥

ಶ್ರೀವಚನ ಭೂಷಣದ ಸತ್ಪಾರ್ಥಗಳನ್ನು ತಿಳಿದು ವ್ಯಾಖ್ಯಾನಗಳನ್ನು ಅನುಗ್ರಹಿಸಿ ಪ್ರಕಂಪಿತರಾದವರೂ, ಸರ್ವಜ್ಞರೂ, ಪರಮೋದಾರರೂ ಆದ ಪೂರ್ವಮುನಿಗಳಿಗೆ ಜಯವಾಗಲಿ.

ಣಮು-ಧಾತ್ವರ್ಥನಿಷ್ಠಾ ಯದ್ಧೃದಯೇ ಸುಪ್ರತಿಷ್ಠಿತಾ ।
ಸರ್ವೋತ್ತಮಾಯ ತಸ್ಮೈ ಸ್ವಾಕಾರ್ಷ್ಟಾಂಗ್ಯಾಚಾರ್ಯಾಯ ಮಂಗಲಂ

'ಣಮು' ಧಾತುವಿನ ಅರ್ಥವಾದ ವಿನಯವೇ ಹೃದಯದಲ್ಲಿ ನೆಲೆಸಿರುವಂತಹ ಆಚಾರ್ಯಶಿರೋಮಣಿಗೆ ಜಯವಾಗಲಿ.

ವಸಿಷ್ಠಾದಿ-ಮುಖಾಯೋಗಿ-ವಚೋಭ್ಯೋಽತಿಗರೀಯಸೀಃ ।
ವಾಚೋ ದತ್ತವತೇ ಯೋಗಿವರೇಣ್ಯಾಯಾಸ್ತು ಮಂಗಲಮ್ ॥೨೩

ವಸಿಷ್ಠಾದಿ ಋಷಿಗಳ ವಾಣಿಗಿಂತಲೂ ಅತಿಶ್ರೇಷ್ಠ ಮಹಿಮೆಯುಳ್ಳ ಶ್ರೀಸೂಕ್ತಿಗಳನ್ನು ಅನುಗ್ರಹಿಸಿರುವಂತಹ ಪುಣ್ಯವಾಳ ಪೂರ್ವಮುನಿಗಳಿಗೆ ಜಯವಾಗಲಿ.

ವೇದಿಕಾನಾಮಭೇದಾನಾಮಪೀತೋಽಯಂ ನ ಸಂಶಯಃ ।
ಇತ್ಯಭಿಜ್ಞಾಭಿನಂದ್ಯಾಯ ಗುರುವರ್ಯಾಯ ಮಂಗಲಮ್ ॥೨೪॥

ಸಕಲ ಆಚಾರ್ಯರುಗಳೂ ಸೇರಿ ಇವರೊಬ್ಬರಾಗಿ ಅವತರಿಸಿರುವರೆಂದು ಮಹಾತ್ಮರುಗಳು ಹೇಳುವಂತಹ ಪುಣ್ಯವಾಳ ಪೂರ್ವಮುನಿಗಳಿಗೆ ಜಯವಾಗಲಿ.

ಕಂಥಾನ್ಯೇಷಿಜನಾನಾಮಪ್ಯವಮ್ಯೋತ್ಕೃದವೀಯಸೀಃ ।
ಸೂಕ್ತೀರ್ದತ್ತವತೇ ಸೌಮ್ಯಮುನೀಂದ್ರಾಯಾಸ್ತು ಮಂಗಲಮ್ ॥

ಯಾವ ತಪ್ಪುಗಳು ಸಿಗುತ್ತವೆ ಎಂದು ಹುಡುಕಿ ದೂಷಿಸುವುದರಲ್ಲಿಯೇ ತೊಡಗಿರುವವರಿಗೂ ಉತ್ತಮ ಶ್ರೀಸೂಕ್ತಿಗಳನ್ನು ಅನುಗ್ರಹಿಸಿರುವಂತಹ ಪೂರ್ವಮುನಿಗಳಿಗೆ ಜಯವಾಗಲಿ.

ಯತಿಪ್ರವರಶ್ರೀಮದ್ವ್ಯಾಖ್ಯಾನಶ್ರೀಸೂಕ್ತಿಪ್ರದಾಯಿನೇ ।
ಯೋತಿಶಿಷ್ಯಶ್ರೀವೇದವ್ಯಾಸಯ ಮುನಿವರ್ಯಾಯ ಮಂಗಲಮ್ ॥೨೬॥

ಶ್ರೀಭಾಷ್ಯಾರ್ಥಗಳು ತುಂಬಿರುವ ಶ್ರೀಸೂಕ್ತಿಗಳನ್ನು ಸಂತೋಧನೆ ಮಾಡಿ ನೀಡಿರುವವರೂ ವಾನಮಾಮಲೈಜೀಯರ್, ಪಟ್ಟರ್‌ಸಿರಾಸ್ ಜೀಯರ್, ತಿರುವೇಂಗಡ ರಾಮಾನುಜ ಜೀಯರ್—ಈ ಮೂವರಿಂದ ಸ್ತುತಿ ಸಲ್ಪಟ್ಟಿರುವವರೂ ಆದ ಮಾಮುನಿಗಳಿಗೆ ಜಯವಾಗಲಿ.

ಜಾಗ್ರದ್ದಶಾಯಾಮಾಕ್ಷೀಯದಿವ್ಯಮಂಗಲವಿಗ್ರಹಮ್ ।
ಪ್ರದರ್ಶಿತವಹೇ ಮಹ್ಯಂ ಪ್ರಾಜ್ಞಭೋಗ್ಯಾಯ ಮಂಗಲಮ್॥೨೭॥

ಸ್ವಪ್ನ ದಲ್ಲಿ ಮಾತ್ರವಲ್ಲದೇ ಜಾಗ್ರತಾವಸ್ಥೆಯಲ್ಲಿಯೂ ನನಗೆ ದರ್ಶನವನ್ನು ನೀಡಿರುವ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ಮಾಯಾಯಾ ದುರತ್ಯಯೇತ್ಯೇವಂ ಗೀತಾಚಾರ್ಯೋಕ್ತ ಕೀರ್ತಿತಾಮ್ ।
ಮಾಯಾಂ ಧ್ವಸ್ತವತೇ ಸದ್ಭಿರ್ಮಾನನೀಯಾಯ ಮಂಗಲಮ್ ॥

'ಮಮ ಮಾಯಾ ದುರತ್ಯಯಾ' ಎಂದು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಗೀತೆಯಲ್ಲಿ ಹೇಳಿರುವ ಮಾಯೆಯನ್ನು ನಿವೃತ್ತಿ ಮಾಡಿದ ಮಣವಾಳ ಮಾಮುನಿಗಳಿಗೆ ಶುಭವಾಗಲಿ.

ತತ್ತ್ವಾರ್ಥಂ ಸರ್ವಶಾಸ್ತ್ರಾಣಾಂ ಹಸ್ತ್ಯಾಮಲಕಸನ್ನಿಭಮ್ ।
ಅವಧಾರ್ಯೋಕ್ತವತೇ ವಿದ್ವದಗ್ರ್ಯಗಣ್ಯಾಯ ಮಂಗಲಮ್ ॥೨೯॥

ಸಕಲ ಶಾಸ್ತ್ರ ತತ್ತ್ವಾರ್ಥಗಳನ್ನೂ ಅತ್ಯಂತ ಸುಸ್ಪಷ್ಟವಾಗಿ ತಿಳಿದು ನಿಸ್ಸಂದೇಹವಾಗಿ ವಿವರಿಸಿರುವ ಮಣವಾಳ ಮಾಮುನಿಗಳಿಗೆ ಜಯವಾಗಲಿ.

ರಂಜಿತಾಶೇಷಹೃತ್ಕಾಯ ಭಂಜಿತಧ್ವಾಂತದರ್ಶಿನೇ ।
ಮಂಜುವಾಣೀವಿಲಾಸಾಯ ಮುನೀಂದ್ರಾಯಾಸ್ತು ಮಂಗಲಮ್॥

ಶ್ರುತಿಯೊಬ್ಬರೆ ಹೃದಯವನ್ನೂ ಆಕರ್ಷಿಸುವವರೂ, ಅಜ್ಞಾನಾಂಧಕಾರವನ್ನು ದೂರಗೊಳಿಸುವವರೂ, ಅತ್ಯಂತ ರಮ್ಯವಾದ ಮಧುರವಾದ ವಾಣಿಯನ್ನು ನುಡಿದವರೂ ಆದ ಮಾಮುನಿಗಳಿಗೆ ಜಯವಾಗಲಿ.

ಮುಖಪಂಕಜನಿರ್ಗಚ್ಛತ್ಪರಸೌರಭರಸೂಕ್ತಿಭಿಃ ।
ಮುಮುಕ್ಷೂನ್ ರಕ್ಷತೇ ನಿತ್ಯಂ ಮುನಿವರ್ಯಾಯ ಮಂಗಲಮ್ ॥

ಮುಖಾರವಿಂದದಿಂದ ಪ್ರವಹಿಸುವ ಮಕರಂದದೋಪಾದಿಯಲ್ಲಿ ಮಧುರವಾದ ಸಿರಿನುಡಿಗಳಿಂದ ಮುಮುಕ್ಷುಗಳನ್ನು ರಕ್ಷಿಸುವಂತಹ ಮಣವಾಳ ಮಾಮುನಿಗಳಿಗೆ ಶುಭವಾಗಲಿ.

ನಿತ್ಯಕೈಂಕರ್ಯ-ನಿಷ್ಠಾಽಽಶೇಷಾವತರಣಾತ್ಮನೇ ।
ಮುನಯೇ ರಮ್ಯಜಾಮಾತ್ರೇ ನಿತ್ಯಶ್ರೀರ್ನಿತ್ಯಮಂಗಲಮ್ ॥೩॥

ಭಗವಂತನು ಪಡೆದರೆ ಭಕ್ತಿಯಾಗಿ, ಕುಳಿತರೆ ಸಿಂಹಾಸನವಾಗಿ, ಮಲಗಿದರೆ ಹಾಸಿಗೆಯಾಗಿ ಇತ್ಯಾದಿ ನಿತ್ಯ ಕೈಂಕರ್ಯದಲ್ಲಿಯೇ ನಿರತರಾದ ತಿರುವನಂದಾಳ್ವಾನೇ ಬಂದು ಅವತರಿಸಿದಂತಹ ಮಣವಾಳ ಮಾಮುನಿಗಳಿಗೆ ಮಂಗಳವಾಗಲಿ.

ಮಂಗಳಾಶಾಸನಂ ಶ್ರೀಮದ್ವದನೋದ್ಗೀರ್ಣಗುಣೋದ್ಭವಮ್ ।
ನಿಧ್ಯಾಯತಾಂ ಸತಾಮಸ್ತು ನಿತ್ಯಶ್ರೀರ್ನಿತ್ಯಮಂಗಲಮ್ ॥

ಮಣವಾಳ ಮಾಮುನಿಗಳ ಸರ್ವಶ್ರೇಷ್ಠಗುಣಗಳನ್ನು ಪ್ರಕಟಪಡಿಸುವ ಈ ಮಂಗಳಾಶಾಸನ ಸ್ತುತಿಯನ್ನು ಸ್ಮರಿಸುವವರಿಗೆ ನಿತ್ಯಮಂಗಳ ಉಂಟಾಗುವುದೆಂದು ಫಲಶ್ರುತಿಯನ್ನು ಹೇಳಿ ಮುಗಿಸುವೆವು.

ಜೀಯರ್ ತಿರುವಡಿಗಳೇ ಶರಣಂ.

ಶ್ರೀಮತೇ ರಾಮಾನುಜಾಯ ನಮಃ

ತತ್ತ್ವತ್ರಯ

"ತತ್ತ್ವಜ್ಞಾನಾತ್ ಮೋಕ್ಷಲಾಭಃ" ಎಂದರೆ ತತ್ತ್ವಜ್ಞಾನ ಉಳ್ಳವರಿಗೇ ಮೋಕ್ಷ ಲುಂಟಾಗುತ್ತೆ. ತತ್ತ್ವ–ನಿಜವಾದ, ಜ್ಞಾನಾತ್–ತಿಳುವಳಿಕೆ ಉಳ್ಳವರಿಗೇ, ಮೋಕ್ಷಲಾಭಃ–ಪುರುಷಾರ್ಥ ಲಾಭ ಲುಂಟಾಗುತ್ತೆ. ಈ ಮೋಕ್ಷಜ್ಞಾನವನ್ನು ಕೊಡುವ ತತ್ತ್ವತ್ರಯವೆಂಬ ಮೂರು ತತ್ತ್ವಗಳ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತದ ವಿಚಾರವನ್ನು ಕುರಿತು ವಿವರಿಸಲಾಗುತ್ತೆ.

ಮುಮುಕ್ಷುವಿಗೆ ಮೋಕ್ಷವೆಂಬಾಗಲು "ಜ್ಞಾನಾತ್ ಮೋಕ್ಷಃ" ಎನ್ನುವ ವಿಯುಮುಕ್ಷನುಸಾರವಾಗಿ ತತ್ತ್ವತ್ರಯಜ್ಞಾನವೆಂಬಾಗಲೀಬೇಕು. ಹಾಗಾದರೆ "ಪಶುರ್ಮನುಷ್ಯಃ ಪಕ್ಷೀ ವಾ ಯೇ ಚ ವೈಷ್ಣವಸಂಶ್ರಯಾಃ| ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ" ಎಂದು ಈ ಜ್ಞಾನದ ಯೋಗ್ಯತೆ ಇಲ್ಲದ ತಿರ್ಯಕ್ ಸ್ಥಾವರಗಳಿಗೂ ವೈಷ್ಣವ ಸಂಬಂಧದಿಂದ ಮೋಕ್ಷ ಸಿದ್ಧಿ ಎಂದು ತಿಳಿಸುವ ವಾಕ್ಯ ವ್ಯರ್ಥವಾಗುವುದಿಲ್ಲವೇ? ಆದ್ದರಿಂದ ಮೋಕ್ಷದಲ್ಲಿ ಯಾರಿಗೆ ಇಚ್ಛೆ ಇದೆಯೋ ಅಂತಹವರಿಗೆ ತತ್ತ್ವತ್ರಯ ನಿರ್ಬಾಧ ಪರಮಾವಶ್ಯಕ.

ಆದರೆ, ಮುಮುಕ್ಷು ಮತ್ತು ತತ್ತ್ವಜ್ಞಾನ ಎರಡೂ ತಿರ್ಯಕ್–ಸ್ಥಾವರಗಳಿಗೆ ಇಲ್ಲದಿದ್ದರೂ ಆ ಎರಡೂ ಯಾವ ವೈಷ್ಣವರಲ್ಲಿದೆಯೋ ಅಂತಹವರ ಸಂಬಂಧ ಮತ್ತು ಅವರ ಜ್ಞಾನ ಸಂಬಂಧದಿಂದಲೇ ಮೋಕ್ಷವು ಸದ್ಯಾರಕವಾಗಿ ದೊರೆಯುತ್ತೆ. ತತ್ತ್ವಗಳನ್ನು ಹೆಚ್ಚು-ಕಡಿಮೆಯಾಗಿ ಹೇಳುವ ಬಾಹ್ಯ ಮತ್ತು ಕುದೃಷ್ಟಿ ಮತಗಳನ್ನು ನಿರಸನ ಮಾಡುತ್ತಾರೆ.

ಇತರ ದರ್ಶನಗಳಲ್ಲಿ ಕೆಲವರು ತತ್ತ್ವಗಳು 16 ಎನ್ನುತ್ತಾರೆ, ಮತ್ತೆ ಕೆಲವರು 6 ಎನ್ನುತ್ತಾರೆ. 16 ಎನ್ನುವವರು ನೈಯಾಯಿಕರು, 6 ಎನ್ನುವವರು ವೈಶೇಷಿಕರು. ಚಾರ್ವಾಕ ಮತದಲ್ಲಿ ಪೃಥಿವೀ ಮುಂತಾದ ಭೂತ ಚತುಷ್ಟಯವೇ ತತ್ತ್ವವೆಂದು ಹೇಳುತ್ತಾರೆ. ಹೀಗೆಯೇ ಜೈನ,

ಬೌದ್ಧ, ಶೈವ, ಸಾಂಖ್ಯಾದಿ ಪಕ್ಷಗಳಲ್ಲಿ ತತ್ತ್ವಗಳನ್ನು ವಿವಿಧ ರೀತಿಗಳಲ್ಲಿ ತಿಳಿಸಿರುತ್ತಾರೆ. ಇಂತಹ ಸಿದ್ಧಾಂತ 17 ಇರುತ್ತೆ. ಅವುಗಳಲ್ಲಿ ಚಾರ್ವಾಕ ಮುಂತಾದ 11 ಮತಗಳು ಬಾಹ್ಯಮತಗಳು. ಭಾಟ್ಟ, ಪ್ರಾಭಾಕರ, ಏಕವಿಕಾಯನ ? ಯಾನರವಲೆಗಿನವು 6 ಕುದೃಷ್ಟಿಮತಗಳು. ಈ ಮತಗಳಿಗೆ ಭಗವದನುಗ್ರಹವಿಲ್ಲ. ಪಾರಲೌಕಿಕ ಶೂನ್ಯ. ಮನುಭಗವಾನ್ ಸಹ ಹೇಳಿರುತ್ತಾರೆ: "ಯಾವೇದಬಾಹ್ಯಾಃ ಸ್ಮೃತಯಃ ಯಾಶ್ಚ ಕಾಶ್ಚ ಕುದೃಷ್ಟಯಃ ಸರ್ವಾಸ್ತಾಃ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿ ತಾಃ ಸ್ಮೃತಾಃ!" ಶ್ರೀಕೂರತ್ತಾಳ್ವಾನ್ ವರರವರೂ ಸಹ ಶ್ರೀವೈಕುಂಠಸ್ತವದಲ್ಲಿ "ಬಾಹ್ಯಾಃ ಕುದೃಷ್ಟಯಃ" ಇತ್ಯಾದಿ ಶ್ಲೋಕದಲ್ಲಿ ಈ ಅರ್ಥವನ್ನೇ ತಿಳಿಸಿರುತ್ತಾರೆ.

ವೇದಪ್ರಾಮಾಣ್ಯವನ್ನು ಒಪ್ಪದೇ ಅದನ್ನು ದೂಷಿಸುವ ಚಾರ್ವಾಕಾದಿಗಳು ಬಾಹ್ಯಮತಸ್ಥರು. ವೇದಪ್ರಾಮಾಣ್ಯವನ್ನು ಒಪ್ಪಿದರೂ ವೇದಾರ್ಥಗಳನ್ನು ವಿಪರೀತವಾಗಿ ಹೇಳುವ ಭಾಟ್ಟ, ಪ್ರಾಭಾಕರ ಮಾಯಾವಾದಿ ಮುಂತಾದ ಪ್ರಮೇಯದೂಷಕರಾದ ಕುದೃಷ್ಟಿಗಳು ಭಗವತ್ಪ್ರಾಪ್ತಿಗೆ ಪಾತ್ರರಲ್ಲ.

ಶ್ರೀ ಭಗವದ್ರಾಮಾನುಜರ ವಿವರಣೆ:— "ಜಾಯಮಾನಂ ಹಿ ಪುರುಷಂ ಯಂ ಪಶ್ಯೇತ್ ಮಧುಸೂದನಃ। ಸಾತ್ವಿಕಃ ಸ ತು ವಿಜ್ಞೇಯಃ ಸ ವೈ ಮೋಕ್ಷಾರ್ಥಚಿಂತಕಃ" ಎಂಬಂತೆ ಸತ್ಸೃಷ್ಟಿಕರ್ಮಕ್ಕೆ ಕಾರಣವಾದ ಜಾಯಮಾನಕಾಲದಲ್ಲಿ ಭಗವತ್ಸಂಪರ್ಕ ಇವರಿಗಿಲ್ಲ.

ಈ ಅರ್ಥವನ್ನು ವಿವರಿಸಲು ಶ್ರೀ ಕೂರತ್ತಾಳ್ವಾನ್ ವರರವರು ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಅತ್ಯಧಿಕಬಾಯಾರಿಕೆಯಿಂದ ಎರಡು ಮೃಗಗಳು ನೀರನ್ನು ಹುಡುಕಿಕೊಂಡು ಹೊರಟವು. ಅವುಗಳಲ್ಲಿ ಒಂದು ಮೃಗವು ಕೊಳ-ಕೆರೆಗೆ ಹೋಗದೆ ಬಿಸಿಲ್ಗುದುರೆಯನ್ನೇ ನೀರೆಂದು ಭ್ರಮಿಸಿ ಅವರ ಹಿಂಬಾಲಿಸಿ ಓಡುತ್ತಿರುವಾಗ ಅಲ್ಲಿ ಒಂದು ಹುಲಿಯ ಬಾಯಿಗೆ ತುತ್ತಾಯಿತು. ಮತ್ತೊಂದು ಸಹಜವಾಗಿ ನೀರಿನ ತಟಾಕಕ್ಕೇ ಹೋಗಿ ನೀರಿದರೂ ಯಾವ ಕಷ್ಟದಲ್ಲಿ ಇಳಿಯಬೇಕೋ ಅಲ್ಲಿ ಇಳಿಯದೆ ಬೇರೆ ಸ್ಥಳದಲ್ಲಿ ಇಳಿದು, ಅಲ್ಲಿ ಇದ್ದ ಮೊಸಳೆಯ ಬಾಯಿಗೆ ತುತ್ತಾಯಿತು. ಈ ರೀತಿ ಎರಡು

ಮೃಗಗಳಿಗೂ ತಟಾಕ ಅಪ್ರಮೇಶ ಮತ್ತು ಸ್ಥಮೇಶದಲ್ಲಿ ಸ್ವಲ್ಪ ವೈಲಕ್ಷಣ್ಯ ವುಂಟಾದರೂ ವಿಸಾತದಲ್ಲಿ ಸಮಾನ ಫಲ. ಅದೇ ರೀತಿ ಕುದೃಷ್ಟಿ ಮತ್ತು ವೈದಿಕ ಮತವಲಂಬಿಸಿ ವೇದಪ್ರಮಾಣ್ಯ ಅಂಗೀಕಾರ ಮತ್ತು ಅನಂಗೀಕಾರದ ವಿಷಯದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಭಗವತ್ಪ್ರಪ್ತಿ ಎಂಬ ಫಲದ ವಿಸಾತ ಇಬ್ಬರಿಗೂ ಸಮಾನವೇ. ಹೀಗೆ ಬಾಹ್ಯ-ಕುದೃಷ್ಟಿ ಮತಗಳಂತಲ್ಲದೇ ಸಮ್ಯಕ್ ಶ್ರೀರಾಮಾನುಜ ಮತದಲ್ಲಿ ತತ್ತ್ವಗಳು ಮೂರು.

ತತ್ತ್ವತ್ರಯ ನಿರ್ಣಯದ ಪ್ರಮಾಣವೇನು ?

ನಿರ್ದೋಷ ಪ್ರಮಾಣವಾದ ವೇದಾಂತ :— " ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ " ಭೋಕ್ತೃಭೋಗ್ಯ ಪ್ರೇರಯಿತಾ ಎಂಬ ಮೂರು ಪದಗಳಿಂದ ಕ್ರಮವಾಗಿ ಜೀವಜಡೀಶ್ವರರೆಂಬ ಮೂರು ತತ್ತ್ವಗಳನ್ನು ತಿಳಿಸಲಾಗಿದೆ. ಅದ್ದರಿಂದ ವೇದಾಂತ ಪ್ರತಿಪಾದ್ಯ ತತ್ತ್ವಗಳು ಮೂರು ಆಗಿವೆ. ಮುಮುಕ್ಷುಗಳಿಗೆ ಈ ತತ್ತ್ವತ್ರಯ ಜ್ಞಾನವುಂಟಾಗಬೇಕು. " ತಮೇವಂ ವಿದ್ವಾನ್ ಅಮೃತ ಇಹಭವತಿ | ನಾನ್ಯಃ ಪಂಥಾ ಅಯನಾಯ ವಿದ್ಯತೇ " ಎನ್ನುತ್ತದೆ ವೇದಾಂತ. ಭಗವತ್ತತ್ತ್ವಜ್ಞಾನ ಒಂದೇ ಮೋಕ್ಷ ಸಾಧನವೆನ್ನುವುದರಿಂದ ತತ್ತ್ವತ್ರಯ ಜ್ಞಾನವನ್ನು ಮೋಕ್ಷಸಾಧನಜ್ಞಾನ ವೆಂದು ಏಕೆ ಹೇಳಬೇಕೆಂದರೆ :— ಭಗವತ್ತತ್ತ್ವವನ್ನು ತಿಳಿಯುವಾಗ ಸಕಲ ಚೇತನಾ-ಚೇತನ ವಿಲಕ್ಷಣ, ಉದರ ಕಾರಣ, ವ್ಯಾಪಕ, ಧಾರಕ, ನಿಯಾಮಕ, ಶೇಷಿ ಮುಂತಾದ ವಿಶೇಷಗಳನ್ನು ತಿಳಿಯಬೇಕು. ಅದ್ದರಿಂದ ಚೇತನಾ-ಚೇತನಗಳೆಂಬ ತತ್ತ್ವಾಂತರಗಳನ್ನು ತಿಳಿಯದೆ ಇದ್ದರೆ ತತ್ತ್ವತ್ರಯ ಜ್ಞಾನವು ಸಮರ್ಪಕವಾಗಿ ಉಂಟಾಗುವುದಿಲ್ಲ.

" ತಮೇವಂ ವಿದ್ವಾನ್ ; ನಾನ್ಯಃ ಪಂಥಾಃ " ಎಂದು ಹೇಳುವಂತೆಯೇ " ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಅಮೃತತ್ತ್ವಮೇತಿ " ಎಂದು ಹೇಳುವ ಪರಮಾತ್ಮ ಜ್ಞಾನವೇ ಮೋಕ್ಷಕಾರಣ.

ತತ್ತ್ವತ್ರಯವನ್ನು ಆಚಾರ್ಯರುಗಳು ಉಪದೇಶಮಾಡುವುದಕ್ಕೆ ಮೂಲಕಾರಣವೇನು ಅಂದರೆ :— ಪ್ರಕೃತ್ಯಾತ್ಮ ಭ್ರಾಂತಿ, ಸ್ವಕರ್ಮಾತ್ಮ ಭ್ರಾಂತಿಗೆ ಮೂಲಕಾರಣಭೂತವಾದ ಅನೀಶ್ವರ ದುಚೆಯುಂಟಾಗುವಂತಹ

ಮಹಾವಿರೋಧಿಗಳನ್ನು ನಿರಸನಗೊಳಿಸಲು ಶಾಸ್ತ್ರವು "ಭೋಕ್ತೃ-ಭೋಗ್ಯ" ನಿಯಾಮಕಗಳಿಂದ ತತ್ತ್ವವಿವೇಕವನ್ನು ತಿಳಿಸುತ್ತದೆ.

ಈ ಮೂರು ತತ್ತ್ವಗಳೂ ನಿತ್ಯ. ನಿತ್ಯತತ್ತ್ವವು ಎರಡು ತರಹವಾಗಿರುತ್ತೆ. ಕೂಟಸ್ಥ – ನಿತ್ಯತತ್ತ್ವ ಮತ್ತು ಪರಿಣಾಮ – ನಿತ್ಯತತ್ತ್ವವೆಂದು. ಕೂಟಸ್ಥ ನಿತ್ಯತತ್ತ್ವವು ಜೀವತನ ಮತ್ತು ಈಶ್ವರನಿಗೆ ಇರುತ್ತೆ. ಪರಿಣಾಮ ನಿತ್ಯತತ್ತ್ವವು ಅಜೀವತನಕ್ಕೆ ಇರುತ್ತೆ. ಒಂದು ವೇಳೆ ಯಾವುದಾದರೂ ತತ್ತ್ವಕ್ಕೆ ಪರಿಣಾಮವಿಲ್ಲದೇ ಹೋದರೆ ಆ ತತ್ತ್ವಕ್ಕೆ ಹಾನಿ ಏನೂ ಇಲ್ಲ. ಅದೂ ನಿತ್ಯವೇ ಆಗಿರುತ್ತೆ. ಇವುಗಳಲ್ಲಿ ತ್ರಿಗುಣಕಾಲ, ಶುದ್ಧಸತ್ವ, ರೂಪ ಮೂರೂ ಅಜೀವತನವೇ. ಬದ್ಧರು, ಮುಕ್ತರು ಮತ್ತು ಜೀವತನ-ಜೀವತನ ಎಲ್ಲಾ ಈಶಿತವ್ಯವೇ ಆಗಿರುತ್ತೆ. ಇದಕ್ಕೆ ಕಾರಣ ಈಶ್ವರನು ನಾರಾಯಣನೇ.

ಈಶಿತವ್ಯರೂಪೀ ಜೀವತನ-ಜೀವತನದಲ್ಲಿ 'ಚಿತ್' ತತ್ತ್ವ :- ಈ ಸ್ಥಳದಲ್ಲಿ ಚಿತ್ ತತ್ತ್ವವೆಂದರೆ ಆತ್ಮನನ್ನು ತಿಳಿಸುತ್ತೆ. ನಾಮಲಿಂಗಾನು ಶಾಸನದಲ್ಲಿ "ಶ್ವೇತ್ಲಾ, ಉಪಲಬ್ಧಿ, ಚಿತ್, ಸಂವಿತ್" ಎಂದು ಚಿತ್ ಶಬ್ದವನ್ನು ಜ್ಞಾನವಾಚಿ ಶಬ್ದಗಳ ಜೊತೆ ಹೇಳಿರುವುದರಿಂದ; ಜ್ಞಾನವುಳ್ಳ ವಸ್ತುಗಳಲ್ಲಿ ಚಿತ್ ಶಬ್ದಕ್ಕೆ ಅಧಿಕ ಪ್ರಸಿದ್ಧಿ ಇಲ್ಲದೇ ಇರುವ ಕಾರಣ.

"ಕ್ಷರಾತ್ಮಾನೌ ಈಶತೇ ದೇವ ಏಕಃ" [ಶ್ವೇ. ಉಪ.–1–10]

"ಯ ಆತ್ಮಾನಂ ಅಂತರೋ ಯಮಯತಿ" [ಸುಬಾಲೋಪ.]

"ಆತ್ಮಾ ಶುದ್ಧಃ ಅಕ್ಷರಃ" [2–13–71 ವಿಷ್ಣುಪು.]

"ಆತ್ಮಾ ಜ್ಞಾನಮಯಃ" [6–7–26 ವಿಷ್ಣುಪು.]

ಈ ರೀತಿ ಅನೇಕ ಶ್ರುತಿ ಸ್ಮೃತಿಗಳಲ್ಲಿ 'ಆತ್ಮ'ಶಬ್ದವನ್ನು 'ಜೀವ' ವಿಷಯದಲ್ಲಿ ಹೆಚ್ಚಾಗಿ ಬಳಸಿರುವುದರಿಂದ ಈ ಸ್ಥಳದಲ್ಲಿಯೂ ಆತ್ಮನನ್ನು ಚಿತ್ ಎಂದು ಹೇಳುತ್ತಾರೆ. ಆತ್ಮಸ್ವರೂಪ–ದೇಹ, ಇಂದ್ರಿಯ, ಮನ, ಪ್ರಾಣ, ಬುದ್ಧಿ ಇವುಗಳಿಗಿಂತ ಬೇರೆಯಾಗಿ, ಅಜಡವಾಗಿ, ಆನಂದರೂಪವಾಗಿ ಅಣುವಾಗಿ, ಅವ್ಯಕ್ತವಾಗಿ, ಅಚಿಂತ್ಯವಾಗಿ, ನಿರವಯವವಾಗಿ, ನಿರ್ವಿಕಾರ

ವಾಗಿಯೂ ಮತ್ತು ಜ್ಞಾನಾಶ್ರಯವಾಗಿಯೂ ಈಶ್ವರನಿಗೆ ನಿಯಾಮ್ಯ, ಧಾರ್ಯ ಮತ್ತು ಶೇಷವಾಗಿಯೂ ಇರುತ್ತೆ. "ಕನ್ಯುಕನ್ಯು ಪರಂಪರ ಮಾಥಯ". ಈ ಆತ್ಮನು ದೇಹಾದಿ ವಿಲಕ್ಷಣನು ಎನ್ನುವುದನ್ನು ಇನ್ನು ವಿವರಿಸುವೆವು. ದೇಹಾದಿಗಳು 'ನನ್ನ ಶರೀರ' ಎಂದು ಆತ್ಮನಿಂದ ಬೇರೆಯಾಗಿ ಕಾಣಿಸುವುದರಿಂದಲೂ ಮತ್ತು ಆತ್ಮ 'ನಾನು' ಎಂದೂ ತೋರಿಕೆಗೆ ಕಾಣುವುದರಿಂದಲೂ ಈ ಭ್ರಾಂತಿಯುಂಟಾಗುತ್ತದೆ. ದೇಹವು ಜನನ-ಮರಣರೂಪಿಯಾದ್ದರಿಂದ, ಒಂದು ಸಮಯ ಈ ಶರೀರವು ಇರುತ್ತೆ; ಮತ್ತೊಂದು ಸಮಯ ಕಾಣುವುದಿಲ್ಲ. ಆತ್ಮನು ಜನನ-ಮರಣ ರಹಿತವಾಗಿ ಸರ್ವದಾ ಇರುವ ಕಾರಣ, ದೇಹಾದಿಗಳು ಜನೇಕ ಉಂಟಾಗುತ್ತೆ. ಆದರೆ ಆತ್ಮನು ಒಬ್ಬನೇ ಆಗಿರುತ್ತಾನೆ.

ಆತ್ಮನು ದೇಹಾದಿವಿಲಕ್ಷಣನು :- ಇಲ್ಲಿ ಈ ಯುಕ್ತಿಗಳನ್ನು ಖಂಡಿಸಿ ಶ್ರುತಿವಚನಗಳನ್ನು ಜೋಳುವ ಅರ್ಥಗಳಿಗೆ ವಿಪರೀತವಾಗಿ ಹೇಳಲಾಗುವುದಿಲ್ಲ. ಹಾಗೆ ಒಂದು ವೇಳೆ ಹೇಳಬಹುದಾದರೆ, ಆತ್ಮನು ದೇಹಾದಿಗಳಿಗಿಂತ ಬೇರೆಯಾದವನೆಂಬುದನ್ನು ಶಾಸ್ತ್ರಬಲದಿಂದ ತಿಳಿಯಬಹುದು. "ಭೂತಾನಿ ಚ ಶವರ್ಗೇಣ" [ಅಧ್ಯಾಯ 206, ಶ್ಲೋಕ 28-29] ಪಾದ್ಮೋತ್ತರದಲ್ಲಿ ಆತ್ಮನು 24 ತತ್ತ್ವಗಳಿಂದಿಗೆ ಸೇರಿರುವ ಪ್ರಕೃತಿ-ವಿಕೃತಿಗಳಿಗಿಂತ ಬೇರೆಯಾದ 25ನೇ ತತ್ತ್ವವೆಂದು ಹೇಳಲ್ಪಟ್ಟಿರುತ್ತೆ. ಹೇಗೆಂದರೆ :-

'ಕ' ವರ್ಗದಿಂದ ಪೃಥಿವೀ ಆದಿ ಭೂತ-ಪಂಚಕ,
'ಚ' ವರ್ಗದಿಂದ ವಾಕ್ ಆದಿ ಕರ್ಮೇಂದ್ರಿಯ-ಪಂಚಕ,
'ಟ' ವರ್ಗದಿಂದ ಜ್ಞಾನೇಂದ್ರಿಯ-ಪಂಚಕ,
'ತ' ವರ್ಗದಿಂದ ಗಂಧಾದಿ ತನ್ಮಾತ್ರಾ-ಪಂಚಕ,
'ಪ' ಕಾರದಿಂದ ಮನಸ್ಸು,
'ಫ' ಕಾರದಿಂದ ಅಹಂಕಾರ,
'ಬ' ಕಾರದಿಂದ ಮಹತ್ತತ್ತ್ವ,
'ಭ' ಕಾರದಿಂದ ಪ್ರಕೃತಿ ತತ್ತ್ವ ; ಒಟ್ಟು 24 ತತ್ತ್ವಗಳನ್ನು 'ಕ'

ಕಾರಾದಿ 'ಭ' ಕಾರಾಂತ 24 ಅಕ್ಷರಗಳಿಂದ ತಿಳಿಸಿ, ಇವುಗಳಿಗಿಂತ ವಿಲಕ್ಷಣ ನಾದ 25ನೆಯ ತತ್ತ್ವ—ಜೀವನನ್ನು 'ಮ' ಕಾರದಿಂದ ತಿಳಿಸಿರುವ ಕಾರಣ ಆತ್ಮನು ದೇಹಾದಿವಿಲಕ್ಷಣನು ಎಂಬುದನ್ನು ನಾವು ಶಾಸ್ತ್ರಮುಖೇನ ತಿಳಿಯುತ್ತೇವೆ.

ಆತ್ಮನು ಅಜಡ:—ಅಜಡತ್ವವೆಂದರೆ ಸ್ವಯಂ ಪ್ರಕಾಶತ್ವ. ದೀಪವು ದೀಪಾಂತರ ನಿರಪೇಕ್ಷರೂಪದಲ್ಲಿ ಸ್ವವ್ಯವಹಾರ-ಹೇತುವಾದ್ದರಿಂದ ಪ್ರಕಾಶಾಂತರ ನಿರಪೇಕ್ಷತೆಯಿಂದ ಸ್ವವ್ಯವಹಾರ-ಹೇತುತ್ವವು ಆತ್ಮನಿಗೂ ಸಹ ಇದೆ.

ಆತ್ಮನು ಏನೆಂದ ರೂಪನು:—ಈ ವಿಷಯದಲ್ಲಿ ಸುಪ್ತ-ಪ್ರಬುದ್ಧ ಪ್ರತ್ಯಭಿಜ್ಞೆಯನ್ನು ಪ್ರಮಾಣವಾಗಿ ತೆಗೆದುಕೊಳ್ಳಬಹುದು. ನಿದ್ರಿಸಿ ಎದ್ದ ಮನುಷ್ಯನು 'ಸುಖವಾಗಿ ನಿದ್ರಿಸಿದೆ', ಎಂದು ಹೇಳಿದರೆ, ಇದನ್ನು ಪ್ರತ್ಯಭಿಜ್ಞೆ ಎಂದು ಹೇಳುತ್ತಾರೆ. ಸುಷುಪ್ತಿಯ ಸಮಯದಲ್ಲಿ 'ಪರಾಗರ್ಥ' ಅನುಭವ ಇಲ್ಲದಿರುವುದರಿಂದ ಪ್ರತ್ಯಗರ್ಥ ಸ್ಫುರಣವಾಗಿರುವುದರಿಂದ ನಿದ್ರಿಸಿ ಎದ್ದವನು ನಿದ್ರಿಸುತ್ತಿರುವ ಸಮಯದಲ್ಲಿ ಅನುಭವಿಸಿದ ಸುಖವು ಆತ್ಮಸ್ವರೂಪ ಸುಖವಾಗಿರಬೇಕು.

ಶ್ರೀ ಭಾಷ್ಯಕಾರರು ಜಿಜ್ಞಾಸಾಧಿಕರಣದಲ್ಲಿ ಈ ವಿಷಯಗಳನ್ನು ಸ್ಪಷ್ಟಪಡಿಸಿರುತ್ತಾರೆ. ಆತ್ಮನಿಗೆ ನಿತ್ಯತ್ವವು ಯಾವಾಗ ಉಕ್ತವಾಗುತ್ತೆ, ಆತ್ಮನು ಯಾವಾಗ ಉಕ್ತನಾದರೆ ಜನನಮರಣಾದಿ ಆಗುತ್ತೆ ? ಅಂದರೆ ಜನ್ಮವೇನು ?—' ದೇಹಸಂಬಂಧ ' ; ಮರಣವೆಂದರೇನು ? ' ದೇಹವಿಯೋಗ '; ಆತ್ಮನು ನಿತ್ಯನಾದ್ದರಿಂದ ಸೃಷ್ಟಿಗೆ ಮೊದಲು ' ಏಕಮೇವ ' ಎಂದು ಬ್ರಹ್ಮನನ್ನು ಒಂದೇ ಎಂದು ಹೇಳಿದರು. ಇದು ಹೇಗೆ ಸರಿಹೊಂದುತ್ತೆ ? ಜೀವವು ನಿತ್ಯವಾದ್ದರಿಂದ ಸೃಷ್ಟಿಗೆ ಮೊದಲು ಅನೇಕ ತತ್ತ್ವಗಳು ಇರುವುದಿಲ್ಲ. ಅಂದರೆ ಏಕತ್ವವೇನು ?—ನಾಮರೂಪ ವಿಭಾಗ ಅಭಾವ, ಇದೇ ಸಿದ್ಧಾಂತ.

ಭಗವದ್ರಾಮಾನುಜದರ್ಶನದಪ್ರಕಾರ ತತ್ತ್ವಗಳು ಮೂರೂ ನಿತ್ಯವಾದ್ದರಿಂದ ಸೃಷ್ಟಿ ಮತ್ತು ಪ್ರಳಯ ಕಾಲದಲ್ಲಿಯೂ ಸಮಾನವಾಗಿ ತತ್ತ್ವತ್ರಯವಿದ್ದೇ ಇರುತ್ತೆ. ಆದರೂ ಸಹ ಪ್ರಳಯಕಾಲದಲ್ಲಿ ಏಕತ್ವ ಮತ್ತು

ಸೃಷ್ಟಿಕಾಲದಲ್ಲಿ ಬಹುತ್ವ. ಏಕತ್ವವೆಂದರೆ ನಾಮರೂಪವಿಭಾಗ ಅಭಾವ. ನಾಮರೂಪ ವಿಭಾಗ ಅನಭಿವ್ಯಕ್ತಾವಸ್ಥೆಯು ಏಕತ್ವಾವಸ್ಥೆಯು ಕಾರಣಾವಸ್ಥೆ. ನಾಮರೂಪ ವಿಭಾಗ ಅಭಿವ್ಯಕ್ತಾವಸ್ಥೆಯು ಬಹುತ್ವಾವಸ್ಥೆಯು ಕಾರ್ಯಾವಸ್ಥೆ. ಇದೇ ಸಿದ್ಧಾಂತ. ಆದ್ದರಿಂದ ಸೃಷ್ಟಿಗೆ ಮೊದಲು ಏಕತ್ವವಾಗಿರುವುದರಿಂದ ಉತ್ಪನ್ನ ಇಲ್ಲವೆಂದು ಹೇಳಲಾಗುವುದಿಲ್ಲ. ಪ್ರಳಯಕಾಲದಲ್ಲಿ ಒಂದು ವೇಳೆ ಉತ್ಪನ್ನವಿಲ್ಲದೆ ಹೋದಪಕ್ಷ ಬ್ರಹ್ಮನಿಗೆ ಉಪಾದಾನತ್ವವಿಲ್ಲದಿರಬೇಕು. ಸೂಕ್ಷ್ಮಚಿದಚಿದ್ವಿಶಿಷ್ಟನಾದ ಬ್ರಹ್ಮನೇ ಉಪಾದಾನ ಕಾರಣನೆಂದು ಸಿದ್ಧಾಂತದಲ್ಲಿ ಅಂಗೀಕೃತವಾಗಿದೆ.

ಅದ್ವೈತಸಿದ್ಧಾಂತದಲ್ಲಿ ಅವಿದ್ಯಾವಿಶಿಷ್ಟಬ್ರಹ್ಮನೇ ಉಪಾದಾನ ಕಾರಣನೆಂದು ಹೇಳುವ ಹಾಗೆ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಚಿದಚಿದ್ವಿಶಿಷ್ಟಬ್ರಹ್ಮನೇ ಉಪಾದಾನ ಕಾರಣನಾಗಿರುತ್ತಾನೆಂದು ಅಂಗೀಕರಿಸಲ್ಪಟ್ಟಿರುತ್ತೆ. ಇದನ್ನು ಶ್ರೀ ನವಿಲ್ಹಾಳ.ವಾರ್ಯರು ತಿರುವಾಯ್ಮೊಳಿ, ಪ್ರಥಮ ಶತಕದಲ್ಲಿ ಪರತತ್ವವನ್ನು ತಿಳಿಸಿ ಎಂಟನೆಯ ಶತಕದಲ್ಲಿ ಆ ಪರತತ್ವ ಸ್ಥಾಪಕ ಪರತತ್ವವನ್ನು ಹೇಳಿ, ಆ ಕಾರಣತತ್ವವೂ ಸಹ ನಿಮಿತ್ತ ಕಾರಣತ್ವ, ಸಹಕಾರಿಕಾರಣತ್ವ ಮತ್ತು ಉಪಾದಾನಕಾರಣತ್ವರೂಪದಿಂದ ಮೂರು ವಿಧಗಳಾದ್ದರಿಂದ ಅವುಗಳಲ್ಲಿ ಉಪಾದಾನಕಾರಣತ್ವ ಶುದ್ಧ ಬ್ರಹ್ಮನಿಗೆ ಹೇಳಿದ್ದೇಆದರೆ ಸವಿಕಾರ ಪ್ರಸಂಗ ಬರುವ ಕಾರಣ ನಿರ್ವಿಕಾರ ಶ್ರುತಿ ಕೊಟ್ಟಂತಾಗುವುದರಿಂದ, ಚಿದಚಿದ್ವಿಶಿಷ್ಟ ಬ್ರಹ್ಮನಿಗೇ ಉಪಾದಾನತ್ವವನ್ನು ಹೇಳುವುದು ಅನಿವಾರ್ಯವಾದ್ದರಿಂದ ಪರಬ್ರಹ್ಮನು ಸ್ವರೂಪೇಣ ನಿರ್ವಿಕಾರ ಮತ್ತು ಚೇತನಾ-ಚೇತನ ವಿಶೇಷಣದಿಂದ ಸವಿಕಾರನೆಂದು ತಿಳಿಸಿರುತ್ತಾರೆ. ಚೇತನಾ-ಚೇತನ ಬ್ರಹ್ಮನೇ ಉಪಾದಾನಕಾರಣನೆಂದು ಸಿದ್ಧಾಂತಪಡಿಸುವುದಕ್ಕಾಗಿ ತಿರುವಾಯ್ಮೊಳಿ, ಮೂರನೆಯ ಶತಕದಲ್ಲಿ ಪರಮಾತ್ಮನ ಚೇತನಾ-ಚೇತನ ವ್ಯಾಪಕತ್ವವನ್ನು ಶರೀರರೂಪದಲ್ಲಿ ಹೊಂದಿ ತಾನು ಸ್ವಯಂ ಶರೀರಿಯಾಗಿ ಇರುವನೆಂದು ಪಿಳ್ಳೈವಾರ್ಯರು ನಿರೂಪಿಸಿರುತ್ತಾರೆ. ಆದ್ದರಿಂದ ಸಂಹಾರ ದೆಶೆಯಲ್ಲಿ ಸಹ ಉತ್ಪನ್ನ 'ಸತ್' ತತ್ವವೇ ಆಗಿರುತ್ತಾನೆ. ಈರೀತಿ ಉತ್ಪನ್ನನ ನಿತ್ಯತ್ವದಲ್ಲಿ ವಿರೋಧವಿಲ್ಲ.

ಆಚಿತ್–ವಿಲಕ್ಷಣರೂಪಿ–ಜ್ಞಾನಾನಂದ–ನಿತ್ಯಸ್ವರೂಪಿ ಆತ್ಮನು ಅಣುವಾಗಿ ಇರುತ್ತಾನೆ :– ಈ ಅಂಶವನ್ನು "ಉತ್ಕ್ರಾಂತಿ ಗತ್ಯಾಗತೀನಾಮ್" ಎಂಬ ಸೂತ್ರದಲ್ಲಿ [೨–೩–೨] ಸೂತ್ರಕಾರರೂ ಸಹ ಸ್ಥಿರಪಡಿಸಿರುತ್ತಾರೆ. "ಏಷಃ ಅಣುಃ ಆತ್ಮಾ" [ಮುಂ. ಉಪ. ೩_1-9] ಈ ರೀತಿ "ಬಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ। ಜೀವಃ ಸೂಕ್ಷ್ಮಭಾಗಃ" [ಶ್ವೇ. ಉಪ. ೫–೯–7] ; ಇದೇ ರೀತಿ ಶ್ರುತಿಯಲ್ಲಿಯೂ "ಸ್ವರೂಪವಮ್ ಅಣುಮಾತ್ರಮ್ ಸ್ಯಾತ್" ಎಂದು ಹೇಳಿದೆ. ವಿಷ್ವಕ್ಸೇನ ಸಂಹಿತೆ ಇತ್ಯಾದಿ ಸ್ಮೃತಿಗಳಲ್ಲಿಯೂ ಆತ್ಮನ ಅಣುತ್ವವು ಸ್ಥಾಪಿಸಲ್ಪಟ್ಟಿರುತ್ತೆ. "ಹೃದಿ ಏವ ಅಯಮಾತ್ಮಾ" [ಬೃ. ಉಪ. ೪-೪-೭] ಎಂದು ಹೇಳಿ ಜೀವಾತ್ಮನಿಗೆ ಹೃದಯದಲ್ಲಿ ನಿವಾಸಸ್ಥಾನ ಎಂದು ತಿಳಿಸಿರುತ್ತೆ. "ತೇನ ಪ್ರಥ್ಯೋತೇನ ಏಷ ಆತ್ಮಾ ನಿಷ್ಕ್ರಾಮತಿ" [ಕೌಷೀತಕೀ ಉಪ.] ಈ ರೀತಿ ಶರೀರದಿಂದ ಹೊರಡುವುದನ್ನು "ಏಷೈಕೇಭ್ಯ ಆತ್ಮಭ್ಯೋ ಲೋಕಾತ್ ಪ್ರಯಂತಿ ಚಂದ್ರಮಸಮೇವ ತೇ ಗಚ್ಛಂತಿ" [ಬೃ. ಉಪ. ೪-೪-೬] ಎಂದು ನಿರ್ಗಮನವನ್ನು ಹೇಳಿ "ತಸ್ಮಾತ್ ಲೋಕಾತ್ ಪುನರೇತಿ ಅಸ್ಮೈ ಲೋಕಾಯ ಕರ್ಮಣೇ" [ಬೃ. ಉಪ. ೪-೪-೬] ಎಂದು ಆಗಮನವನ್ನು ನಿರ್ದೋಷಪ್ರಮಾಣವಾದ ವೇದಾಂತಶಾಸ್ತ್ರವು ಹೇಳುವುದರಿಂದ ಆತ್ಮಸ್ವರೂಪವು ಅಣುವಾಗಿಯೇ ಇರುತ್ತೆ.

ಒಂದು ವೇಳೆ ಆತ್ಮಶಕ್ತಿಯು ವಿಭುವಾಗಿದ್ದು ಪಕ್ಷದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿರಲಾರದು. ಗಮನಾಗಮನಗಳು ಒಂದೂ ಸರಿಹೊಂದುತ್ತಿರಲಿಲ್ಲ. ಆದ್ದರಿಂದ ಆತ್ಮಸ್ವರೂಪವನ್ನು ಅಣುವೆಂದೇ ತಿಳಿಯಬೇಕು. ದೀಪ ಮುಂತಾದ ಪ್ರಕಾಶವು ಒಂದು ಕಡೆ ಇದ್ದರೂ ಸಹ ಅದರ ಪ್ರಭೆಯು ಸರ್ವತ್ರ ವ್ಯಾಪಿಸುವಂತೆ ಆತ್ಮಸ್ವರೂಪವೂ ಹೃದಯ ಪ್ರದೇಶದಲ್ಲಿ ಇದ್ದರೂ ಸಹ ಶುದ್ಧಮಾನವಾದ ಜ್ಞಾನವು ಸರ್ವತ್ರ ಸಮಾನವಾಗಿ ವ್ಯಾಪಿಸಿರುವುದರಿಂದ ಶರೀರಾದ್ಯಂತದ ಸುಖ-ದುಃಖಗಳಿಗೆ ಕಡೆ ಇಲ್ಲ. ಆದ್ದರಿಂದ "ಪಾದೇ ಮೇ ವೇದನಾ, ಶಿರಸಿ ಮೇ ವೇದನಾ, ಜಾದೇ ಮೇ ಸುಖಮ್ ಶಿರಸಿ ಮೇ ಸುಖಮ್" ಎಂದು ಆಪಾದಮಸ್ತಕ ಶರೀರದಾದ್ಯಂತ ಸುಖ-ದುಃಖಗಳನ್ನು ಅನುಭವಿಸಲು ತಡೆ ಇಲ್ಲ.

ಹೀಗೆ ಜ್ಞಾನವಾಪ್ತಿ ಉಂಟಾಗುವುದರಿಂದ ಎಲ್ಲವನ್ನೂ ತಿನ್ನುತ್ತಾನೆ ಮತ್ತು ಎಲ್ಲವನ್ನೂ ಅನುಭವಿಸುತ್ತಾನೆ. ಅದನ್ನೇ ಬೃಹದಾರಣ್ಯಕದಲ್ಲಿ ತಿಳಿಸಿದೆ. ಸೂತ್ರಕಾರರು – "ಗುಣಾದ್ವಾ ಆಲೋಕವತ್" [2-3-32] ಎಂದು ಹೇಳಿದ್ದಾರೆ. ಸೌಳು ಮುನಿಯಂತಹವರು ಒಂದೇ ಸಮಯದಲ್ಲಿ ಅನೇಕ ಶರೀರಗಳನ್ನು ಪರಿಗ್ರಹಿಸಿ ಅನುಭವಿಸಿರುವುದೂ ಸಹ ಧರ್ಮ ಭೂತ ಜ್ಞಾನ ವ್ಯಾಪ್ತಿಯಿಂದಲೇ.

ಅತ್ಮನು ಅವ್ಯಕ್ತ:–ಎಂದರೆ ಘಟ-ಪಟಾದಿಗಳನ್ನು ಕಣ್ಣು ಮೊದಲಾದ ಯಾವ ಇಂದ್ರಿಯಗಳಿಂದ ನೋಡಿ ತಿಳಿಯುತ್ತೇವೆಯೋ ಆ ಇಂದ್ರಿಯಗಳಿಂದ ಈ ಜೀವಾತ್ಮನು ಆತ್ಮನನ್ನು ತಿಳಿಯಲಾರನು. ಹಾಗೆ ಯಾವ ಪ್ರಮಾಣದಿಂದಲೂ ತಿಳಿಯಲಾರದ ವಸ್ತುವನ್ನು ಅವ್ಯಕ್ತವೆನ್ನುತ್ತೇವೆ. ಯಾವರೆ ಆತ್ಮನಿಗೆ ಶಬ್ದವಿಜ್ಞಾನಾದಿಗಳಿಗೆ ಸಮಾನವಾದ ಕುಚ್ಛತ್ವವೇ ಉಂಟಾಗುತ್ತೆ. ಆದ್ದರಿಂದ ಮಾನಸ ಗಮ್ಯ ಮಾತ್ರ ; ಆದರೂ ಇಂದ್ರಿಯ ಜ್ಞಾನ ಗೋಚರನಲ್ಲ. ಹಾಗೆಯೇ ಆಳ್ವಾರ್ಗಳು ಸಹ "ತೆನ್ನು ತೆನ್ನು ಪರಂಪರವಾಯ್ಗ" ಎಂದು ತಿರುವಾಯ್ಮೊಳಿ [8-8-5]ಯಲ್ಲಿ "ಜ್ಞಾನಂ ಕಡಂದವೇ" ಎಂದು ಯಾವುದು ಅವ್ಯಕ್ತ ಶಬ್ದಾರ್ಥವೋ ಅದು ಇಂದ್ರಿಯ ಜ್ಞಾನಕ್ಕೆ ಅಗೋಚರತ್ವವೆಂದು ತಿಳಿಸಿರುತ್ತೆ.

ಆತ್ಮನು ಅಚಿಂತ್ಯನು :– ಅಂದರೆ ಜ್ಞೇತವಾದಿ ಯೋಗ್ಯ ಅಚಿದ್ವಸ್ತುವಿನಿಂದ ಬೇರೆ ವಿಜಾತೀಯ ರೂಪಿತತ್ವನಾದಕಾರಣ ಅಚಿತ್ತಿಗೆ ಸಮಾನವಾಗಿ ತಿಳಿಯುವುದು ಸರಿಯಲ್ಲ. ಯಾವದೇತಿಯಿಂದಲೂ ಚಿಂತೆ ಮಾಡಲು ಯೋಗ್ಯವಲ್ಲವೆನ್ನುವುದೇ ಅದಕ್ಕೆ ಅಕ್ಷರಶಃ ವಿಷಯ ರೂಪಿ ಶ್ರವಣ–ಮನನಾದಿಗಳಿಗೆ ವ್ಯರ್ಥ ಅರ್ಥವಾಗುತ್ತೆ. ಆದ್ದರಿಂದ ಅಚಿತ್ ಸಜಾತೀಯ ಬುದ್ಧಿ ಅನರ್ಹತ್ವ ಅಥವಾ ಅಚಿಂತ್ಯತ್ವವೆಂದು ಅರ್ಥ.

ಗೀತಾಚಾರ್ಯನೂ ಸಹ "ಅವ್ಯಕ್ತೋಯಂ ಅಚಿಂತ್ಯೋಯಂ" [2-25] ಎಂದು ತಿಳಿಸಿರುತ್ತಾನೆ. "ವಿಜ್ಞಾನಮಯಃ" [ತೈ. ಉಪ. 4-1] ಮತ್ತು "ವಿಜ್ಞಾನಘನಃ" [ಬೃ. ಉಪ. 4-4-12] ಎಂದು

ಹೇಳುವ ರೀತಿಯೇ ಜ್ಞಾನೈಕಾಕಾರನಾದ್ದರಿಂದ ,ಉಪದ್ರವಸ್ತುಗಳಿಗೆ ಸಮವಾಗಿ ಅವಯವ ಸಂಘಾತರೂಪವಾಗಿರುವುದಿಲ್ಲ, ಆತ್ಮವಸ್ತು.

ಪರ್ಯಾಯ ನಿರ್ವಿಕಾರವು :— " ಅಮೃತಾಕ್ಷರಂ ಹರಃ " [ಶ್ವೇ. ಉಪ. 1-10] ಆಕ್ಷಾಮಮೃತಃ ಅಕ್ಷರಃ [ವಿ. ಸ್ಮೃ. 2-13-7] ಇಂತಹ ಅಕ್ಷರ ಶಬ್ದ ವಾಚ್ಯವಸ್ತುವಾಗಿರುವ ಕಾರಣ, ಅಕ್ಷರಣ ಸ್ವಭಾವವಾಗಿರುವುದರಿಂದ ಕ್ಷರಣ ಸ್ವಭಾವರೂಪ ಅಕ್ಷರ ಶಬ್ದವಾಚ್ಯ ಅಜಿಶ್ರಿಗೆ ಸಮಾನವಾಗಿ ವಿಕಾರವಿಲ್ಲದೆ ಸದಾ ವಿಕಾರರೂಪವಾಗಿರುತ್ತೆ. ಇದ್ದರಿಂದ ಗೀತಾಚಾರ್ಯರೂ ಸಹ " ಅವಿನಾಶಾ ತ್ವಿದಂ ", " ಅಚ್ಛೇದ್ಯೋಯಂ ", " ಅಭೇದ್ಯೋಯಂ " [2-24] ಎಂದು ತಿಳಿಸಿರುತ್ತಾನೆ. ನಿರ್ವಿಕಾರವಾದ ಆತ್ಮವಸ್ತುವಿನ ಪರಿಣಾಮವನ್ನು ಜ್ಞಾನಮತವು ಏನು ಹೇಳುತ್ತದೆಯೋ ಅದು ಶ್ರುತಿವಿರುದ್ಧ. " ಅಮೃತಾಕ್ಷರಂ ಹರಃ " ಎಂದು ಆತ್ಮನ ನಿರ್ವಿಕಾರತ್ವವನ್ನು ಹೇಳುವ ಶ್ರುತಿಗೆ ವಿರುದ್ಧ. ಅಥವಾ ದೇಹ ಪರಿಮಾಣವೇ ಆತ್ಮ ಎಂದರೆ " ಪಾದೇ ಮೇ ವೇದನಾ " ಮುಂತಾದ ರೀತಿಯಿಂದ ಪಾದಾದಿಮಸ್ತಕ ದೇಹದಲ್ಲಿರುವ ದುಃಖದ ಅನುಭವ ಆತ್ಮನು ದೇಹಪರಿಮಾಣ ಅಲ್ಲವೆಂದು ಒಂದು ವೇಳೆ ಹೇಳಿದರೆ ಅದೂ ಅಲ್ಲ. ಆದ್ದರಿಂದ ಆತ್ಮನು ಸ್ವಕರ್ಮಾನುಗುಣವಾಗಿ ಪರಿಗ್ರಹಿಸುವ ಗಜನಕೀಲಿಕಾವಿ ಶರೀರಾನುಕೂಲವಾದ ಪರಿಮಾಣದಿಂದ, ಹದ್ದೀಕ ಪರಿಮಾಣದಿಂದ ದುಃಖಾನುಭವ ಪಡುತ್ತಾನೆನ್ನುತ್ತಾರೆ, ಜ್ಞಾನ ಮತಸ್ಥರು. ಆದರೆ ಇದು " ವಿಷ್ಕೋಣುರಾತ್ಮಾ " ಎನ್ನುವ ಶ್ರುತಿಗೆ ವಿರುದ್ಧ. ಈ ಶ್ರುತಿವಾಕ್ಯದಲ್ಲಿ ಆತ್ಮನು ಅಣುಸ್ವರೂಪಿ ಎಂದು ತಿಳಿಸಿರುತ್ತೆ.

ಆತ್ಮನು ಜ್ಞಾನಾಶ್ರಯನು :— ಜ್ಞಾನಕ್ಕೆ ಸ್ಥಾನ, ಆವಾಸಸ್ಥಾನ. ಹೇಗೆ ದೀಪ ಮತ್ತು ಪ್ರಭೆ ಎರಡೂ ತೇಜೋದ್ರವ್ಯವಾಗಿರುತ್ತೆಯೋ ಹಾಗೆ, ದೀಪವು ಪ್ರಭೆಗೆ ಆಶ್ರಯವಿರುವ ರೀತಿಯೇ ಆತ್ಮನು ಜ್ಞಾನ ಸ್ವರೂಪಿಯಾದಕಾರಣ ಸ್ವಧರ್ಮರೂಪಿ ಜ್ಞಾನಕ್ಕೆ ಸ್ವಯಂ ಆಧಾರವಾಗಿರುತ್ತೆ. " ವಿಜ್ಞಾನಂ ಚರೇ ತೇನ ವಿಜಾನೀಯಾತ್ " [ಬೃ. ಉ. 6-5-15] " ಜ್ಞಾನಾದೇವಾಪಯೇ ಪುರುಷಃ ", " ವಿಷ್ಣುಃ ದೃಷ್ಟ್ವಾ ಶ್ರೋತಾ "

[ಸ್ಪಂದಕಾರಿಕೆ ೫, ೨-೪] ಮುಂತಾದ ಶ್ರುತಿಗಳಿಂದ ಆತ್ಮನ ಜ್ಞಾತೃತ್ವವನ್ನು ತಿಳಿಸಲಾಯಿತು. ಆತ್ಮ ತತ್ತ್ವವು ಜ್ಞಾನ ಸ್ವರೂಪವಲ್ಲದ್ದು, ಅದಕ್ಕೆ ಮತ್ತೊಂದು ಜ್ಞಾನವಿರಲು ಅವಕಾಶವಿಲ್ಲವೆನ್ನುತ್ತಾರೆ, ಅದ್ವೈತಿಗಳು. ಆತ್ಮನು ಜ್ಞಾನಾಶ್ರಯನಲ್ಲ, ಜ್ಞಾನವಾಗಿರುವ ಕಾರಣ ಈ ರೀತಿ ಅನುಮಾನದಿಂದ ಈ ವಿಷಯವನ್ನು ಅವರು ಸ್ಥಿರಪಡಿಸಲು ಅಪೇಕ್ಷಿಸುತ್ತಾರೆ. ಅವರಿಗೆ ಇದು ಸೂಕ್ತವಲ್ಲ.

"ಅಹಮಿದಂ ಜಾನಾಮಿ" ನಾನು ಇದನ್ನು ತಿಳಿದಿದ್ದೇನೆ. ಹೀಗೆ ತನ್ನನ್ನು ಜ್ಞಾತೃ ಎಂದು ಪ್ರತಿಯೊಬ್ಬರೂ ತಮ್ಮನ್ನು ತಿಳಿದಿರುವುದನ್ನು ಪ್ರತ್ಯಕ್ಷವಾಗಿ ನೋಡುವ ಕಾರಣ, ಆತ್ಮನು ಇಲ್ಲವೆಂದು ಹೇಳುವವರ ಪಕ್ಷ ಉಚಿತವಲ್ಲ. 'ಇದಂ' ಎಂದು ಜ್ಞಾನವಿಷಯವಾದ ಜ್ಞೇಯವಸ್ತುವನ್ನು ಉತ್ತಮ ಪುರುಷದಿಂದ, ಅದರ ಆಶ್ರಯಭೂತವಾದ ಜ್ಞಾತೃವನ್ನು ಸಹ ಹೋಲಿಸಿ ಜ್ಞಾನಾಶ್ರಯವಾದ ವಸ್ತು ಸ್ವಯಂ ತನ್ನನ್ನು 'ಅಹಂ' ಶಬ್ದದಿಂದ ತಿಳಿಸುವ ಕಾರಣ ಅದ್ವೈತ ಮತವು ಯುಕ್ತವಲ್ಲ.

ಶ್ರೀ ಪರಾಶರಭಟ್ಟರು (ಶ್ರೀರಾಮಾನುಜಾಚಾರ್ಯರ ಪ್ರಮುಖ ಶಿಷ್ಯರು, ಅನೇಕ ಸ್ತೋತ್ರ ಮತ್ತು ಗ್ರಂಥಗಳ ಕರ್ತೃ) ಬೌದ್ಧಮತವನ್ನು ನಿರಸನ ಮಾಡುವ ಸ್ಥಳದಲ್ಲಿ "ಇದಮಹಮನುಭವೇದ್ವಿತ್ಯಾತ್ಮಮಿಥ್ಯೋಪವಿಭೇದಂ ಸ್ಮರತಿ ಯದಿತದ್ವೈಕ್ಯಂ ಬಾಹ್ಯಮನ್ಯೋಽಯಮಸ್ತು" ಎಂದು ಹೇಳಿರುತ್ತಾರೆ. 'ಜಾನಾಮಿ' ಎಂದು ಧರ್ಮಭೂತಜ್ಞಾನವು ಬೇರೆ, ತದಾಶ್ರಯವಾದ ಧರ್ಮಿ ಜ್ಞಾನ ಬೇರೆ ಎಂದು ಅನುಭವ ಸಿದ್ಧವಾಗಿರುವ ಕಾರಣ, ಈ ವ್ಯತ್ಯಾಸವನ್ನು ಒಪ್ಪಿಕೊಳ್ಳದೆ ಇದ್ದರೆ, ಆತ್ಮನ ಮತ್ತು ಧರ್ಮಭೂತಜ್ಞಾನದ ವ್ಯತ್ಯಾಸವಿಲ್ಲ. ಆತ್ಮನು ಜ್ಞಾನಸ್ವರೂಪವುಳ್ಳವನೇ ಆದರೂ, ಜ್ಞಾನಾಶ್ರಯನೇ ಎಂದು ಹೇಳಿದ್ದೇ ಆದರೆ "ಇದಮಹಂ ವೇದ್ಮಿ" ಈ ಸ್ಥಳದಲ್ಲಿ 'ಇದಂ' ಶಬ್ದದಿಂದ ಹೇಳುವ ಘಟ-ಪಟಾದಿ ವಿಷಯಗಳಿಗೆ ಅಹಂ ಶಬ್ದಾರ್ಥವಾದ ಆತ್ಮಶಬ್ದಕ್ಕೂ ಕೂಡ ಅಭೇದವನ್ನು ಹೇಳಬೇಕಾಗುತ್ತೆ. ಜ್ಞೇಯ ಮತ್ತು ಜ್ಞಾತೃಗಳಿಗೆ ಹೇಗೆ ಭೇದವು ಸಿದ್ಧವೋ ಹಾಗೆಯೇ ಜ್ಞಾನ ಮತ್ತು ಜ್ಞಾತೃಗಳಿಗೂ ಭೇದವು ಸಿದ್ಧ. ಆತ್ಮನು ಜ್ಞಾನಾಶ್ರಯವಲ್ಲ ಎನ್ನುವ

ಪ್ರತಿಜ್ಞೆಯನ್ನು ಒಪ್ಪುತಕ್ಕದ್ದೇ. ಜ್ಞಾನತ್ವಾತ್ ಎನ್ನುವ ಕಾರಣ ದುಷ್ಟ ಕಾರಣ. ಸೋಪಾಧಿಕ. ಧರ್ಮಭೂತಜ್ಞಾನವು ಮತ್ತೊಂದು ಜ್ಞಾನಕ್ಕೆ ಆಶ್ರಯ ಎನ್ನುವುದನ್ನು ಒಪ್ಪಿಲ್ಲ ಆದ್ದರಿಂದ ಆತ್ಮಸ್ವರೂಪವಾದ ಧರ್ಮಭೂತಜ್ಞಾನವು ಇಲ್ಲದೇ ಇರುವುದರಿಂದ ಜ್ಞಾನಾಶ್ರಯವಾಗಿರುವುದು ಯುಕ್ತವಾಗಿಯೇ ಇದೆ. ಹಾಗೆಯೇ ಜ್ಞಾನಸ್ವರೂಪಿಯಾದ ಆತ್ಮನಿಗೆ ಜ್ಞಾನಾಶ್ರಯತ್ವವು ಇಲ್ಲ ಎನ್ನುವುದು ಶಂಕರ ಮತ. ಇದು ಯುಕ್ತವಲ್ಲ. ನೈಯಾಯಿಕರು ಆತ್ಮನನ್ನು ಜಡವೆನ್ನುತ್ತಾರೆ. ಅವರ ಜ್ಞಾನವು ಆದ ರೊಂದಿಗೇ ಸೇರಿಕೊಂಡಿರುವ ಜ್ಞಾನಾದಿ ವಿನಾಶವೇ ಮೋಕ್ಷವೆನ್ನುತ್ತಾರೆ.

"ಏಕವಿಂಶತಿಸ್ತತ್ವಭೇದಭಿನ್ನಸ್ಯ ದುಃಖಸ್ಯ ಧ್ವಂಸಃ... ಮೋಕ್ಷಃ" ಎನ್ನುತ್ತಾರೆ. ಶರೀರ, ಷಡಿಂದ್ರಿಯ, ಆರು ವಿಷಯ, ಆರು ಬುದ್ಧಿ, ಸುತ್ತ ಸುಖ, ದುಃಖ ಮುಂತಾಗಿ 21 ಎನ್ನುತ್ತಾರೆ ಇವುಗಳ ವಿನಾಶವೇ ಮೋಕ್ಷ. ಮೋಕ್ಷ, ಪಾಷಾಣಕಲ್ಪ. ಇದೇ ಅವರ ಮತ ಇದು ಸರಿಯಲ್ಲ. "ನೇತಿ ನೇತ್ಯಾತ್ಮಾ ವಿಜ್ಞಾತೇಃ ವಿಪರಿಲೋಪೋಽಸ್ಯ ವಿದ್ಯತೇ" [ಬೃ. ಉಪ. ೪-೩-೨೫] ಈ ರೀತಿ ಶ್ರುತಿಯು ಆತ್ಮನಿಗೆ ಧರ್ಮಭೂತ ಜ್ಞಾನದ ಸಂಬಂಧ ನಿತ್ಯವೆಂದು ಹೇಳುವ ಕಾರಣ, ಹೇಗೆ ಆತ್ಮಸ್ವರೂಪವು ನಿತ್ಯವೋ ಹಾಗೆಯೇ ಧರ್ಮಭೂತಜ್ಞಾನವೂ ಸಹ ನಿತ್ಯವೇ ಆಗಿರುತ್ತೆ. ಹೇಗೆ ಜ್ಞಾನವು ದ್ರವ್ಯವೋ ಹಾಗೆಯೇ ಧರ್ಮಭೂತಜ್ಞಾನವೂ ದ್ರವ್ಯವೇ. ಆದ್ದರಿಂದ ಆತ್ಮಸ್ವರೂಪಕ್ಕೆ ಸಂಕೋಚ-ವಿಕಾಸವನ್ನು ಒಪ್ಪಲಾಗಿದೆ. ಶ್ರೀರಾಮಾನುಜಸಿದ್ಧಾಂತದಲ್ಲಿ ಬಂಧಕಾಲ ಮತ್ತು ಮೋಕ್ಷಕಾಲದಲ್ಲಿ ಸಮಾನವಾಗಿ ಆತ್ಮನ ಧರ್ಮಿಸ್ವರೂಪವು ನಿತ್ಯರೂಪವಾಗಿದ್ದರೂ ಧರ್ಮಭೂತಜ್ಞಾನಕ್ಕೆ ಅನಾದಿಕರ್ಮರೂಪಸಂಕೋಚವೇ ಸಂಸ್ಕಾರ. ಭಗವತ್ಕೈಂಕರ್ಯದ ಮೂಲಕ ಧರ್ಮಭೂತಜ್ಞಾನ ವಿಕಾಸವೇ ಮೋಕ್ಷಸಾಮ್ರಾಜ್ಯ.

ವಿಕಾರದಿಂದ ಪ್ರಾಪ್ತವಾದ ಪ್ರಕೃತಿ ದ್ರವ್ಯವು ಹೇಗೆ ನಿತ್ಯವೋ ಹಾಗೆಯೇ ಸಂಕೋಚ-ವಿಕಾಸರೂಪಿ ಧರ್ಮಭೂತಜ್ಞಾನ ದ್ರವ್ಯವು ನಿತ್ಯವಾಗಿರುತ್ತೆ. ಅಂದರೆ, ಆತ್ಮಸ್ವರೂಪಿ ಜ್ಞಾನವು ನಿತ್ಯವಾಗಿರುತ್ತೆ. ಆತ್ಮಾ ಜ್ಞಾತೃ ಎಂದು ಹೇಳುವಾಗಲೇ ಕರ್ತಾ, ಭೋಕ್ತಾ ಎಂದು ಸಿದ್ಧವಾಗುತ್ತೆ. ಕ್ರಿಯೆ ಏನೆಂದರೆ "ಜಾನಾತಿ ಇಚ್ಛತಿ ಪ್ರಯತತೇ ಕರೋತಿ" ಎಂದು

ಹೇಳಿ ಜ್ಞಾನ ವಿಶೇಷಣ ಪ್ರಯುಕ್ತದ ಅನಂತರ ಭಾವಿಪ್ರವೃತ್ತಿ ಉಂಟಾಗುವುದರಿಂದ ತದಾಶ್ರಯಣಾದವನು ಕರ್ತೃವಾದ್ದರಿಂದ ಕರ್ತೃತ್ವಕ್ಕೆ ಜ್ಞಾನಾವಸ್ಥೆ ವಿಶೇಷ ನಿಮಿತ್ತಕಾರಿಕ. ಭೋಕ್ತೃತ್ವವೆಂದರೆ ಭೋಗಾಶ್ರಯತ್ವ.

ಸಾಂಖ್ಯಮತದಲ್ಲಿ ಗುಣಗಳಿಗೇ ಕರ್ತೃತ್ವವಿರುತ್ತೆ. ಆತ್ಮನಿಗೆ ಕರ್ತೃತ್ವವಿಲ್ಲ. ಸಾಂಖ್ಯಮತದಲ್ಲಿ ಸತ್ತ್ವ, ರಜಸ್ಸು, ತಮಸ್ಸೆಂಬ ಮೂರು ದ್ರವ್ಯಗಳೇ ಪ್ರಕೃತಿ.

ಶ್ರೀ ಭಗವದ್ರಾಮಾನುಜಾಚಾರ್ಯರ ಮತದಲ್ಲಿ ಸತ್ತ್ವ, ರಜಸ್ಸು ಮತ್ತು ತಮಸ್ಸು ಮುಂತಾಗಿ ಮೂರುಗುಣಗಳಿಂದಿಗೆ ಕೂಡಿರುವುದೇ ಪ್ರಕೃತಿತತ್ತ್ವ ಎಂದು ಹೇಳುತ್ತಾರೆ. ಆದ್ದರಿಂದ ಸಾಂಖ್ಯಮತಕ್ಕೆ ಜನು ಸಾರವಾಗಿ ಗುಣಕ್ಕೆ ಕರ್ತೃತ್ವ ಅಥವಾ ಪ್ರಕೃತಿಗೆ ಕರ್ತೃತ್ವ ಎನ್ನುವುದು ಒಂದೇ ಆಗಿರುತ್ತೆ. ಈ ರೀತಿ ಸಾಂಖ್ಯಸಿದ್ಧಾಂತದಲ್ಲಿ ಪ್ರಕೃತಿಗೆ ಕರ್ತೃತ್ವವುಂಟು ಆದರೆ ಆತ್ಮನಿಗೆ ಕರ್ತೃತ್ವವಿಲ್ಲ ಎಂದು ತಿಳಿಸಿದೆ.

ಕಠೋಪನಿಷತ್ತಿನಲ್ಲಿ "ನ ಜಾಯತೇ ಮ್ರಿಯತೇ" ಮುಂತಾಗಿ ಆತ್ಮನನ್ನು ಜನ್ಮ-ಮರಣಾದಿ ರೂಪ ಧರ್ಮವನ್ನು ಪ್ರತಿಷೇಧಗೊಳಿಸಿ, "ಹಂತಾಚೇತ್ ಮನ್ಯತೇ ಹಂತುಂ" ಎಂದು ತಿಳಿಸಿ ನಾಶಮಾಡಲಾದ ವ್ಯಾಪಾರಗಳಲ್ಲಿ ಕರ್ತೃತ್ವವನ್ನು ನಿಷೇಧಗೊಳಿಸಿರುವ ಕಾರಣ, ಗೀತೆಯಲ್ಲಿ ಸರ್ವೇಶ್ವರನು ಸ್ವತಃ "ನಾನ್ಯಂ ಗುಣೇಭ್ಯಃ ಕರ್ತಾರಂ" [14.19] "ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ" [13-21] ಎಂದು ಹೇಳಿರುವ ಕಾರಣ, ಶಾಸ್ತ್ರದಲ್ಲಿ ಆತ್ಮನಿಗೆ ಅಕರ್ತೃತ್ವವು ಮತ್ತು ಗುಣಗಳಿಗೆ ಕರ್ತೃತ್ವವೆನ್ನುವ ಕಾರಣ, ಪ್ರಕೃತಿಗೇ ಕರ್ತೃತ್ವವಿದೆ. ಆದರೆ ಆತ್ಮನಿಗೆ ಕರ್ತೃತ್ವವಿಲ್ಲ ಎನ್ನುತ್ತಾರೆ, ಸಾಂಖ್ಯರು. ಆದರೆ ಇದು ಯುಕ್ತವಲ್ಲ. ಪ್ರಕೃತಿಗೇ ಕರ್ತೃತ್ವವಿದ್ದು ಒಂದು ವೇಳೆ ಆತ್ಮನಿಗೇ ಕರ್ತೃತ್ವವಿಲ್ಲದೇ ಇದ್ದರೆ ವಿಧಿನಿಷೇಧವಾದ ಶಾಸ್ತ್ರವು ಸ್ವಯಂ ಅಧಿಕಾರಿಯಾಗಿದ್ದು ಅದರ ವಶದಲ್ಲಿ ಸ್ವತಃ ನಡೆಯಬೇಕಾಗುತ್ತೆ. ವಿಹಿತಾಕರಣ ನಿಷಿದ್ಧಕರಣ ಪ್ರಯುಕ್ತ ಸುಖ-ದುಃಖರೂಪ ಫಲ ಭೋಕ್ತೃತ್ವವೂ ಸಹ ಇರಲಾರದು.

ಅದ್ದರಿಂದ ಜೀವಾತ್ಮನು ಜ್ಞಾತೃವಾಗಿರುವ ಹಾಗೆಯೇ ಕರ್ತೃವಾಗಿಯೂ ಸಹ ಇರುತ್ತಾನೆ.

ಸಾಂಸಾರಿಕ ಪ್ರವೃತ್ತಿಯಲ್ಲಿ ಅಂದರೆ ಸ್ತ್ರೀ ಅನ್ನಪಾನಾದಿ ಭೋಗಗಳ ಉದ್ದೇಶಕ್ಕೆ ಮಾಡುವ ವ್ಯಾಪಾರಗಳ ಕರ್ತೃತ್ವವು ಗುಣಸಂಸರ್ಗಕೃತವಾದ್ದರಿಂದ ಔಪಾಧಿಕವಾಗಿರುತ್ತೆ. ಇದು ಸ್ವರೂಪ ಪ್ರಯುಕ್ತವಲ್ಲ. ವಿಹಿತವಿಷಯವಾದ ಭಗವದ್-ಭಾಗವತ ಮತ್ತು ಆಚಾರ್ಯರ ವಿಷಯದಲ್ಲಿ ಮಾಡುವ ಕೈಂಕರ್ಯವು ಕರ್ತೃತ್ವ ಸ್ವಾಭಾವಿಕವಾಗಿರುತ್ತೆ. ಈ ಆತ್ಮನ ಕರ್ತೃತ್ವವೂ ಸಹ ಭಗವದಧೀನವಾಗಿರುತ್ತೆ. ಇದನ್ನು "ಪರಾತ್ತು ತಚ್ಛ್ರುತೇಃ [2-3-40] ಎಂದು "ಬ್ರಹ್ಮಸೂತ್ರದಲ್ಲಿ ಶ್ರೀವೇದವ್ಯಾಸರು ತಿಳಿಸಿರುತ್ತಾರೆ.

ಅದ್ದರಿಂದ ಆತ್ಮನು ಜ್ಞಾತೃ, ಕರ್ತಾ, ಭೋಕ್ತಾ ಎಂದು ತಿಳಿದೆವು. ಜ್ಞಾತೃವಾದ ಜೀವನನ್ನು "ವಿಜ್ಞಾನೇಂ ಯಜ್ಞಂ ತನುತೇ" ಎಂದು ಹೇಳಿ ಜ್ಞಾನರೂಪಿ ಎಂದೇ ಶಾಸ್ತ್ರದಲ್ಲಿ ತಿಳಿಸಿರುತ್ತೆ. ಅಂದರೆ ಜ್ಞಾನಸ್ವರೂಪಿಯಾದ್ದರಿಂದ ಜ್ಞಾನಸಾಧಭೂತಗುಣವಾಗಿ ನಿರೂಪಕಧರ್ಮವಾಗಿರುತ್ತೆ.

"ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್" [2-3-29]
"ಯಾವದಾತ್ಮಭಾವಿತ್ವಾಚ್ಚ ನ ದೋಷಃ ತದ್ದರ್ಶನಾತ್" [2-3-30]
ಇಂತಹ ಸೂತ್ರದ್ವಯದಿಂದ ಶ್ರೀವೇದವ್ಯಾಸರು ಈ ಅರ್ಥವನ್ನು ತಿಳಿಸಿರುತ್ತಾರೆ.

ಆತ್ಮನು ವಿಯಾವ್ಯನು :- ಅಂದರೆ ಶರೀರದ ಸಕಲ ಪ್ರವೃತ್ತಿಗಳೂ ಕೂಡ ಶರೀರಿಯ ಬುದ್ಧ್ಯಧೀನವಾಗಿದುವುದರಿಂದ "ಯಸ್ಯ ಆತ್ಮಾ ಶರೀರಂ" ಎನ್ನುತ್ತಾರೆ. ಈಶ್ವರನ ಶರೀರರೂಪದಲ್ಲಿ ಹೇಳಿರುವ ಈ ಆತ್ಮವಸ್ತುವಿನ ಸಕಲ ವ್ಯಾಪಾರಗಳೂ ಸಹ ಶರೀರಿರೂಪಿ ಪರಮಾತ್ಮನ ಬುದ್ಧ್ಯಧೀನವಾಗಿರುತ್ತೆ.

ಆತ್ಮನು ಧಾರ್ಯನು :- ಈಶ್ವರನ ಸ್ವರೂಪ ಮತ್ತು ಆವನ ಸಂಕಲ್ಪ ಎರಡರಿಂದ ಈ ಆತ್ಮನು ಧಾರಣವಾಗುತ್ತಾನೆ.

ಆತ್ಮನು ಶೇಷಭೂತನು :- ಚಂದನ-ಕುಸುಮ-ತಾಂಬೂಲಾದಿಗಳು

ತನ್ನದಾದ ಒಂದು ಅಕಾರವಿಹಿತವಾಗಿ, ಉಪಯೋಗಿಸಿ ಧರಿಸುವವರನ್ನು ಸಂತುಷ್ಟಗೊಳಿಸಿ, ಉಪಯೋಗ ಪಡಿಸುವವರಿಗೆ ತನ್ನನ್ನೇ ಕೊಟ್ಟು, ತನ್ನ ಜೊತೆಯಲ್ಲಿರುವವರಿಗೂ ಹಂಚುವ ರಾಗೆ ಇಷ್ಟ-ವಸ್ತುಯೋಗರೂಪದ ಲ್ಲಿರುತ್ತೆ. ರಾಗೆಯೇ ಅಕ್ಕನು ಶೇಷನನಸ್ತುವಾದರೂ ಸ್ವಪ್ರಯೋಜನ ಗಂಧವಿಲ್ಲದೆ ಶೇಷಿಗೇ ವಿಶೇಷಣವಾಗಿ ವಸ್ತುಯೋಗ ದಿವ್ಯಯಲ್ಲಿ ಭಗವಂತ ನನ್ನು ಪಡೆದು ಭಾಗವತೋತ್ತಮರನ್ನು ತಮ್ಮವರನ್ನಾಗುವಂತೆ ಇವ್ವ ವಸ್ತುಯೋಗಪರ್ಯಾವಾಗಿರುತ್ತೆ. ಚಿದ್ರವ್ಯವಾದ ಆತ್ಮನಿಗೆ ಅಚಿದ್ ದ್ರವ್ಯವಾದ ಚಂದನ-ಕುಸುಮಾದಿ ದೃಷ್ಟಾಂತದಲ್ಲಿ ಹೇಳುವುದು ಪಾರ ತಂತ್ರ್ಯವಿಶೇಷವನ್ನು ತೋರಿಸುವುದಕ್ಕಾಗಿಯೇ ಆಗಿರುತ್ತದೆ.

ಆತ್ಮ ಸ್ವರೂಪಯಾಥಾತ್ಮ್ಯ ಭಗವಚ್ಛೇಷತ್ವವಾಗಿರುತ್ತೆ. ಆದ್ದ ರಿಂದ ಶ್ರೀ ನಮ್ಮಾಳ್ವಾರ್ರವರೂ ಸಹ ಪ್ರಾಪ್ಯನಿರ್ಣಯ ಮಾಡುವ ಸಮಯದಲ್ಲಿ " ತನಕ್ಕೇಯಾಹ ಎನೈಕೊಳ್ಳುಮೀಥೇ ಎನಕ್ಕೇ ಕಣ್ಣನೆಯರ್ ಗೊಳ್ ಶಿರಪ್ಪೇ." ಈ ಭಗವಚ್ಛೇಷತ್ವವೇ " ಯಸ್ಯಾಸ್ಮಿನಹಮುಂಕ ರೇಮಿ", [ಯಜುರ್ವೇದ] " ಪರವಾನಸ್ಮಿ " [ಶ್ರೀ. ರಾ. ಅಯೋಧ್ಯಾ] " ದಾಸಭೂತಾಸ್ಸ್ವತಃ ಸರ್ವೇ " [ಪಾಂಚರಾತ್ರ] ಮೊದಲಾದ ಶ್ರುತಿಸ್ಮೃತಿಗಳು ತಿಳಿಸಿರುತ್ತೆ.

ಜ್ಞಾತೃತ್ವಾದಿಗಳು ಮುಖ್ಯ ಶೇಷತ್ವಾದಿಗಳು ಸಹ ಆತ್ಮಧರ್ಮ ವಾಗಿದ್ದರೂ ಸಹ ಜ್ಞಾತೃತ್ವಾದಿಗಳಿಗಿಂತಲೂ ಶೇಷತ್ವವೇ ಪ್ರಬಲ. ಭಾಗವತಶೇಷತ್ವದಿಂದ ಜೀವನಿಗೆ ಸತ್ತೆಯುಂಟಾಗಿರುತ್ತದೆ. ಈ ಸತ್ತೆಯು ಶೇಷತ್ವದಿಂದ ಪ್ರಾಪ್ತವಾದದ್ದು. ಆತ್ಮನಿಗೆ ಜ್ಞಾತೃತ್ವಾದಿಗಳು ಅತಿ ಶಯವಾದದ್ದು. ಆದ್ದರಿಂದ ಪ್ರಣವದೊಳಿ ಓಂಕಾರದಿಂದ ಲುಪ್ತ ಚತುರ್ಥೀವಿಶಿಷ್ಟ ಅಕಾರದಲ್ಲಿ ಪ್ರಸ್ಫುಟವಾಗಿ ಶೇಷತ್ವವನ್ನು ತಿಳಿಸಿ ಅನಂತರ " ಮ " ಕಾರವಾದ ಮೂರನೆಯ ಅಕ್ಷರದಿಂದ ಜ್ಞಾತೃತ್ವವನ್ನು ತಿಳಿಸಲಾಗಿದೆ.

ಸೀತಾದೇವಿ — " ನಹಿ ಮೇ ಜೀವಿತೇನಾರ್ಥಃ "; ಶ್ರೀ ನಮ್ಮಾಳ್ವಾರ್ರವರು — " ಮಾಯಾಳಂಕವರಾಥಾ ಮುಡಿವುಮಾನೈ ಕುರೈವಿಲವೇ ";

ಯಾಮುನಾಚಾರ್ಯರು – "ನ ದೇಹಂ ನ ಪ್ರಾಣಾನ್" ಇತ್ಯಾದಿಗಳಿಂದ ಭಗವತ್ಕೈಂಕರ್ಯವಿಲ್ಲದಿದ್ದ ಸಮಯದಲ್ಲಿ ದೇಹ ಮತ್ತು ಲಕ್ಷ್ಮೀಯನ್ನು ತ್ಯಾಜ್ಯವೇ. ಆದರೆ ಅಪೇಕ್ಷೆಯು ಸಮಯದಲ್ಲಿ ಇವು ಗಳೆಲ್ಲವೂ ಉಪಾದೇಯವೇ. ಇದನ್ನು "ಏನಾ ವೆವ್ಯಾಯಂ ಕರುಂಕಣ್ಣಂ" ಎಂದು ನಮ್ಮಾಳ್ವಾರು ತಿಳಿಸಿರುತ್ತಾರೆ. [ತಿ.ವೊಳಿ. 5-3-2] ಜ್ಞಾತೃತತ್ತ್ವದಿಂದ ಆತ್ಮನು ವಿಜಡವಿಲಕ್ಷಣನು ಮತ್ತು ದೇಹತ್ವದಿಂದ ಚಿತ್ತನು ಈಶ್ವರ ವಿಲಕ್ಷಣನು ಎಂದು ತಿಳಿಯಬಹುದು. ಈ ಜ್ಞಾನದಿಂದ ನಿವೃತ್ತವಾದ ಅಜ್ಞಾನ ಯಾವುದೆಂದರೆ ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ; ಈ ಎರಡೂ ದೂರವಾಗುತ್ತೆ.

"ಪ್ರೇತ್ಯಾತ್ಮ ಭ್ರಾಂತಿಃ ಗಳಿತಾ ಚಿದಚಿಲ್ಲಕ್ಷಣಧಿಯಾ ಜೀವೇ ಶೈಕ್ಯಪ್ರಭೃತಿಕಲಹಃ ಶಮ್ಯತಿ ಭಜನಾತ್ |" "ಅತೋ ಭೋಕ್ತಾ ಭೋಗ್ಯಂ ಪದುಭಯಮನಿಯಂತೇತಿನಿಗಮೈಃ ವಿಭಕ್ತಮ್ ನಸ್ತತ್ತ್ವ ತ್ರಯಮಪಿ ಪದಿಶಂತ್ಯಕ್ಷಪಧಿಯಃ" ಈ ರೀತಿ ಶ್ರೀವೇದಾಂತದೇಶಿಕರು ರಹಸ್ಯತ್ರಯಸಾರದ ಚಿಂತನಾಧಿಕಾರದ ಪದಂಧದಲ್ಲಿ ತಿಳಿಸಿರುತ್ತಾರೆ. ಚೇತನನಾದ ಆತ್ಮನು ಬದ್ಧ, ಮುಕ್ತ, ನಿತ್ಯನೆಂದು ಮೂರು ವಿಧವಾಗಿರುತ್ತಾನೆ. ಬದ್ಧನೆಂದರೆ ಅನುವೃತ್ತ ಸಂಸಾರಿ, ಮುಕ್ತನು ನಿವೃತ್ತ ಸಂಸಾರಿ, ಯಾವನು ನಿತ್ಯನೋ ಅವನು ಅವೃತ್ತ ಸಂಸಾರಿ. ಅಂದರೆ, ಭಗವನ್ಮಾಯಾ ತಿರೋಹಿತ–ಸ್ವಸ್ವರೂಪದಿಂದ ಪುಣ್ಯ-ಪಾಪರೂಪ ಕರ್ಮಾನುಗುಣವಾಗಿ ಜೀವಾದಿ ಶರೀರವಿಶಿಷ್ಟರಾಗಿ ಆಯಾ ಶರೀರದಲ್ಲಿ ಅಹಂಬುದ್ಧಿಯಿಂದ ಶರೀರಬಂಧುಗಳೊಡನೆ ಮಮತೆ ಇಟ್ಟು ಸುಖ-ದುಃಖವನ್ನು ಅನುಭವಿಸುವ ಜನರು ಅನುವೃತ್ತ ಸಂಸಾರಿಗಳು. ಜಾಯಮಾನಕಾಲಕರ್ಮಾದಿಂದ ಮೋಕ್ಷದಲ್ಲಿ ಆಸಕ್ತಿಯಾಗಿ ಕರ್ಮಜ್ಞಾನಾಂಗಗಳ ಭಕ್ತಿರೂಪದಿಂದ ಬರುವ ಭಗವದನುಗ್ರಹ ಯಾವುದೆಂದರೆ ಪ್ರಪಂಚದ ಮೂಲದಿಂದ ಪಡೆದ ಭಗವದನುಗ್ರಹದಿಂದ ಸಾಂಸಾರಿಕವಾದ ಪಾಪ ನಿವೃತ್ತಿಯಾಗಿ ಅವಿರ್ಭೂತ ಸ್ವರೂಪನಾಗಿ ಭಗವದನುಭವ ಕೈಂಕರ್ಯವನ್ನಾಗಿ ಭೋಗ ಮುಕ್ತನಾಗಿರುವವನು ಯಾವನೋ ಅವನೇ ನಿವೃತ್ತ ಸಂಸಾರಿ. ಭಗವತ್ ಸಮಾಶ್ರಯಣ ಮಾಡಿ ಸಂಸಾರನಿವೃತ್ತನಾಗಿ ಶ್ರೀ ವೈಕುಂಠಕ್ಕೆ ಹೋಗಿ

ಸ್ವಸ್ವರೂಪಾನುಭವವನ್ನು ಪಡೆದಿರುವ ಕೇವಲನಿಗೂ ಮುಕ್ತನೆಂದೇ ನಿರ್ದೇಶ. ಅಸ್ಪಷ್ಟಸಂಸಾರಗಂಧನಾಗಿ ಪ್ರಾರಬ್ಧ ಸಹಜಪಾಸ್ಯದಿಂದ ಭಗವದಾರಾಧನೆಯನ್ನು ಜನವರತವಾಗಿ ಮಾಡುವವನು ನಿತ್ಯನೆಂದು.

"ಯಸ್ಯ ಪೂರ್ವೇ ಸಾಧ್ಯಾಸ್ಸಂತಿ ದೇವಾಃ|" "ಯತ್ರ ಋಷಯಃ ಪ್ರಥಮಜಾಯೇ ಪುರಾಣಾಃ" ಹೀಗೆ ಶ್ರುತಿಗಳಲ್ಲಿ ಪ್ರಶಂಸಿಸಲ್ಪಡುವ ಸ್ವಚ್ಛಂದಾನುವೃತ್ತಿ ಆದಿವಾಕ್ಯಗಳಿಂದ ಗದ್ಯದಲ್ಲಿ ಶ್ರೀಭಾಷ್ಯಕಾರರಿಂದ ಪ್ರಶಂಸಿತರಾದ ಶ್ರೀ ತಿರುವನಂದಾಳ್ವಾನ್, ವಿಷ್ವಕ್ಸೇನರು, ಗರುಡರು ಮುಂತಾದ ನಿತ್ಯಸೂರಿಗಳಿಗೆ ಅವತ್ತಪಂಸಾರಿ ಎನ್ನುತ್ತಾರೆ.

ಆತ್ಮರು ಅನೇಕ :- ಇಲ್ಲಿ ಕೆಲವು ಜನರು ಆತ್ಮಭೇದವಿಲ್ಲ, ಏಕಾತ್ಮ ನೆನ್ನುತ್ತಾರೆ. ಒಂದೇ ಶರೀರವು ಜೀವಪೊಂದಿಗೆ ಸೇರಿರುತ್ತೆ, ಅನ್ಯ ಶರೀರವು ನಿರ್ಜೀವ, ಸಜೀವ ಶರೀರ ಇದೆ ಎಂಬ ನಿಯಮವೂ ಇಲ್ಲ, ಹೀಗೆಂದು ಶಂಕರ ಮತಾನುಯಾಯಿಗಳ ಅಭಿಪ್ರಾಯ. ಇದು ಯುಕ್ತವಲ್ಲ.

ಒಂದು ವೇಳೆ ಆತ್ಮ ಭೇದವಿಲ್ಲವಾದರೆ ಒಬ್ಬನು ಸುಖಪಡುವಾಗ ಮತ್ತೊಬ್ಬನು ದುಃಖಪಡುವುದನ್ನು ನೋಡುವುದರಿಂದ ಈ ಸುಖ-ದುಃಖ ವ್ಯವಸ್ಥೆ ಇರಬಾರದು; ಸುಖ-ದುಃಖ ಎರಡೂ ಏಕಾತ್ಮದಲ್ಲಿದ್ದರೆ ಯಾವಾಗಲೆ ಸುಖ-ದುಃಖದ ಅನುಭವ ಒಬ್ಬರಿಗೇ ಇರಬೇಕು; ಆದರೆ ಹಾಗಿಲ್ಲ. ಆದ್ದರಿಂದ ಸುಖ-ದುಃಖವು ನಿಯತವಾಗಿರುವುದರಿಂದ ಆತ್ಮಭೇದ ವಿರುತ್ತೆ. ಆದರೆ ಏಕಾತ್ಮವಾದ ಪಕ್ಷದಲ್ಲಿ ಒಂದು ಸಾಂಸಾರಿಕ ಮತ್ತೊಂದು ಮುಕ್ತ. ಎಂದರೆ ಬದ್ಧಮುಕ್ತವ್ಯವಸ್ಥೆ. ಒಬ್ಬ ಶಿಷ್ಯ ಮತ್ತು ಆಚಾರ್ಯ ಎಂದರೆ ಶಿಷ್ಯಾಚಾರ್ಯ ವ್ಯವಸ್ಥೆ ಅನುಪಪನ್ನವಾಗಿರುತ್ತೆ. ಆದರೆ ವಿಷಮ ಸೃಷ್ಟಿಯು ಅನುಪಪನ್ನವಾಗಿರಬಹುದು.

ದೇವ – ತಿರ್ಯಕ್ – ಮನುಷ್ಯ – ಸ್ಥಾವರ – ರೂಪದಿಂದ ಕೆಲವು ಸುಖೋತ್ತರ ಮತ್ತೆ ಕೆಲವು ದುಃಖೋತ್ತರರೂಪದಿಂದ, ಇನ್ನು ಕೆಲವು ಸುಖ-ದುಃಖ ಮಿಶ್ರರೂಪದಿಂದ ಪ್ರಾಪಂಚಿಕ ವಸ್ತುಗಳನ್ನು ವಿಷಮರೂಪದಿಂದ ಭಗವಂತನು ಸೃಷ್ಟಿಸುವುದಕ್ಕೆ ಕಾರಣ : ಜೀವಸ್ವರೂಪಭೇದ ಮತ್ತು ತಾರತಮ್ಯಭೇದವೆಂದು ತಿಳಿಯಬೇಕು. ಒಂದು ವೇಳೆ ಹಾಗಿಲ್ಲದಿದ್ದರೆ

ವಿಷಯವನ್ನೆತ್ತಿ ಅನುಪಪನ್ನವಾಗುತ್ತೆ. ಈರೀತಿ ಯುಕ್ತಿಯಿಂದ ಆತ್ಮನು ಅನೇಕವೆಂದು ಸರಿಹೊಂದುವಂತೆ ಮೂಲಪ್ರಮಾಣವಾದ ಶ್ರುತಿಯಿಂದಲೂ ಆತ್ಮದ ಬಹುತ್ವವು ಸರಿಹೊಂದುತ್ತೆ.

" ನಿತ್ಯೋ ನಿತ್ಯಾನಾಮ್ " [ಕಠೋಪ. ೨-೫-13] ಹೀಗೆ ಆತ್ಮ ಸ್ವರೂಪ ಭೇದವನ್ನು ಶ್ರುತಿಯು ಸಹ ತಿಳಿಸಿರುವುದರಿಂದ ಏಕಾತ್ಮವಾದವು ಶ್ರುತಿಗೆ ವಿರುದ್ಧವಾಗಿರುತ್ತೆ.

ಜೀವಬಹುತ್ವವು ಸಂಸಾರ ದೆಶೆಯಲ್ಲಿ ಮಾತ್ರವಲ್ಲ, ಮೋಕ್ಷ ದೆಶೆಯಲ್ಲಿಯೂ ಸಹ ಜೀವನ ಬಹುತ್ವ ಶಾಸ್ತ್ರಸಿದ್ಧ. " ಸದಾಪಶ್ಯಂತಿ" [ಪುರುಷ ಸೂಕ್ತ] " ಮಮ ಸಾಧರ್ಮ್ಯಮಾಗತಾಃ", [ಗೀತಾ 14-2] " ಮುಕ್ತಾನಾಂ ಪರಮಾಗತಿಃ " [ವಿಷ್ಣು ಸಹಸ್ರನಾಮ] " ಸಾಯುಜ್ಯಂ ಪ್ರತಿಪದ್ಯಾಯೇ " [ಸ್ಕೇ. ಉ.] " ಯೇಸ್ಮಿನ್ ಪರೇ ವಿರಾಜಂತೇ ", [ಕಠೋ ೨-೫.18] ಈ ರೀತಿ ಮೋಕ್ಷದೆಶೆಯಲ್ಲಿ ಆತ್ಮಭೇದವನ್ನು ಶ್ರುತಿ-ಸ್ಮೃತಿಗಳು ತಿಳಿಸುವುದರಿಂದ ಆತ್ಮಬಹುತ್ವವೇ ಶಾಸ್ತ್ರಸಿದ್ಧ.

ಶರೀರದಲ್ಲಿ ಔಪಾಧಿಕವಾದ ದೇವ-ಮನುಷ್ಯಾದಿ ಭೇದ, ಕಾಮ-ಕ್ರೋಧಾದಿ ಭೇದ ದೂರವಾಗಿ ಆತ್ಮನ ಸ್ವರೂಪವು ಅತ್ಯಂತ ಸಮಾನರೂಪದಿಂದ, ಯಾವ ವಿಧದಿಂದಲೂ ಭೇದವನ್ನು ತಿಳಿಸಲು ದೋಗ್ಯತೆ ಇರುವುದಿಲ್ಲ. ಈ ರೀತಿ ಇರುವ ಕಾರಣ, ಆತ್ಮ ಭೇದವು ಹೇಗೆ ಪರಿಯಾಗುತ್ತೆ ? ಅಂದರೆ ಪರಿಮಾಣ ಮತ್ತು ಹೊರೆ, ಲಕ್ಷಾದವುಳ್ಳ ಸ್ವರ್ಣ ಕಲಶ, ಪತ್ಥ, ಧಾನ್ಯ ಮುಂತಾದ ವಸ್ತುಗಳ ಭೇದಕವಾದ ಲಕ್ಷಣವಿಲ್ಲದಿದ್ದರೂ ಅವುಗಳಲ್ಲಿ ಜ್ಞಾನಾತ್ಮವು ಕಂಡುಬಂದರೂ ದೂವ ರೀತಿಯಿಂದಲೂ ಭೇದವನ್ನು ಹೇಗೆ ಹೋದಿಸಲಾಗುವುದಿಲ್ಲವೋ ಜಾಗೇ ವಿಕಾರರೂಪೀ ಮುಕ್ತಾತ್ಮರಿಗೆ ಸ್ವರೂಪಭೇದವು ಸಿದ್ಧವಾಗಿರುತ್ತೆ. ಅದರಿಂದ ಯುಕ್ತಿ ಮತ್ತು ಶಾಸ್ತ್ರದಿಂದ ಆತ್ಮಭೇದಸಿದ್ಧ. (1) ಜೀವಾತ್ಮರುಗಳಲ್ಲಿ ಕೆಲವರಿಗೆ ಅಂದರೆ " ಅಯಮ್ಮಾರಂ ಅಮರ್ತ್ಯಗಳ್ " [ತೈ. ಮೊಳ. 1-1-1] ಹಾಗೆಯೇ ಭಗವಜ್ಞಾನಕ್ಕೆ ಒಂದು ದಿನವೂ ಕಡಿಮೆಯಾಗದಂತೆ ತಮ್ಮ ಸ್ವರೂಪವಾದ ಗುಣ ವಿಭೂತಿಗಳನ್ನು ಅನವರತ ಅನುಭವಿಸುವ ನಿತ್ಯಸೂರಿಗಳ ಧ್ಯಾನವು

ಯಾವಾಗಲೂ ವಿಭುವಾಗಿರುತ್ತೆ; ಅಂದರೆ ಅವರ ಜ್ಞಾನವು ಸರ್ವದಾ ವಿಕಾಸವುಳ್ಳದ್ದಾಗಿಯೇ ಇರುತ್ತೆ. ಸರ್ವ ವಿಷಯರೂಪವಾಗಿರುತ್ತೆ. (2) ಜೀವಾತ್ಮರುಗಳಲ್ಲಿ ಕೆಲವರಿಗೆ ಎಂದರೆ " ಪೊಯ್ ನಿನ್ನ ಜ್ಞಾನಮುಮ್ ಪೊಲ್ಲಾಮೊಳುಸ್ಸಂ ಅಳಕ್ಕುಡಂಬುಮುಮಾಯ್ " ಇರುವ ಬದ್ಧ ಜೀವರ ಜ್ಞಾನವೂ ಸಹ ಕರ್ಮಾನುಗುಣವಾಗಿ ಸಂಕೋಚವಿಕಾಸಗಳಿಂದ ಕೂಡಿ ಯಾವಾಗಲೂ ಅವಿಭುವಾಗಿ ಸಂಕೋಚವಾಗಿಯೇ ಇರುತ್ತೆ. ಜ್ಞಾನ ಸಂಕೋಚವು ದೂರವಾಗಿ, ಜ್ಞಾನ ವಿಕಾಸವು ಉತ್ಪನ್ನವಾಗುವುದು ಮೋಕ್ಷದ ದೆಶೆಯಲ್ಲಿ. ಆದ್ದರಿಂದ ಸಂಸಾರ ಮಂಡಲದಲ್ಲಿ ಬ್ರಹ್ಮಾದಿ ಪಿಪೀಲಿಕಾಪರ್ಯಂತ ಸಕಲ ಸಂಸಾರಿಗಳ ಜ್ಞಾನವೂ ಸಂಕುಚಿತವಾಗಿರುತ್ತೆ. (3) ಕೆಲವು ಜನರ ಎಂದರೆ — " ಕರ್ಮಕಂಡೋರ್ " [ತಿ. ಮೊಳಿ. 8-2-10] ಭಗವದನುಗ್ರಹದಿಂದ ಸಂಸಾರ ಸಾಗರವನ್ನು ದಾಟಿ ಅಕಡೆಗೆ ಹೋಗಿರುವ ಮುಕ್ತರ ಜ್ಞಾನಪೂರ್ವಾವಸ್ಥೆಯಲ್ಲಿ, ಎಂದರೆ, ಸಂಸಾರ ದೆಶೆಯಲ್ಲಿ ಅವಿಭು ಎಂದರೆ ಸಂಕುಚಿತ; ಉತ್ತರಾವಸ್ಥೆಯಲ್ಲಿ ಮೋಕ್ಷ ದೆಶೆಯಲ್ಲಿ " ಸರ್ವಂ ಹ ಪಶ್ಯಃ ಪ್ರಶ್ಯತಿ " [ಛಾಂ. ಉಪ. 7-26-2] ಹೀಗೆಯೇ ವಿಭುವಾಗಿರುತ್ತೆ, ವಿಕಾಸವಾಗಿರುತ್ತೆ, ಸರ್ವವಿಷಯಕವಾಗಿರುತ್ತೆ.

ಮಿಶ್ರಶತ್ತ್ವದ ಲಕ್ಷಣ — ತಿರೋಧಾಯಕತ್ವಃ—

ಈರೀತಿ ಭಗವದ್ಭಾವಾವಮಜ ಸಂಪ್ರದಾಯದ ಪ್ರಕಾರ ಆತ್ಮ ವಿಷಯ ಸಂಕೋಚ-ವಿಕಾಸ ಅನರ್ಹವಾದರೂ ಧರ್ಮಭೂತ ಜ್ಞಾನಕ್ಕೆ ಸಂಕೋಚ-ವಿಕಾಸವು ಸ್ವಾಭಾವಿಕವೆಂದು ತಿಳಿದುಬರುತ್ತೆ. ಈರೀತಿ ಜ್ಞಾನಸ್ವರೂಪವು ಶೇಷತ್ವವಿಶಿಷ್ಟ ಜ್ಞಾತೃತ್ವವೆಂದು ತಿಳಿದೆವು.

ಶುದ್ಧತತ್ತ್ವ :— ಮಿಶ್ರತತ್ತ್ವರೂಪಿ ಪ್ರಕೃತಿತತ್ತ್ವಕ್ಕಿಂತ ಬೇರೆಯಾದದ್ದು ಶುದ್ಧತತ್ತ್ವ. ಗುಣಾಂತರಗಳನ್ನು ಹೊಂದದ ಸತ್ತ್ವಗುಣವನ್ನು — " ಕ್ಷಯಂತಂ ಅಸ್ಯರಜಸಃ ಪರಾಕೇ " [ಯಜುರ್ವೇದ] " ತಮಸಸ್ತು ಪಾರೇ " " ತಮಸಃ ಪರಸ್ತಾತ್ ", [ಪುರುಷಸೂಕ್ತ] ಸಂಜಕಕ್ಕಮುಯೆ ದಿವ್ಯೇ — ಈ ರೀತಿ ಶುದ್ಧಸತ್ತ್ವ ಶಾಸ್ತ್ರಪ್ರಸಿದ್ಧವಾಗಿದೆ. ಇದು ಕೇವಲ ಸತ್ತ್ವ

ಳಾಗಿ, ನಿತ್ಯಜ್ಞಾನಾನಂದ ಜನಕವಾಗಿ ಕರ್ಮದಿಂದ ಕೂಡಿಲ್ಲದೆ ಕೇವಲ ಭಗವದಿಚ್ಛಾಮಾತ್ರದಿಂದ ವಿಮಾನ, ಗೋಪುರ, ಪ್ರಾಸಾದಾದಿ ರೂಪದಿಂದ ಪರಿಣಮಿಸುತ್ತೆ. ನಿರವಧಿಕ ಹೇಯೋಪಾದೇಯ ನಿತ್ಯಮುಕ್ತರುಗಳಿಂದ ಮತ್ತು ಭಗವಂತನಿಂದ ಪರಿಚ್ಛೇದರಹಿತವಾಗಿರುತ್ತೆ. ಅತ್ಯದ್ಭುತ ರೀತಿಯಾಗಿರುತ್ತೆ.

ಶ್ರೀವೈಕುಂಠಗದ್ಯದಲ್ಲಿ ಭಗವದ್ರಾಮಾನುಜರು — "ಏ ಷಾ ಮಪಿ ಇಯತ್ತಾವಧಿಮಾಣವಶ್ ಇಯಚ್ಛೈಶ್ವರ್ಯವಾನ್ ಈದೃಶಸ್ವಭಾವನಮೂ ಇತಿ ಪರಿಚ್ಛೇತ್ತುಮ್ ಅಯೋಗ್ಯೇ" ಎಂದು ತಿಳಿಸಿರುತ್ತಾರೆ. ನಿತ್ಯರುಗಳಿಂದ ಬೇರೆಯಿಲ್ಲದ ಈ ವಿಷಯವು ಮುಕ್ತಜೀವರಿಗೂ ಸಮಾನವಾಗಿರುತ್ತೆ.

ಅಸೀಮ ಒಂದು ಇದೆ. ಅಸೀಮವನ್ನು ತಿಳಿಯದಿರುವುದು ಸರ್ವಜ್ಞತೆಗೆ ಅನುಗುಣವಾಗಿರುತ್ತೆ. "ಯನ್ನಾಪ್ಯೇವ ತದಜ್ಞತಾವಶ್ ಅನುಗುಣಶ್ ಸರ್ವಜ್ಞತಾಯಾಃ ವಿದುಃ ಯೋ ಮಾಂ ಭೋಜಮದಂತಯಾ ಕಿಲ ವಿದಶ್ಚಾಂಕೋಯಮಿತ್ಯುಜ್ಯತೇ."

ಯಾವ ವಸ್ತುವು ಇಲ್ಲವೋ ಅದನ್ನು ತಿಳಿಯದಿರುವುದು ಸರ್ವಜ್ಞತೆಯ ಲಕ್ಷಣ. ಇಲ್ಲದಿರುವ ವಸ್ತುವನ್ನು ಸಹ ಇವೆಯೆಂದು ತಿಳಿದು ಹೇಳಿದ್ದೇ ಆದರೆ ಬುನ್ನತ್ತರಲ್ಲಿ ಮೊದಲನೆಯವರೆಂದು ಎಣಿಸಲ್ಪಡುತ್ತಾರೆ. ಶಶವಿಷಾಣ ಮತ್ತು ಗಗನಸರೋಜ—ಇವು ಇಲ್ಲದಿರುವ ವಸ್ತುಗಳು. ಸರ್ವಜ್ಞನು ಇದನ್ನು ತಿಳಿಯಲಾರನು ಇದು ಸರಿ ಎಂದು ಶ್ರೀ ಕೂರತ್ತಾಳ್ವಾನ್‌ರವರು ಶ್ರೀಸ್ತವದಲ್ಲಿ ತಿಳಿಸಿರುತ್ತಾರೆ. ಹಾಗೆಯೇ ಪರಮಪದದೊಳಿರುವ ಶುದ್ಧಸತ್ವವು ಪರಿಚ್ಛೇದರೂಪಿ ಎಲ್ಲೆ ಇಲ್ಲದಿರುವ ಕಾರಣ ನಿತ್ಯ, ಮುಕ್ತ, ಈಶ್ವರನಿಂದ ಅಪರಿಚ್ಛೇದ್ಯವಾಗಿರುತ್ತೆ. ಈ ರೀತಿ ತಿಳಿಸುವುದರಿಂದ ಯಾವ ದೋಷವೂ ಇಲ್ಲ

"ತನೇಷ್ಯವಶ್ ತನಾ ತನ್ಯೈಶ್ ಅರಿವರಿಯಾನ್ಯೈ" [ತಿ. ಮೊಳಿ 8-4]

ಸರ್ವಜ್ಞನಾದ ಆ ಪರಮಾತ್ಮನಿಗೂ ತನ್ನ ಶ್ರೇಷ್ಠತೆಗೆ ಗೊತ್ತಿಲ್ಲ. ಹೀಗೆ ಅವನ ಮಹಿಮೆ ಅಪರಿಚ್ಛಿನ್ನವಾಗಿರುತ್ತೆ. ಹಾಗೆಯೇ ಶುದ್ಧಸತ್ವವೂ ಅಪರಿಚ್ಛಿನ್ನ ವೈಭವಯುತವಾಗಿದೆ. ಶುದ್ಧಸತ್ವವು ಅತ್ಯದ್ಭುತವಾಗಿರುತ್ತೆ. ಅತ್ಯದ್ಭುತವೆಂದರೆ "ಅನುಕ್ಷಣಮೂ, ಅಪೂರ್ವವತ್, ಆಶ್ಚರ್ಯಮಾವಹತ್ವಂ",

" ಅನಂತಾಶ್ಚರ್ಯ, ಅನಂತ ಮಹಾನಿಭವ " ಎಂದು ಭಗವದ್ರಾಮಾನುಜಾಚಾರ್ಯರು ಶರಣಾಗತಿಗದ್ಯದಲ್ಲಿ ಕೀರ್ತಿಸಿರುತ್ತಾರೆ.

ಅಚಿತ್ತತ್ತ್ವ : ಅಚಿತ್ತು ಜ್ಞಾನಶೂನ್ಯ ಮತ್ತು ವಿಕಾರಾಸ್ಪದ ರೂಪದಲ್ಲಿರುತ್ತೆ. ಅಚಿತ್ತತತ್ತ್ವ, ಶುದ್ಧಸತ್ವ, ಮಿಶ್ರಸತ್ತ್ವ, ಸತ್ವಶೂನ್ಯ ಈ ರೀತಿ ಮೂರು ವಿಧವಿರುತ್ತೆ. ತ್ರಿವಿಧ ಅಚೇತನವು ಜೀವಿಯವರಿಗೆ ಕಾಣಿಸುತ್ತೆ. ಅಂದರೆ ಪರಾಕ್ ಎನ್ನುವಂತೆ, ಮತ್ತೊಬ್ಬರಿಗೆ ಕಾಣಿಸುತ್ತದೆ. ಸ್ವಯಂ ಪ್ರಕಾಶಕ್ಕೆ ಸ್ವಯಂ ಫಲವಾಗಿರುತ್ತೆ. ಅಚೇತನತತ್ತ್ವ ಮತ್ತು ಪರಾತತ್ತ್ವವು ಸಹ ತ್ರಿವಿಧ ಅಚೇತನತತ್ತ್ವದ ಹಾಗೆ ಧರ್ಮಭೂತ ಜ್ಞಾನಕ್ಕೂ ಸಹ ಇಹೆ. ಮೂರು ವಿಧ ಅಚೇತನಗಳಲ್ಲಿ ಪ್ರಕೃತಿ ಮತ್ತು ಕಾಲ ಜಡವಾಗಿರುತ್ತೆ. ಶುದ್ಧ ಸತ್ವವನ್ನು ಕೆಲವರು ಜಡವೆಂದರು. ಮತ್ತೆ ಕೆಲವರು ಅಜಡವೆಂದರು. ಶ್ರೀ ವೇದಾಂತಾಚಾರ್ಯರ ತತ್ತ್ವ ಮುಕ್ತಾಕಲಾಪದಲ್ಲಿ " ಇಹಜಡಾಂ ಅದಿಮಾಂಕೇಚಿದಾಹುಃ " ಎಂದಿರುತ್ತಾರೆ. ಜಡರೂಪ ತ್ರಿಗುಣದ್ರವ್ಯವಾದ ಪ್ರಕೃತಿ ತತ್ತ್ವವೆ ಸತ್ತ್ವ, ರಜ, ತಮೋ ರೂಪವಾದ ಗುಣತ್ರಯಗಳ ಆಶ್ರಯವಾಗಿ ವಿರಜಾ ನದಿಯು - " ತೇಷೆ. ತಂಕು. ದು ಅಹಂದು ಮುಡಿವಿಲ್ ಪೆರುಂ ಸಾಳಂ " [ತಿ. ಮೊಳಿ. 10-10-10] ಎಂದು ಹೇಳುವಂತೆಯೇ ವಿಭುವಾಗಿ ಕಾಸ್ತ ಸಮಧಿಗಮ್ಯವಾಗಿರುತ್ತೆ.

" ಸರ್ವ ವಿಕಾರಾನ್ ಪ್ರಕರೋತಿ " ಹೀಗೆ ಸಮಸ್ತ ವಿಕಾರಕ್ಕೆ ಕಾರಣವಾಗಿರುವುದನ್ನು ಪ್ರಕೃತಿ ಎಂದು ಕರೆಯುತ್ತಾರೆ. ವಿಚಿತ್ರ ಸೃಷ್ಟಿಗೆ ಉಪಕರಣವಾಗಿರುವುದರಿಂದ ಮಾಯಾ ಎನ್ನಲ್ಪಡುತ್ತೆ. ವಿದ್ಯಾನಿರೋಧಿಯಾದ್ದರಿಂದ ಅವಿದ್ಯಾ ಎನ್ನಲ್ಪಡುತ್ತೆ. ಇದು ಸಹಜ ವಿಕಾರಾಶ್ರಯವಾಗಿರುತ್ತೆ. ವಿಕಾರವೆನ್ನುವುದರಿಂದ ಜಗತ್ತಾ ಪರಿಣಾಮ, ದಶಾ, ಅವಸ್ಥೆ ಎನ್ನುವುದೆಲ್ಲಾ ಒಂದೇ ಜಗದಂತುರೂಪದಿಂದ ಬೇರೆಯಾಗಿ ಸಿದ್ಧರೂಪದಲ್ಲಿರುವ ಧರ್ಮವನ್ನು ಅವಸ್ಥಾ ಎನ್ನುತ್ತಾರೆ. ವಿಕಾರಾಶ್ರಯವಾಗಿರುವುದರಿಂದ ಈ ಪ್ರಕೃತಿಯು ದ್ರವ್ಯವಾಗಿರುತ್ತೆ.

ಸತ್ತ್ವವೆಂದರೆ ಜೀವನನ ಜ್ಞಾನ-ಸುಖಾದಿಗಳಿಗೆ ಹೇತುಭೂತವಾದ

ಗುಣವಿಶೇಷ. ರಜಸ್ ಎಂದರೆ ರಾಗ-ದ್ವೇಷಾದಿಗುಣವಿಶೇಷ, ತಮಸ್ ಎಂದರೆ ಮೋಹ-ಆಲಸ್ಯ ನಿದ್ರಾದಿ ಹೇತುಗುಣವಿಶೇಷ.

ಕಾಲಾನುಗುಣವಾಗಿ ಈಶ್ವರ ಸಂಕಲ್ಪದಿಂದ ಈ ಗುಣಗಳು ಸಮಾನಾವಸ್ಥೆಯಲ್ಲಿದ್ದರೆ ಮಹಾಪ್ರಳಯವಾಗುತ್ತೆ. ಈ ಗುಣಗಳಿಗೆ ವಿಷಮಾವಸ್ಥೆಯುಂಟಾಗುವಾಗ ಸೃಷ್ಟಿಯು. ಒಂದು ವೇಳೆ ಈ ವಿಷಮಾವಸ್ಥೆಗೆ ಅನುವೃತ್ತಿಯಾದರೆ ಅದು ಸ್ಥಿತಿಯಾಗುತ್ತೆ. ಪ್ರಳಯ ದೆಶೆಯಲ್ಲಿಯೂ ಸಹ ಪ್ರಕೃತಿತತ್ತ್ವವು ಸೂಕ್ಷ್ಮರೂಪದಲ್ಲಿ ಸುಸದೃಶವಾದ ವಿಕಾರದಿಂದ ಕೂಡಿರುತ್ತೆ. ಪ್ರಕೃತಿ ತತ್ತ್ವವು ಸಮವಿಕಾರ ದೆಶೆಯಲ್ಲಿ ಅವ್ಯಕ್ತವೆಂದು ಹೇಳಿ, ವಿಷಮ ವಿಕಾರ ದೆಶೆಯಲ್ಲಿ ವ್ಯಕ್ತವೆನ್ನಲ್ಪಡುತ್ತೆ. ಅವುಗಳಲ್ಲಿ ಯಾವುದು ವ್ಯಕ್ತರೂಪದಲ್ಲಿದೆಯೋ ಅದು ಮಹದಾದಿ ಸೃಥವೀ ಪರ್ಯಂತ 23 ತತ್ತ್ವಗಳಾಗಿ ಪರಿಣಮಿಸುತ್ತವೆ. ಆದೇ ಸಮಯದಲ್ಲಿ ತ್ರಿಗುಣ ದ್ರವ್ಯದಲ್ಲಿ ವಿಕಾರ ರಹಿತ ಪ್ರದೇಶವೂ ಮತ್ತು ವಿಕಾರ ಸಹಿತ ಪ್ರದೇಶವೂ ಸಹ ಇರುತ್ತೆ. ಹೇಗೆ ಮಹಾ ಸಮುದ್ರದಲ್ಲಿ ಪ್ರಚಲಿತ ಮತ್ತು ಅಪ್ರಚಲಿತ ದೇಶವಿದೆಯೋ ಹಾಗೆ.

ತತ್ತ್ವಸಮಾಸವೆಂಬ ಗ್ರಂಥದಲ್ಲಿ ಪ್ರಕೃತಿ ವಿಕಾರವನ್ನು ಉತ್ಪನ್ನ ಮಾಡುತ್ತದೆ ಎಂದಿರುತ್ತಾರೆ. ಅವಿದ್ಯಾ ಎಂದರೆ ಜ್ಞಾನವಿರೋಧದಿಂದ ಮಾಯಾ ಎಂದು ಹೇಳುವುದು. ವಿಚಿತ್ರ ಸೃಷ್ಟಿಯನ್ನು ಮಾಡುವುದರಿಂದ, ಇದನ್ನೇ "ಪೊಂಗ್ಯೆಂಬುಲಮು" ಎಂದು 24 ತತ್ತ್ವವೆನ್ನುತ್ತಾರೆ ಶ್ರೀ ಪಿಳ್ಳೈಲೋಕಾಚಾರ್ಯರು.

ಈ ಪ್ರಕೃತಿಯು ಅವಿಭಕ್ತ ತಮಸ್ಸು ಮತ್ತು ವಿಭಕ್ತ ತಮಸ್ಸು, ಅವ್ಯಕ್ತದ ಮುಂತಾಗಿ ಕೆಲವು ಅವಸ್ಥಾರೂಪದಲ್ಲಿರುತ್ತೆ. ಗುಣಸಾಮ್ಯಾವಸ್ಥೆ ಅವ್ಯಾಕೃತಾವಸ್ಥೆ, ಎಂದು ಯಾವ ಸ್ಥಿತಿಯಲ್ಲಿ ಗುಣಸಾಮ್ಯವು ಅಸ್ಪುಟವಾಗಿರುತ್ತೋ ಅಂತಹ ಸ್ಥಿತಿಯು ಜೀವನ ಸಮಷ್ಟಿ.

ಗರ್ಭರೂಪದಲ್ಲಿ ಅಕ್ಷರರೂಪವೆನ್ನಲ್ಪಡುತ್ತೆ. ಬೀಜಗರ್ಭತ್ವವೂ, ಆಚಿತ್ತ್ವವೂ ಇವು ಸಹ ಯಾವಾಗ ವಿವೇಕವನ್ನು ತಿಳಿಯಲಾಗುವುದಿಲ್ಲವೋ ಆ ಸ್ಥಿತಿಯೊಂದಿಗೆ ಸೇರಿರುವ ಜಡ ಸೂಕ್ಷ್ಮ ಪ್ರಕೃತಿ ತಮಸ್ಸನ್ನು

ಲ್ಪಡುತ್ತೆ. ಅಕ್ಷರಾಧ್ಯವಸ್ಯಾಖ್ಯಾಪ್ತಿಯಲ್ಲಿ ಉಸ್ಮುಖವಾಗಿದ್ದರೆ ಅದೇ ವಿಭಕ್ತ ತಮಸ್ಸು. ಅದು ಉಸ್ಮುಖವಾಗಿಲ್ಲದಿದ್ದರೆ ಅದು ಅವಿಭಕ್ತ ತಮಸ್ಸು.

ಭೂಮಿಯಲ್ಲಿ ಬಿತ್ತಿದ ಬೀಜವು ಸ್ಥಾನೀಯ. ಅವಿಭಕ್ತ ತಮಸ್ಸು ಮಣ್ಣಿನಿಂದ ಹೊರಬಂದ ಬೀಜಕ್ಕೆ ಸಮಾನ. ವಿಭಕ್ತ ತಮಸ್ಸು ನೀರಿನೊಂದಿಗೆ ಸೇರಿ ತೊಯ್ದು ಪಿಥಿಲ ಅವಯವ ರೂಪವಾಗಿರುವ ಬೀಜಕ್ಕೆ ಸಮಾನ, ಅಕ್ಷರ. ಹೊಡ್ಡದಾಗಿ ಅಂಕುರವಾಗಿರುವ ಬೀಜಕ್ಕೆ ಸಮಾನ ಅವ್ಯಕ್ತವಾಗಿದುತ್ತೆ. ಹೊರಗೆ ಬಂದಿರುವ ಅಂಕುರ ಸ್ಥಾನೀಯ ಮಹತ್ತತ್ತ್ವ ವಿಷಮಾಕಾರದಲ್ಲಿ ಪ್ರಪ್ರಥಮ ವಿಕಾರವನ್ನು ಮಹಾನ್ ಎನ್ನುತ್ತಾರೆ.

ಮಹತ್ತತ್ತ್ವದಿಂದ ಉತ್ಪನ್ನವಾದ ವಿಕಾರವನ್ನು ಅಹಂಕಾರ ಎಂದು ಕರೆಯುತ್ತಾರೆ. ಇದರ ಸಹಕಾರದಿಂದ ಮನಸ್ಸಿನಲ್ಲಿ ದೇಹವೇ ಆತ್ಮನೆಂಬ ಭ್ರಾಂತಿ ಉಂಟಾಗುತ್ತೆ. "ಅನಹಂ ಅಹಂ ಶರೋಽಸಿ" ಹಾಗೆಯೇ ಯಾವ ಅಹಂ ತತ್ತ್ವವಿಷ್ಣುವಿನ ಕರೀರದಲ್ಲಿ "ಅಹಂ" ಎಂಬ ಭ್ರಾಂತಿಯನ್ನು ಉತ್ಪನ್ನ ಮಾಡುವ ಕಾರಣ ಅಹಂಕಾರವೆನ್ನಲ್ಪಡುತ್ತೆ.

ಜಿಜ್ಞಾಸಾಧಿಕರಣದಲ್ಲಿ ಶ್ರೀ ಭಾಷ್ಯದಲ್ಲಿ :— "ನಕಾ, ಅನಾತ್ಮನಿ ದೇಹೇ ಅಹಂಭಾವಕರಣ ದೇಹತತ್ತ್ವೇನ ಅಹಂಕಾರ ಇತ್ಯುಚ್ಯತೇ" ಎಂದು ಭಗವದ್ರಾಮಾನುಜಾಚಾರ್ಯರು ತಿಳಿಸಿರುತ್ತಾರೆ.

ಗುಣವೈಷಮ್ಯದಿಂದ ಮಹತ್ತತ್ತ್ವವು ಸಾತ್ವಿಕ, ರಾಜಸ ಮತ್ತು ತಾಮಸವೆಂದು ಮೂರು ವಿಧವಿರುತ್ತೆ. ಸಾತ್ವಿಕ ಅಹಂಕಾರಕ್ಕೆ ವೈಕಾರಿಕಾ, ರಾಜಸ ಅಹಂಕಾರಕ್ಕೆ ತೈಜಸ ಮತ್ತು ತಾಮಸ ಅಹಂಕಾರಕ್ಕೆ ಭೂತಾದಿಗಳೆಂದು ಹೆಸರು. ತಾಮಸ ಅಹಂಕಾರದಿಂದ ಭೂತ ಉತ್ಪನ್ನವಾಗುತ್ತೆ. ಆದರಿಂದ ಇದನ್ನು ಭೂತಾದಿಗಳೆಂದು ಹೇಳುತ್ತಾರೆ.

ಸಾತ್ವಿಕ ಅಹಂಕಾರದಿಂದ ಇಂದ್ರಿಯಗಳು ಉತ್ಪನ್ನವಾಗುತ್ತೆ ; ಆದರಿಂದ ಇದನ್ನು ಇಂದ್ರಿಯಾದಿಗಳೆಂದು ಹೇಳುತ್ತಾರೆ. ರಾಜಸ ಅಹಂಕಾರವು ಇವೆರಡರ ಅನುಗ್ರಾಹಕ. ಇಂದ್ರಿಯಗಳು ಹನ್ನೊಂದು. ವಾಕ್ ಪಾಣಿ-ಪಾದದಿಂದ ಪಂಚಕರ್ಮೇಂದ್ರಿಯಗಳು-ವಚನ, ಆದಾನ ಗಮನಾದಿಗಳಿಗೆ

ಕರಣವಾಗಿರುತ್ತೆ. ಇವು ಹತ್ತು ಜ್ಞಾನೇಂದ್ರಿಯಗಳು. ಏಕಮಾತ್ರ ಮನಸ್ಸು ಉಂತರಿಂದ್ರಿಯವು.

ಈ ಮನಸ್ಸೇ ಅಧ್ಯವಸಾಯವೆಂಬ ಜ್ಞಾನಕ್ಕೆ ಕಾರಣವಾಗಿ ಬುದ್ಧಿ ಎನ್ನಲ್ಪಡುತ್ತೆ. ಜೀವನ ಅಹಂಕಾರದಿಂದ ಭೂತ ಉತ್ಪನ್ನವಾಗುವಾಗ ತನ್ಮಾತ್ರೆಗಳು ದ್ವಾರರೂಪದಲ್ಲಿ ಇರುತ್ತವೆ. ತನ್ಮಾತ್ರೆ ಎಂದರೆ ಏನು? ಹಾಲು ಮತ್ತು ಮೊಸರಿನ ಮಧ್ಯಸ್ಥಿತಿಯ ಹಾಗೆ ಒಂದು ಸೂಕ್ಷ್ಮಾವಸ್ಥೆ. ಶಬ್ದಾದಿಗಳು ಉದ್ಭೂತವಾಗಿದ್ದರೆ ಅದನ್ನು ಆಕಾಶಾದಿ ಭೂತವೆನ್ನುತ್ತಾರೆ. ಶಬ್ದಾದಿಗಳು ಅವಿಭೂತವಾಗಿದ್ದರೆ ಅದನ್ನು ತನ್ಮಾತ್ರೆಗಳೆನ್ನುತ್ತಾರೆ. ಆದ್ದರಿಂದ ತನ್ಮಾತ್ರೆಗಳು ಅವಿಶೇಷವೆಂದು ಹೇಳಿ ಭೂತಗಳನ್ನು ವಿಶೇಷವೆಂದು ಹೇಳುತ್ತಾರೆ.

ತತ್ತ್ವೋತ್ಪತ್ತಿ ಎಂದರೆ ತಾಲ-ಪಲಾಶ-ತಾಟಂಕ ನ್ಯಾಯೇನ ಅವಸ್ಥಾಬಹುತ್ವಶಕ್ತಿ, ದ್ರವ್ಯೋತ್ಪತ್ತಿಯೆಲ್ಲ. ಇದರಿಂದ ದ್ರವ್ಯಾಂತರ ಸತ್ಕಾರ್ಯವಾದ ಅವಸ್ಥೆಗಳನ್ನು ಉತ್ಪತ್ತಿ ಮಾಡುತ್ತದೆ ಮತ್ತು ಇದನ್ನು ದೂರಗೊಳಿಸುತ್ತದೆ. ಪೂರ್ವಾವಸ್ಥೆಯು ನಾಶವೇ ಉತ್ತರಾವಸ್ಥೆಯ ಉತ್ಪತ್ತಿ. ಈ ಅರ್ಥವನ್ನೇ ಗೀತಾಚಾರ್ಯನು – "ಜಾತಸ್ಯಹಿ ಧ್ರುವೋ ಮೃತ್ಯು ಧ್ರುವಂಜನ್ಮ ಮೃತಸ್ಯಚ" ಎಂದು ಹೇಳಿರುತ್ತಾನೆ.

ಮಹದಾದಿ ಪೃಥ್ವೀವರೆಗಿನ ತತ್ತ್ವವನ್ನು ಸಮಷ್ಟಿ ಎನ್ನುತ್ತಾರೆ. ಇವುಗಳಲ್ಲಿ ತ್ರಿವೃತ್ಕರಣದಿಂದ ಪಂಚೀಕರಣ. ಪಂಚೀಕರಣದಿಂದ ಆಗುವ ವಿಕಾರವನ್ನು ವ್ಯಷ್ಟಿ ಎನ್ನುತ್ತಾರೆ. ವ್ಯಷ್ಟಿಯೊಂದಿಗೆ ಸೇರಿರುವ ಪಿಂಡ-ಬ್ರಹ್ಮಾಂಡ ಮತ್ತು ಪಂಥಾಂತರ್ಗತ ಚತುರ್ದಶ ಲೋಕವಾಗಿರುತ್ತೆ.

ಮೂಲಪ್ರಕೃತಿಯಿಂದ ವಿಕಾರ ಪ್ರಾದುರ್ಭಾವ ಪ್ರಾಕೃತ ಸೃಷ್ಟಿ. ಇದು ನಾರಾಯಣಕೃತ. ಕರ್ತೃವಾಗಿರುತ್ತೆ. ಪ್ರತ್ಯಹಂ ಕಾಣಿಸುವ ಸೃಷ್ಟಿ ನಿತ್ಯಸೃಷ್ಟಿ. ನಿತ್ಯನೈಮಿತ್ತಿಕ ಪ್ರಾಕೃತ ಭೇದೇನ ಸೃಷ್ಟಿಯ ಹಾಗೆ ಪ್ರಳಯವೂ ಮೂರು ವಿಧ. ಸೃಷ್ಟಿಯನ್ನು ಸರ್ಗವೆನ್ನುತ್ತಾರೆ. ಪ್ರಳಯವನ್ನು ಪ್ರತಿ ಸರ್ಗವೆನ್ನುತ್ತಾರೆ. ಪ್ರಳಯವೆಂದರೆ ಪೂರ್ತಿ ನಾಶವಲ್ಲ. ಹಾಲಿನಲ್ಲಿ ನೀರಿಗೆ ಸಮಾನ. ನಾನುರೂಪ ವಿಭಾಗ ಅನರ್ಹಶಕ್ತಿ.

ಆದ್ಯಂತ ಲಯರೂಪೀ ಮೋಕ್ಷದಲ್ಲಿ ದೇವಾದಿ ನಾಮರೂಪ ಸಂಬಂಧ ವಿನಾಶವಾಗಿರುತ್ತೆ. ಪೃಥಿವೀ ಮೊದಲಾದ ಭೂತಗಳನ್ನು ಪ್ರತ್ಯಕ್ಷದಿಂದ ತಿಳಿದುಕೊಳ್ಳಬಹುದು. ಏಕಾದಶ ಇಂದ್ರಿಯಗಳು, ಪ್ರಕೃತಿ ಮಹ ದಹಂಕಾರಗಳನ್ನು ಶಾಸ್ತ್ರದಿಂದಲೇ ತಿಳಿದುಕೊಳ್ಳಬೇಕು.

ಸತ್ವಶೂನ್ಯವೆಂದರೆ—ಕಾಲ.

ಇದು ಪ್ರಕೃತಿ-ವಿಕೃತಿಗಳ ಪರಿಣಾಮಕ್ಕೆ ಹೇತುವಾಗಿ ಕಲಾ-ಕಾಷ್ಠಾದಿ ರೂಪದಿಂದ ಪರಿವರ್ತನವಾಗುವುದರಿಂದ ನಿತ್ಯವಾಗಿ ಈಶ್ವರನಿಗೆ ಕ್ರೀಡಾಪರಿಕರವಾಗಿ ಮತ್ತು ಈಶ್ವರನಿಗೆ ಶರೀರರೂಪದಲ್ಲಿಯೂ ಸಹ ಇರುತ್ತೆ. ಶ್ರೀ ಪರಾಶರರು ವಿಷ್ಣುಪುರಾಣದಲ್ಲಿ 1-3-8 ರಿಂದ ಪ್ರಾರಂಭ ಮಾಡಿ ಕಲಾ-ಕಾಷ್ಠಾದಿಗಳ ವಿಭಾಗ ಮಾಡಿರುತ್ತಾರೆ.

ನಿಮೇಷ 15 ಉಳ್ಳದ್ದು ಕಾಷ್ಠೆ. ಕಾಷ್ಠೆ ಮೂವತ್ತು ಉಳ್ಳದ್ದು ಕಲೆ. ಕಲೆ ಮೂವತ್ತು ಉಳ್ಳದ್ದು ಮುಹೂರ್ತ. ಮುಹೂರ್ತ ಮೂವತ್ತು ಉಳ್ಳದ್ದು ದಿನ. ಮೂವತ್ತ ದಿನಗಳುಳ್ಳದ್ದು ಪಕ್ಷದ್ವಯವಾದ ತಿಂಗಳು. ಆರು ಎರಡುಳ್ಳದ್ದು ಋತು. ಋತು ಮೂರುಳ್ಳದ್ದು ಅಯನ. ಅಯನ ಎರಡುಳ್ಳದ್ದು ಸಂವತ್ಸರ. ಮಾನುಷ ದಿನ ಮುನ್ನೂರರವತ್ತುಳ್ಳದ್ದು ಒಂದು ದೇವ ಸಂವತ್ಸರ. ದೇವಸಂವತ್ಸರ ಹನ್ನೆರಡು ಸಾವಿರವುಳ್ಳದ್ದು ಒಂದು ಚತುರ್ಯುಗ. ಅದರಲ್ಲಿ ಕೃತಯುಗ ನಾಲ್ಕು ಸಾವಿರ. ತ್ರೇತಾ ಯುಗ ಮೂರು ಸಾವಿರ. ದ್ವಾಪರಯುಗ ಎರಡು ಸಾವಿರ. ಕಲಿಯುಗ ಒಂದು ಸಾವಿರ.

ಕೃತಯುಗಕ್ಕೆ ಪೂರ್ವ ಸಂಧಿ ನಾನ್ನೂರು, ಅಪರ ಸಂಧಿ ನಾನ್ನೂರು. ತ್ರೇತಾಯುಗಕ್ಕೆ ಪೂರ್ವ ಸಂಧಿ ಮುನ್ನೂರು. ಅಪರ ಸಂಧಿ ಮುನ್ನೂರು. ದ್ವಾಪರಯುಗಕ್ಕೆ ಪೂರ್ವ ಸಂಧಿ ಇನ್ನೂರು, ಅಪರಸಂಧಿ ಇನ್ನೂರು. ಕಲಿ ಯುಗಕ್ಕೆ ಪೂರ್ವ ಸಂಧಿ ನೂರು, ಅಪರಸಂಧಿ ನೂರು. ಈ ರೀತಿ 71 ಚತುರ್ಯುಗ ಕಳೆದರೆ ಒಂದು ಮನ್ವಂತರ. ಹೀಗೆ 14 ಮನ್ವಂತರ ಒಂದು ಒಂದು ಸಾವಿರ ಚತುರ್ಯುಗವಾದರೆ ಬ್ರಹ್ಮನಿಗೆ ಒಂದು ಹಗಲು. ಅಷ್ಟೆ ರಾತ್ರಿ ಇದಕ್ಕೆ ಸಮನಾಗಿರುತ್ತೆ. ಈ ರೀತಿ ಅಹೋರಾತ್ರಿ, ತಿಂಗಳು,

ಸಂವತ್ಸರವಾಗಿ ಜೀರೆಮಾಡಿ ಶತಾಂಶವಾಗಿ ಪರಿಗಣಿಕರಂದೆ ಬ್ರಹ್ಮ ಆಯುಷ್ಯದ್ದೆ 'ಪರಂ' ಎಂದು ಹೆಸರು. ಅದರಲ್ಲಿ ಅರ್ಧಪರಾರ್ಧ. ಈಗ ನಡೆಯುತ್ತಿರುವುದು ದ್ವಿತೀಯ ಪರಾರ್ಧವೆಂದು.

ಈ ರೀತಿ ಕಾಲ, ಕಲಾ, ಕಾಷ್ಠಾದಿ ರೂಪ ಪರಿಣಾಮ ವಿಶಿಷ್ಟವಾಗಿರುತ್ತೆ. ಇದು ಈಶ್ವರನಿಗೆ ಕ್ರೀಡಾ ಪರಿಕರವಾಗಿರುತ್ತೆ. ಸಕಲ ಜಗದುದಯ ಲೀಲಾ ಪರವಾಶ್ಯನಿಗೆ ಪ್ರಕೃತಿ–ಪುರುಷ ಮತ್ತು ಕಾಲ ಮೂರೂ ಸಹ ಲೀಲೋಪಕರಣಗಳು. ಅದರಲ್ಲಿ ಪ್ರಕೃತಿ–ಪುರುಷ ಸೃಷ್ಟ್ಯಾದಿಗಳು ಅವನ ಕೈಯಿಗೆ ಸೇರಿರುವುದಾಗಿ ಕಮನೀಯವಾಗಿ ಲೀಲೋಪಕರಣಗಳಾಗಿರುತ್ತೆ. ಕಾಲತತ್ತ್ವದ ಸಹಕಾರದಿಂದ ಲೀಲೋಪಕರಣಗಳಾಗಿರುತ್ತೆ. ಅಂದರೆ ಈಶ್ವರನು ಸೃಷ್ಟ್ಯಾದಿಗಳನ್ನು ನಿರ್ವಹಿಸುವಾಗ ಸ್ವತಃ ಸತ್ಯ ಸಂಕಲ್ಪನಾಗಿರುವುದರಿಂದ ಮೊದಲು ಏನೊಂದು ನಿಯಮವನ್ನು ಮಾಡಿರುವನೋ ಆ ಕಾಲ ನಿಯಮಕ್ಕನುಸಾರವಾಗಿ ಅಯಾಕಾಲಾಗಮವನ್ನು ನಿರ್ವಹಿಸುತ್ತಾನೆ.

ಕಾಲತತ್ತ್ವವು ಈಶ್ವರನಿಗೆ ಕ್ರೀಡಾವನ್ನುವೆಂದು ಹೇಳಿರುವುದರಿಂದ ಕಾಲಕೃತ ಪರಿಣಾಮ ಪಡೆವ ಲೀಲಾವಿಭೂತಿಯಲ್ಲಿ ಇದಕ್ಕೆ ವಿವರಣೆ– "ನಕಾಲಃ ಕರ್ತೃವೈಪ್ರಭುಃ" [ಮೋಕ್ಷಧರ್ಮ] ಅಂತಹ ಭೋಗ ವಿಭೂತಿದುಲ್ಲಿ ಇದರ ಅಪೇಕ್ಷೆ ಇಲ್ಲ. ನಿತ್ಯವಿಭೂತಿಯಲ್ಲೂ ಕಾಲವು ವಿಭುವಾಗಿಯೇ ಇರುತ್ತೆ. ಇದಕ್ಕೆ ಪ್ರಮಾಣ–"ಸದಾಪಶ್ಯಂತಿ" ಎಂದು ನಿತ್ಯ ಮುಕ್ತಜೀವನು ಭಗವಂತನನ್ನು ಅನವರತ ನೋಡುತ್ತಾ ಅನುಭವಿಸುತ್ತಿರುತ್ತಾನೆ. ಶ್ರುತಿ ವಾಕ್ಯವು ಈ ರೀತಿ ತಿಳಿಸುತ್ತೆ.

ಅದರೂ ಸಹ ವೈಕುಂಠದಲ್ಲಿ ಪರಿಣಾಮವು ಸರ್ವೇಶ್ವರನ ಇಚ್ಛೆಗೆ ಅನುಸಾರವಾಗಿ ಇರುತ್ತೇ ಹೊರತು ಕಾಲಕ್ಕೆ ಅನುಸಾರವಾಗಿ ಅಲ್ಲ. ಈ ಕಾಲವು ಎಲ್ಲಾ ಜ್ಞಾನದಿಂದ ಪದಾರ್ಥ ವಿಶೇಷ ರೂಪದಲ್ಲಿ ಕಾಣಿಸುವ ಕಾರಣ ಕಾಲತತ್ತ್ವವು ಹಿಡಿಂದ್ರಿಯ ವೇದ್ಯವೆಂದು ಹೇಳಲ್ಪಡುತ್ತೆ.

ಕಾಲತತ್ತ್ವವು ಈಶ್ವರನ ಶರೀರ. "ಪರಸ್ಯ ಬ್ರಹ್ಮಣೋ ರೂಪಂ ಪುರುಷಃ ಪರಮಮ್ ದ್ವಿಜವ್ಯ" "ವ್ಯಕ್ತಾವ್ಯಕ್ತೇ ತಥೈವಾನ್ಯೇರೂಪೇ

ಕಾಲಃ ತಥಾಪರಂ", [ಶ್ವೇ. ಉ. ಪು. 1-2-17] "ಪ್ರಧಾನ ಪುರುಷ ವ್ಯೈಕ್ಯಾಲಭ್ಯಂ ತ್ರಿವಿಧಾಗತಃ ರೂಪಾಣಿ" [ಶ್ವೇ. ಉ. ಪು. 1-2-19] ಹೀಗೆ ಪ್ರಕೃತ್ಯಾದಿ ಪರಿಣಾಮ ಸಹಕಾರಿ ಕಾಲ ಈಶ್ವರನಿಗೆ ಶರೀರವಾಗಿ ಇರುವುದರಿಂದ ಸಹಕಾರಿ ಕಾರಣವೂ ಈಶ್ವರನೇ ಆಗಿರುತ್ತಾನೆ.

ಕಾಲವು ಪರಮಪದದಲ್ಲಿ ನಿತ್ಯ ಮುಕ್ತ ಇಲ್ಲಿ ಅನಿತ್ಯನೆಂದು ಹೇಳಲ್ಪಟ್ಟಿರುತ್ತೆ. ಆದರೆ ಕಾಲವು ಉಭಯ ವಿಭೂತಿಗಳಲ್ಲಿಯೂ ನಿತ್ಯವೇ ಎಂದು ನಮ್ಮ ಪೂರ್ವಾಚಾರ್ಯರುಗಳು ತಿಳಿಸಿರುತ್ತಾರೆ.

ಬೌದ್ಧಾದಿಗಳು ಕಾಲ ತನ್ನನ್ನೇ ಅಲ್ಲ, ಸ್ಥಾವರ್ಜಂಗಮಾತ್ಮಕ ಸಮಸ್ತ ಪದಾರ್ಥವೂ ಸಹ ಕೃತಪರಿಣಾಮವಾಗಿಯೇ ಕಣ್ಣಿಗೆ ಕಾಣಿಸುವ ಪ್ರತ್ಯಕ್ಷದಿಂದ "ಕಲಾಮುಹೂರ್ತಾಃ ಕಾಷ್ಠಾಶ್ಚ ಮುಹುಶ್ಚ ಮಾಘವಚ್ಚ". ಜ್ಯೋತಿಶಾಸ್ತ್ರಗಳಿಂದ ಕಾಲಸಿದ್ಧಿಯಾಗುವುದರಿಂದ 'ಕಾಲ' ಇಲ್ಲ ಎಂದು ಹೇಳುವುದು ಅಸಂಗತ.

ಈಶ್ವರತತ್ತ್ವ :— ಚಿದ್-ಅಚಿದ್ರೂಪಿ ಎರಡು ತತ್ತ್ವಗಳ ಸ್ವರೂಪ ಮತ್ತು ಸ್ವಭಾವಗಳನ್ನು ತಿಳಿದೆವು. ಈಗ "ಕ್ಷರಾತ್ಮಾನೌ ಈಶತೇ ದೇವ ಏಕಃ" [ಶ್ವೇ. ಉಪ. 1-10] ಹಾಗೆಯೇ ಕ್ಷರ ಶಬ್ದವಾಚ್ಯ ಪ್ರಕೃತಿ ತತ್ತ್ವವನ್ನು ಅತ್ಯತತ್ತ್ವವಾಚ್ಯ ಜೀವಶಬ್ದವನ್ನು ಅಂದರೆ ಭೋಕ್ತಸಾ-ಭೋಕ್ತನಗಳ ನಿಯಾಮಕನಾದ ಈಶ್ವರನಸ್ವರೂಪ ಸ್ವಭಾವಗಳನ್ನು ನಾವು ತಿಳಿಯಬಹುದು. ಈಶ್ವರನು ಅಖಿಲಹೇಯಪ್ರತ್ಯನೀಕನು ಅನಂತಜ್ಞಾನಾನಂದಸ್ವರೂಪ, ಜ್ಞಾನ-ಶಕ್ತಿ, ಕಲ್ಯಾಣಗುಣ-ಗಣಭೂಷಿತ, ಸಕಲ ಜಗತ್ಕಲ್ಪನೆ ಪರ್ಗ, ಸ್ಥಿತಿ ಮತ್ತು ಸಂಹಾರ ಕರ್ತನಾಗಿ "ಚತುರ್ವಿಧಾ ಭಜಂತೇ ಮಾಮಃ", "ಅರ್ಥಾರ್ಥೀ ಜ್ಞಾನೀ" ಹೀಗೆ ಚತುರ್ವಿಧ ಪುರುಷರಿಗೂ ಆಶ್ರಿತನಾಗಿ, ಧರ್ಮಾರ್ಥಕಾಮ, ಮೋಕ್ಷ ಚತುರ್ವಿಧ ಪುರುಷಾರ್ಥಗಳನ್ನು ನೀಡಿ ವಿಲಕ್ಷಣ ವಿಗ್ರಹಯುಕ್ತನಾಗಿ; ಲಕ್ಷ್ಮೀಭೂ, ನೀಳಾನಾಯಕನಾಗಿ ಇರುತ್ತಾನೆ. ಅಖಿಲ ಹೇಯ ಪ್ರತ್ಯನೀಕ ಎಂದರೆ ಸಮಸ್ತ ಹೇಯ ವಿರೋಧಿತ್ವ. ಅಖಿಲ ಹೇಯ ಪ್ರತ್ಯನೀಕತ್ವವೆಂದು ಏನೊಂದನ್ನು ಹೇಳಿರುವೆವೋ ಅದು ಕಲ್ಯಾಣೈಕ ತಾನತ್ತ್ವಕ್ಕೂ

ಉಪಲಕ್ಷಣ. ಆಪೇಲ ಹೇಯ ಪ್ರತ್ಯನೀಕತ್ವ ಮತ್ತು ಕಲ್ಯಾಣೈಕ ತಾನತ್ವ ಇವು ಎರಡೂ ಈಶ್ವರನಿಗೆ ಜನಸಾಧಾರಣವಾಗಿರುತ್ತೆ. ಇದನ್ನೇ "ಉಭಯ ಲಿಂಗಂ" ಎಂದು ಶ್ರೀ ವೇದವ್ಯಾಸರು ತಿಳಿಸಿರುತ್ತಾರೆ. [3-2-11]

ಈ ಉಭಯ ಲಿಂಗಗಳಿಂದ ಭಗವಂತನು ಸ್ವೇತರ ಸಮಸ್ತವಸ್ತು ವಿಲಕ್ಷಣನಾಗಿರುತ್ತಾನೆ. ಹೇಗೆ ಅಂಧಕಾರಕ್ಕೆ ಪ್ರಕಾಶವು ವಿರೋಧವೋ ಮತ್ತು ಸರ್ಪಕ್ಕೆ ಗರುಡನು ವಿರೋಧವೋ ಹಾಗೆ; ವಿಕಾರಾದಿ ದೋಷಗಳಿಗೆ ಈಶ್ವರ ತತ್ತ್ವವು ವಿರೋಧಿಯಾಗಿರುತ್ತೆ. ವಿಕಾರ ಶಬ್ದದಿಂದ ಶುದ್ಧಸತ್ವ, ಮಿಶ್ರತತ್ತ್ವ; ಸತ್ವ ಶೂನ್ಯವೆಂಬ ತ್ರಿವಿಧ ಅಚಿತ್ತಿನೊಂದಿಗೆ ಪರಿಣಾಮವನ್ನು ತಿಳಿಸುತ್ತೆ. ಈ ವಿಕಾರವು ಯಾವುದರಲ್ಲಿ ಇಲ್ಲವೋ ಅವನೇ ಪರಮಾತ್ಮನು. ಹಾಗೆಂದರೆ ಈ ವಿಕಾರಗಳ ವಿರೋಧಿ ಭಗವಂತ ಮೊದಲಾದ ಶಬ್ದದಿಂದ ಬದ್ಧ, ನಿತ್ಯ, ಮುಕ್ತರಾದ ತ್ರಿವಿಧ ಚೇತನರುಗಳ ಸ್ವಭಾವವನ್ನು ತಿಳಿಸುತ್ತೆ. ಆವುಗಳಿಗೆ ವಿರೋಧಿ ಈಶ್ವರತತ್ತ್ವವಾಗಿರುತ್ತೆ. ಬದ್ಧ ಜೀವಿಗಳ ದೋಷ ಯಾವುದೆಂದರೆ ತಪ್ಪನ್ನು ಮಾಡಿ ಅದನ್ನು ಶುದ್ಧಿಗೊಳಿಸುವಂತೆ ಪ್ರಕೃತಿ ಸಂಶ್ಲಿಷ್ಟ. ಅದರಿಂದ ವಿಮುಕ್ತ ವಾದ ಆಕಾರ ಅಂದರೆ ಪೂರ್ವಸಂಕುಚಿತಜ್ಞಾನ.

ಅದರ ಅನಂತರ ಒಂದು ಹಾಲು ವಿಶೇಷದಲ್ಲಿ ವಿಕಸಿತಜ್ಞಾನವನ್ನು ಪಡೆಯುವುದು. ಹಾಗೆಂದರೆ ಅಕಸ್ಮಿಕವಾದ ಜ್ಞಾನವಿಶೇಷ ನಿತ್ಯಜೀವನಕ್ಕೆ ವೇಷವೇನೆಂದರೆ ಪರಿಚ್ಛಿನ್ನ ಸ್ವರೂಪಸಾರತಂತ್ರ್ಯ. ಈ ದೋಷಗಳಿಗೆ ಈಶ್ವರ ಸ್ವರೂಪವು ವಿರೋಧಿಯಾಗಿರುತ್ತೆ. ಸಾರತಂತ್ರ್ಯ ದೋಷವೆಂದರೆ ನಿತ್ಯಸೂರಿಗಳಿಗೆ ಪಾರತಂತ್ರ್ಯ ಗುಣವಾದರೂ ಸಹ ಸ್ವತಂತ್ರರೂಪಿ ಈಶ್ವರನಿಗೆ ಅದು ದೋಷ. ಪುರುಷನಿಗೆ ಸ್ತ್ರೀಯರಿಗೆ ಶ್ಯಕ್ಲು ಭೇದದ ಹಾಗೆ ಸ್ವತಂತ್ರವಾದ ಈಶ್ವರನಿಗೆ ಪಾರತಂತ್ರ್ಯ ದೋಷ. ಅಖಿಲ ಹೇಯಪ್ರತ್ಯನೀಕತ್ವ ಎಲ್ಲಿ ಬಂದಿರೋ ಅಲ್ಲಿ ಕಲ್ಯಾಣೈಕತಾನತ್ವವೂ ಸಹ ಬರುತ್ತೆ.

ಶ್ರೀ ತಿರುನ್ನಾರಾಯಣಾರ್ಯರವರು ತಮ್ಮ ಪ್ರಬಂಧವನ್ನು ಪ್ರಾರಂಭಿಸುವಾಗ — "ಅಮಲ ಆದಿ" ಪದದ್ವಯದಿಂದ ಉಭಯಲಿಂಗ ವೈಶಿಷ್ಟ್ಯ

ವನ್ನು ನಿರೂಪಿಸುತ್ತಾರೆ. ಅನಂತತ್ವವೆಂದರೆ ನಿತ್ಯವಾಗಿ ಚೇತನಾ-ಚೇತನ ವ್ಯಾಪಕತ್ವಗಳಿಗೆ ವ್ಯಾಪಕವಾಗಿ ಅಂತರ್ಯಾಮಿಯಾಗಿ ಇರುವುದು ದೇಶತಃ ಕಾಲತಃ ವಸ್ತುತಶ್ಚ ಅಪರಿಚ್ಛೇದ್ಯವಾಗಿರುತ್ತೆ.

ಈಶ್ವರ ತತ್ತ್ವ ಈ ದೇಶದಲ್ಲಿದೆ, ಈ ದೇಶದಲ್ಲಿಲ್ಲ ಎಂದು ಹೇಳಲಾಗುವುದಿಲ್ಲ. ಅದು ವಿಭುವಾಗಿ ಸರ್ವತ್ರವ್ಯಾಪ್ತವಾಗಿರುತ್ತೆ.

"ಎಂಗಣಂ ನಿರ್ಗಂಡವೆಂದಾಂಗೆ" ಎಂದು ಶ್ರೀನಮ್ಮಾಳ್ವಾರು ತಿಳಿಸಿರುತ್ತಾರೆ. ಚೇತನಾ-ಚೇತನ ವ್ಯಾಪಕತ್ವ--ಇದೇ ಅವನ ನಿತ್ಯತ್ವ. ಈ ಕಾಲದಲ್ಲಿ ಇದೆ, ಕಾಲಾಂತರದಲ್ಲಿ ಇಲ್ಲ ಎನ್ನದೆ ನಿತ್ಯನಾದ್ದರಿಂದ ಕಾಲಪರಿಚ್ಛೇದರಹಿತ. ತನ್ನ ಹೊರತು ಸಮಸ್ತ ವಸ್ತುಗಳಿಗೆ ತಾನೇ ಸ್ವತಃ ಶೇಷಿಯಾಗಿ, ಸ್ವಯಂಪ್ರಕಾಶನು. ಅಂತರವಿಲ್ಲದಂತೆ, ತತ್ಸದೃಶ ವಸ್ತುವಿಲ್ಲದೆ ಇರುವುದರಿಂದ ವಸ್ತುಪರಿಚ್ಛೇದರಹಿತನು.

ಸಮಸ್ತ ಚೇತನಾ-ಚೇತನಗಳಿಗೆ ಪ್ರಕಾರತ್ವವೂ ಸಹ ವಿಶೇಷಣವಾಗಿರುತ್ತೆ. ಏಕಮಾತ್ರ ಈಶ್ವರನಿಗೆ ಪ್ರಕಾರತ್ವ ವಿಶೇಷ್ಯ. ಇದು ಸಂಪ್ರದಾಯಸಿದ್ಧ. ಪ್ರಕಾರ ಅನೇಕವಾದರೂ ಸಹ ಪ್ರಕಾರಿ ಒಂದೇ. ಈ ಪ್ರಕಾರಿಯೇ ಅದ್ವೈತ. ಇದನ್ನೇ ಬ್ರಹ್ಮಾದ್ವೈತವೆನ್ನುತ್ತಾರೆ. ವರಾಹ ಭಗವಂತನ ಪ್ರಾದುರ್ಭಾವ ಕಾಲದಲ್ಲಿ ಭಗವಂತನನ್ನು ಸ್ತೋತ್ರ ಮಾಡುವ ಜ್ಞಾನಿಗಳಾದ ಮಹರ್ಷಿಗಳು -- "ಪರಮಾರ್ಥಃ ತ್ವಮೇವ ಏಕಃ ನಾನ್ಯೋಸ್ತಿ ಜಗತಃ ಪತೇ" [ವಿ. ಪು. 4-88] ಎಂದು ಹೇಳಿರುತ್ತಾರೆ. ಈ ಶ್ಲೋಕದಲ್ಲಿ 'ಅನ್ಯಃ ನಾಸ್ತಿ' ಅಂದರೆ ಪರಮಾತ್ಮವಸ್ತುಭಿನ್ನ ಸಮಸ್ತ ವಸ್ತುಗಳು ಮಿಥ್ಯಾ ಎನ್ನಲ್ಪಡುತ್ತೆ. ಈ ಶ್ಲೋಕದಲ್ಲಿ 'ಯೇನ ವ್ಯಾಪ್ತಂ' ಎಂದು ವ್ಯಾಪ್ತಿಯನ್ನೂ 'ಜಗತಃ ಪತೇ' ಎಂದು ಶೇಷಿತ್ವ, ನಿಯಂತೃತ್ವ ಗಳನ್ನೂ ಹೇಳುತ್ತಾರೆ. ಅದರಿಂದ ಕೇವಲ ವ್ಯಾಪ್ತಿ ಮಾತ್ರ ಇದ್ದು, ಯಾವುದರಲ್ಲಿ ನಿಯಂತೃತ್ವವಿಲ್ಲವೋ ಆ ಜಡಾಕಾಶದಿಂದ ಬೇರೆಯಾಗಿರುವ ನಿಯಂತೃತ್ವವನ್ನು ಮಾತ್ರ ಪಡೆದು ವ್ಯಾಪ್ತಿಯಿಲ್ಲದ ರಾಜನಿಗಿಂತ ಬೇರೆಯಾದ ವಸ್ತು ಈಶ್ವರತತ್ತ್ವ. ಈ ಶ್ಲೋಕದಲ್ಲಿ ಜಗತ್ತು ಶರೀರ, ಈಶ್ವರನು ಆತ್ಮಾ ಎಂದು ಹೇಳಿದೆ. ಅಂದರೆ ಈಶ್ವರನು ಅಶ್ಯನಾಗಿ ಪ್ರಕಾರಿಯಾಗಿದ್ದು,

ದಂಡ-ಕುಂಡಲಾದಿಗಳಂತೆ ಅನಿಯತ ಪ್ರಕಾರವಾಗಿಲ್ಲದೆ, ಜಾತಿ-ಗುಣಾದಿಗಳಂತೆ ನಿಯತ-ಪ್ರಕಾರವಾಗಿ ಅಪೃಥಕ್‌ಸಿದ್ಧವಿಶೇಷವಾಗಿರುತ್ತಾನೆ.

ಯಾವ ಜಗತ್ತನ್ನು ತರ್ಕರ ರೂಪದಲ್ಲಿ ಈಶ್ವರನು ಸಹೆದಿರುತ್ತಾನೋ ಅದರಿಂದ ಬೇರೆಯಾದದ್ದು ಯಾವುದೂ ಇಲ್ಲವೆಂದರೂ ತನ್ನಂತೆ ಜಗತ್ಕರ್ತರ ತನಾಗಿ, ಸರ್ವಜ್ಞತಾದಿ, ಸ್ವತಂತ್ರನಾದವನು ಮತ್ತೊಬ್ಬನಿಲ್ಲ ಎಂದು ಬಗುತ್ತೆ. ಅವನ ಹೊರತು ಜಗತ್ತು ಮಿಥ್ಯೆ ಆಗುವುದಿಲ್ಲ. ಒಂದು ವೇಳೆ ಜಗತ್ತು ಮಿಥ್ಯೆ ಆಗಿದ್ದೇ ಆದರೆ 'ಜಗತಃ ಪತೇ' ಎಂದು ಜ್ಞಾನಿಗಳು ಈಶ್ವರನನ್ನು ಕುರಿತು ಹೇಳುವುದು ಸರಿಯಾಗುವುದಿಲ್ಲ.

"ಹೇ ಭೂಪತೇ! ತ್ವದನ್ಯೋ ನಾಸ್ತಿ" ಎಂದು ಒಬ್ಬ ರಾಜನನ್ನು ಸ್ತೋತ್ರಮಾಡಿದ್ದೇ ಆದರೆ ಆ ವಾಕ್ಯದ ಅರ್ಥವೇನು? ಈ ಭೂಪತಿಗೆ ಸಮಾನ ಮತ್ತೊಬ್ಬ ಭೂಪತಿ ಇಲ್ಲವೆಂದು ಅರ್ಥವಾಗುತ್ತೆ. ಆದರೆ ರಾಜನಿಗೆ ಭೂಮಿ ಇರುವುದು ಅಸತ್ಯವೆಂದು ಹೇಳಲಾಗುವುದಿಲ್ಲ. ಅದರಿಂದ ಪರತಂತ್ರರೂಪದಲ್ಲಿ ವಿಶೇಷಕಗಳಿಂದ ಕೂಡಿರುವ ಜ್ಞೇತನಾ-ಜ್ಞೇತನ ವಸ್ತುಗಳು ಅನೇಕವಾಗಿದ್ದರೂ ಕೂಡ ಸರ್ವ ಕರ್ತೃರಿಯಾಗಿ, ಸರ್ವ ಪ್ರಕಾರ ಯಾಗಿ ಇರುವ ಸ್ವತಂತ್ರನಾದ ಈಶ್ವರತತ್ತ್ವ ಒಂದೇ ಆಗಿರುತ್ತೆ.

ಇದರ ಹೊರತು ಮತ್ತೊಂದು ಸ್ವತಂತ್ರ ತತ್ತ್ವ ಇಲ್ಲ. ಇದೇ ಬ್ರಹ್ಮಾದ್ವೈತ ಶ್ರುತ್ಯರ್ಥ. ಇಲ್ಲಿ ಒಂದು ಸಂದೇಹ ಉತ್ಪನ್ನವಾಗುತ್ತೆ. ಅದು ಏನೆಂದರೆ: ಸಂಸಾರದಲ್ಲಿ ಇರುವ ವಸ್ತುಗಳನ್ನು ನಾವು ಪ್ರತ್ಯಕ್ಷವಾಗಿ ನೋಡುವ ಸಮಯದಲ್ಲಿ ಅದು ಒಂದು ವೇಳೆ ಬ್ರಹ್ಮಾತ್ಮಕವಾಗಿಯೋ ಅಥವಾ ಬ್ರಹ್ಮಪರತಂತ್ರವಾಗಿಯೋ ಕಾಣಿಸುವುದಿಲ್ಲ. ಹೀಗೆ ವಸ್ತುಗಳು ಅಬ್ರಹ್ಮಾತ್ಮಕ ರೂಪದಿಂದ, ಸ್ವತಂತ್ರರೂಪದಿಂದ ಪ್ರತ್ಯಕ್ಷಸಿದ್ಧವಾಗುವುದರಿಂದ ವಿತದ್ವಿಪರೀತ ರೂಪವಾಗಿ ಶಾಸ್ತ್ರವಿರೋಧವಸ್ತುಗಳನ್ನು ಬ್ರಹ್ಮಾತ್ಮಕ ಪರತಂತ್ರರೂಪದಿಂದ ಹೇಗೆ ಹೇಳಲಾಗುತ್ತೆ?

ಅದಕ್ಕೆ ಪರಿಹಾರ:– ದೇಹವೇ ಆತ್ಮ ಎಂಬ ಭ್ರಾಂತಿ ಪ್ರತ್ಯಕ್ಷರೂಪವಾಗಿದ್ದರೂ ದೇಹಾತ್ಮ ಭೇದವನ್ನು ಶಾಸ್ತ್ರ ಹೇಗೆ ಹೇಳುತ್ತೋ ಹಾಗೆಯೇ ಪ್ರತ್ಯಕ್ಷಸಿದ್ಧವಾದ ಸ್ವಾತಂತ್ರ್ಯಭ್ರಮವನ್ನು ಶಾಸ್ತ್ರವು ನಾಶಪಡಿಸುತ್ತೆ.

ಆದರಿಂದ ದೇಹಾತ್ಮ ಜ್ಞಾನವಿಷಯ ಯಾವುದಿದೆಯೋ ಅದು ಪ್ರತ್ಯಕ್ಷ ವಿಷಯ. ಆದೇ ತರಹ ಶೋಣಿತದ್ದು ವಿಷಯವು ಸ್ವತಂತ್ರ ಎಂಬ ಸಿದ್ಧಾಂತವೂ ಸಹ ವ್ಯಭಿಚಾರಣ-ಜನ್ಯನಾಗುವುದರಿಂದ ತೊಂದರೆಯಾಗುತ್ತೆ.

ಅವ್ಯಭಿಚಾರಣ-ಜನ್ಯ-ಪ್ರತ್ಯಕ್ಷಕ್ಕೆ ಶಾಸ್ತ್ರವು ಬಾಧಕವಾಗುವುದಿಲ್ಲ. ಆದರೂ ಸಹ ವ್ಯಭಿಚಾರಣ-ಜನ್ಯ-ಪ್ರತ್ಯಕ್ಷಕ್ಕೆ ಶಾಸ್ತ್ರವು ಉದ್ದೀಪಿಸುತ್ತೆ. ಅದ್ದರಿಂದ ದೇಹಾತ್ಮ-ಭ್ರಾಂತಿಯನ್ನು ಶಾಸ್ತ್ರವು ಯಾವ ರೀತಿ ಉದ್ದೀಪಿಸುತ್ತೋ ಹಾಗೆಯೇ ಜಗತ್ತು ಸ್ವತಂತ್ರ ಎಂಬ ಭ್ರಾಂತಿಯನ್ನು ಸಹ ಶಾಸ್ತ್ರವು ತಡೆಯುತ್ತೆ. ಹೀಗೆ ಅವನು ಸ್ವತಃ ವಿವೇಚ್ಯನಾಗಿ ಇರುವುದರಿಂದ ಈ ವಸ್ತುಗಳು ಸಮಾನವಾಗಿರುತ್ತೆ. ಇಂತಹ ವಸ್ತು ಪರಿಚ್ಛೇದವು ಈಶ್ವರತತ್ತ್ವವೆಂದು ತಿಳಿಯುತ್ತೆ. "ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ" [ಮುಂ. ಉಪ. 1-1-6] "ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ" [ತೈ. ಉಪ] "ಯಸ್ಯ ಆತ್ಮಾ ಶರೀರಂ ಯಸ್ಯ ಪೃಥ್ವೀ ಶರೀರಂ" [ಸುಬಾ. ಉಪ.] "ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ" [ಶ್ವೇ. ಉಪ.] ಈ ಪ್ರಮಾಣಗಳಿಂದ ಈ ವಿಷಯವನ್ನು ತಿಳಿಸಲಾಗಿದೆ. 'ನಿತ್ಯಂ ವಿಭುಂ' ವಾಕ್ಯದಲ್ಲಿ ನಿತ್ಯ ವೆಂಬ ಶಬ್ದದಿಂದ ಕಾಲ ಅಪರಿಚ್ಛೇದವನ್ನು ತಿಳಿಸಿದೆ. ಇದೇ ಕಾಲತಃ ದೇಶತಃ ವಸ್ತುತಶ್ಚ ಅಪರಿಚ್ಛೇದ್ಯತ್ವ ಅನಂತತ್ವವೆಂದು ತಿಳಿಸಿದೆ. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಹೀಗೆ ತೈತ್ತರೀಯ ಉಪನಿಷತ್ತಿನ ಕೋಧಕ ವಾಕ್ಯಗಳಲ್ಲಿ ಈಶ್ವರತತ್ತ್ವ ಸತ್ಯರೂಪ ಮತ್ತು ಅನಂತರೂಪ ವೆಂದು ತಿಳಿಸಲಾಗಿದೆ. ಜ್ಞೇತನಾ-ಜ್ಞೇತನಗಳ ವ್ಯಾಪಕ ನಿಯಂತೃವಾಗಿ ಈಶ್ವರನಿರುವುದಾದರೆ ವ್ಯಾಪ್ತಿಗತ ದೋಷ ವ್ಯಾಪಕದಲ್ಲಿ ಇರುವುದಿಲ್ಲ ಶರೀರವಲ್ಲಿ ಅಧಿಷ್ಠಿತನಾಗಿ ಸ್ವಾಧೀನರೂಪದಿಂದ ನಡೆಸುವವನಾದ ದೇಹಾಂತರ್ಗತ ಜೀವಾತ್ಮನಿಗೆ ಹೇಗೆ ದೇಹಗತ ಬಾಲ್ಯ-ಯೌವನಾದಿ ವಿಕಾರವುಂಟಾಗುವುದಿಲ್ಲವೋ ಹಾಗೆಯೇ ತ್ರಿವಿಧ ಜ್ಞೇತನಾ-ಚೇತನಗಳಿಗೆ ನಿಯಂತೃವಾಗಿರುವುದಾಗಿ, ಅವನಿಗೆ ಶರೀರವಾಗಿ ಇರುವ ಈಶ್ವರನಿಗೆ ಜ್ಞೇತನಾ-ಜ್ಞೇತನಗತ ವ್ಯಾಪ್ತಿ ಜ್ಞೇತನಾ-ಜ್ಞೇತನಗತ ದೋಷವಿರಲಾರದು. "ಏವಿಶೇಷಾ ಉಭಯೇಷಾಮಪಿ ಆದಾನೋಪಪತ್ತೇರಾದ್ಯ, ಭಾವಸ್ಯೈ

ಅದನ್ನೈಕ್ಯೂಡಿಲ್ ಅವನ್ಸೈಯುಂ ಕೂಡಲಾನೇ" ಎಂದು ಸಮರ್ಥಿಸಿ ವಾರ್ರವದು ತಿಳಿಸಿರುತ್ತಾರೆ. [ತಿ. ಮೊಳಿ. 3-4-10]

ಶರೀರರೂಪಿ ಜೀವಾತ್ಮನಿಗೆ ಶರೀರಗತ ಬಾಲ್ಯಾದಿಗಳು ಉಂಟಾಗುವುದಿಲ್ಲ. ಅದರೂ ಸಹ ಶರೀರ ಸಂಬಂಧ ನಿಬಂಧನವಾದ ದುಃಖ ನುಕ್ತು ಅಜ್ಞಾನಾದಿಗಳು ಬರುತ್ತವೆ. ಹಾಗೇ ಶರೀರಭೂತ ಜ್ಞೇತನಾ-ಜ್ಞೇತನ ಸಂಬಂಧದಿಂದ ಈಶ್ವರನಿಗೂ ಸಹ ಯಾವ ದೋಷವೂ ಉಂಟಾಗುವುದಿಲ್ಲ. ಅದಕ್ಕೆ ಕಾರಣ—ಪ್ರವೇಶ ಹೇತು ವಿಶೇಷ.

ಶ್ರೀವೇದವ್ಯಾಸರು—"ಸಂಭೋಗ ಪ್ರಾಪ್ತಿಃ ಇತಿ ಜ್ಞೇತನ ವಿಶೇಷ್ಯಾತ್" ಎಂದು ತಿಳಿಸಿರುತ್ತಾರೆ. [1-2-8]

ಜೀವಾತ್ಮನ ಬಾಗೆ ಕರ್ಮದ ಹೊರತು, ಮತ್ತೊಬ್ಬರ ಅನುಗ್ರಹ ವಿಲ್ಲದೆ ಜಗತ್ಕರ್ತೃವೇಶವಾಗಿರುತ್ತೆ. ಅದರಲ್ಲಿ, ಒಂದು ಪಕ್ಷಿ ಕಳಿತ ಹಣ್ಣನ್ನು ತಿಂದು ಕಾಂತಿಹೀನವಾಗುತ್ತೆ. ಮತ್ತೊಂದು ಪಕ್ಷಿ ತಾನು ತಿನ್ನದೆ ಆ ಪಕ್ಷಿಗೇ ತಿನ್ನಿಸಿ ತಾನು ಸ್ವಯಂ ಪ್ರಕಾಶಮಾನವಾಗಿರುತ್ತೆ. ಈ ವಿಷಯ ವನ್ನು ಉಪನಿಷತ್ತು "ದ್ವಾ ಸುಪರ್ಣಾ" ಎನ್ನುವಲ್ಲಿ ಹೇಳಿರುತ್ತೆ. ಶರೀರಾಂತರ್ವರ್ತಿ ಜೀವಾತ್ಮ ಪಕ್ಷಿಯು ಶರೀರ ಸಂಬಂಧ ಪ್ರಯುಕ್ತವಾದ ಸುಖ-ದುಃಖವನ್ನು ಅನುಭವಿಸುತ್ತೆ. ಈಶ್ವರರೂಪೀ ಪಕ್ಷಿಯು ಅದೇ ಶರೀರದಲ್ಲಿ ಇದ್ದುಕೊಂಡು—"ಅನಶ್ನನ್ ಅನ್ಯಃ"—ದೇಹಸಂಬಂಧದ ಪ್ರಯುಕ್ತ ಸುಖ-ದುಃಖಗಳನ್ನು ಅನುಭವಿಸದೆ ಇರುತ್ತೆ. ಇವಕ್ಕೆ ಕಾರಣ, ಇವರ ಪ್ರಯೋಜನ ದೇಹಸಂಬಂಧವಿಲ್ಲದಿರುವುದೇ. ಆದು ಎರಡಕ್ಕೂ ಸಮಾನವೇ; ಆದರೆ ದೇಹ ಪ್ರವೇಶ ಹೇತುವೇ ಪ್ರಯೋಜನ. ಸಂಸಾರಿ ಗಳಿಗೆ ದೇಹ ಪ್ರವೇಶ ಹೇತು-ಕರ್ಮ. ಈಶ್ವರನಿಗೆ ದೇಹಪ್ರವೇಶ ಹೇತು-ಕರುಣೆಯೇ. "ಸರ್ವಭೂತಾಂತರಾತ್ಮಾ" ಎಂದು ಹೇಳಿ ಸುಬಾಲೋಪ ನಿಷತ್ತು ಈಶ್ವರನನ್ನು ಜ್ಞೇತನಾ-ಜ್ಞೇತನ ವ್ಯಾಪಕನೆಂದು ತಿಳಿಸಿ, ತಕ್ಷಣ "ಅಪಹತಪಾಪ್ಮಾ" ಎಂದು ಹೇಳುತ್ತೆ. ಅಂದರೆ ವ್ಯಾಪ್ತದೋಷ ಸಂಪರ್ಕ ರಹಿತನೆನ್ನುವುದಕ್ಕೆ ಸಮಾನ. ಶ್ರೀ ತಿರುಮಂಗೈ ಆಳ್ವಾರ್ವರವರು ಸಹ "ಅಂದರತ್ತಿಲ್ ಅಂದಣಂ" ಎಂದು ತಿಳಿಸಿರುತ್ತಾರೆ. "ಅಂತರತ್ತಿಲ್

ಅಂತರಾಮಿಡತ್ತಿಲ್ ಅಂದೆಣಂ " ಶುದ್ಧವ್ಯಾಪ್ತದೋಷ ಅಸಂಸ್ಪೃಷ್ಟನು ಎಂದು ಹೇಳಿರುತ್ತೆ. ಶ್ರೀ ನಮ್ಮಾಳ್ವಾರವರೂ ಸಹ " ಯಾವಗುಮ್ ಯುವ್ಯೆಯುಮ್ ತಾನಾಯ್ ಅವರವರ್ ಸಮಯಂತೋಱುಂ ತೋಱಯ್ ವಿಲನ್ " [3-4-10] ಎಂದು ಅನುಗ್ರಹಿಸಿರುತ್ತಾರೆ.

ಕಲ್ಯಾಣಗುಣ :— ಈಶ್ವರನು ಜ್ಞಾನ-ಶಕ್ತ್ಯಾದಿ ಕಲ್ಯಾಣಗುಣ ವಿಶಿಷ್ಟನು. ಇವನ ಜ್ಞಾನ-ಶಕ್ತ್ಯಾದಿ ಕಲ್ಯಾಣಗುಣವು ನಿತ್ಯವಾಗಿ, ನಿಸ್ಸೀಮವಾಗಿ, ನಿಸ್ಸಂಶಯವಾಗಿ, ನಿರುಪಾಧಿಕಸಮಾನಾದಿ ರಹಿತವಾಗಿ ಇರುತ್ತೆ. ಈಶ್ವರನೇ ಜಗತ್ಕಾರಣಭೂತನು. ಅವನೇ ತ್ರಿವಿಧ ಕಾರಣನಾಗಿಯೂ ಇರುವನು. ಶ್ರೀ ಗಜೇಂದ್ರಾಳ್ವಾನ್ ಸಹ ಭಗವಚ್ಛರಣಾಗತಿ ಮಾಡುವಾಗ " ನಮೋನಮಸ್ತೇಽಖಿಲಕಾರಣಾಯ ನಿಷ್ಕಾರಣಾಯಾದ್ಭುತಕಾರಣಾಯ " ಎಂದು ಪ್ರಾರ್ಥಿಸಿರುತ್ತಾರೆ.

ಬ್ರಹ್ಮ ಮತ್ತು ಶಿವಾದಿಗಳಿಗೆ ಕಾರಣತ್ವವಿದ್ದರೂ ಸಹ ಅದು ಔಪದೇಶಿಕ. ಔಪದೇಶಿಕ ಕಾರಣತ್ವವೂ ಕೂಡ ಈಶ್ವರನಾದ ನಾರಾಯಣನು ಅಂತರಾತ್ಮನಾಗಿ ವಿರಾಜಿಸುವುದರಿಂದಲೇ ; ಇದನ್ನು ನಮ್ಮಾಳ್ವಾರ್ರು ಸಹ— " ಅರನಯನೆನ ಉಲಹಳ್ಕ್ತು " [1-1-8], " ಶದಾ ದರ್ಶಿತ ಪಂಥಾನೌ ಸೃಷ್ಟಿಸಂಹಾರಕಾರಕೌ" ಎಂದು ಮಹಾಭಾರತದಲ್ಲಿ ವೇದ ವ್ಯಾಸರೂ ತಿಳಿಸಿರುತ್ತಾರೆ.

ಈಶ್ವರಶಬ್ದ—ವ್ಯಾಖ್ಯಾನ ಮಾಡುವ ಸಮಯದಲ್ಲಿ ಶ್ರೀ ಶಂಕರಾಚಾರ್ಯರು ಗೀತಾಭಾಷ್ಯದಲ್ಲಿ :- " ಈಶನಶೀಲೋ ನಾರಾಯಣಃ " ಎಂದು ತಿಳಿಸಿರುತ್ತಾರೆ. ಶ್ರೀ ಪರಾಶರಭಟ್ಟರು ಸಹಸ್ರನಾಮಭಾಷ್ಯದಲ್ಲಿ "ಈಶ್ವರಃ" [ಪಾಣಿನೀಸೂತ್ರ 3-2-176] " ಸ್ಥೇಶ ಇಭಾದಿ ವರಚ್ " ಎಂದು ತಿಳಿಸಿರುತ್ತಾರೆ. ಅಂದರೆ ನಾರಾಯಣನಿಗೆ ಜಗದೀಶನ ಸ್ವಭಾವ ಇದೆ ಎಂದು ಅರ್ಥ. ಸ್ವಭಾವ ಎನ್ನುವ ಅರ್ಥದಲ್ಲಿ ಬಂದಿರುವ "ವರಚ್"ಪ್ರತ್ಯಯ ಸ್ಥಾವರ ಶಬ್ದದಹಾಗೆ "ತಿಷ್ಠತೀತಿ ಸ್ಥಾವರಃ" ಎಂದು ವ್ಯುತ್ಪತ್ತಿ. ನಾವೂ ನೋಡಿರುತ್ತೀವೆ. ಅದರೂ ಸಹ ನಿಂತಿರುವುದೇ ಸ್ವಭಾವವಾಗಿರುವ ವೃಕ್ಷಗಳಿಗೆ ಸ್ಥಾವರವೆಂದು ಹೇಳುತ್ತಾರೆ. ಹಾಗೆಯೇ

ಶಿವಾದಿಗಳಿಗೂ "ಈಶನಮ್" ಎಂಬಾಗಿದ್ದರೂ ಈಶನತ್ವಕ್ಕೆ ಸ್ವಭಾವ ರೂಪದಲ್ಲಿರುವ ನಾರಾಯಣನಿಗೇ ಈಶನ ಶಬ್ದವನ್ನು ಕೇಳುವ ಅಭಿಪ್ರಾಯ ದಿಂದ ಶ್ರೀ ಕೆಲಕರ ಭಗವತ್ಪಾದರು – "ಈಶನಶೀಲೋ ನಾರಾಯಣಃ" ಎಂದು ಗೀತಾಭಾಷ್ಯದಲ್ಲಿ ವಿವರಿಸಿರುತ್ತಾರೆ. ಶ್ರೀ ಶ್ರದ್ಧಾದಾಳ್ ವಾನ್ ಸನ ತನ್ನ ತಂಬಿಗೆ 'ಸರ್ವನಿಯಂತಾ ನಾರಾಯಣಸ್' ವಿಷಯವನ್ನು ತಿಳಿಸುವ ಸಮಯದಲ್ಲಿ – "ಶಾಸ್ತಾ ವಿಷ್ಣುಃ ಅಶೇಷತಃ" ಎಂದು ಎಲ್ಲರ ಹೃದಯ ಪ್ರದೇಶದಲ್ಲಿ ಇದ್ದುಕೊಂಡು ಎಲ್ಲರಿಗೂ ನಿಯಮನ ಮಾಡುತ್ತಾನೆ. ಅವನನ್ನೇ ನಾರಾಯಣ, ಸರ್ವೇಶ್ವರನೆನ್ನುತ್ತಾರೆ. ಆದ್ದರಿಂದ ಬ್ರಹ್ಮಾ– ಶಿವಾದಿಗಳಿಗೆ ಮತ್ತು ಅನ್ಯದಾದಿಗಳಿಗೆ ನಿಯಂತೃತ್ವವು ಸಂಕುಚಿತ. ಏಕ ಮಾತ್ರ ನಾರಾಯಣನಿಗೆ ಅಸಂಕುಚಿತನಿಯಂತೃತ್ವ. ಆದ್ದರಿಂದ ಅವನನ್ನು ಈಶ್ವರನೆಂದು ಕರೆಯುತ್ತಾರೆ. ಹಾಗೆಯೇ ಜಕುರ್ಮುಖ ಮತ್ತು ಶಿವಾದಿಗಳಿಗೆ ಕಾರಣತ್ವ ಸಂಕುಚಿತ. ಈಶ್ವರಸ್ವರೂಪನಾದ ನಾರಾಯಣನಿಗೆ ಮಾತ್ರ ಕಾರಣತ್ವವು ಪೂರ್ಣವಾಗಿರುತ್ತೆ. ಅವನು ಅಖಿಲ ಕಾರಣರೂಪದಲ್ಲಿಯೂ ಇರುತ್ತಾನೆ. ಅವನಿಗೆ ಒಂದೇ ಕಾರಣ ವಿಲ್ಲದೆ ಇರುವುದರಿಂದ ನಿಷ್ಕಾರಣರೂಪದಲ್ಲಿಯೂ ಇರುತ್ತಾನೆ. ಅವನು ಉಪಾದಾನ, ನಿಮಿತ್ತ, ಸಹಕಾರಿ–ತ್ರಿವಿಧಕಾರಣರೂಪದಲ್ಲಿಯೂ ಸಹ ಇರುತ್ತಾನೆ. ಆದ್ದರಿಂದ ಅದ್ಭುತ ಕಾರಣರೂಪದಲ್ಲಿರುತ್ತಾನೆ. ಘಟವೆಂಬ ಕಾರ್ಯ ಆಗುತ್ತಿರುವಾಗ ಕುಂಬಾರನು ಜ್ಞಾನ, ಇಚ್ಛೆ ಮತ್ತು ಪ್ರಯತ್ನ ಪ್ರಳಯನು ನಿಮಿತ್ತಕಾರಣ. ಮೃತ್ಪಿಂಡ ಯಾವುದೋ ಅದು ಗಡಿಗೆಯ ರೂಪದಲ್ಲಿ ಅವಸ್ಥಾಂತರ ಹೊಂದುವುದರಿಂದ ಉಪಾದಾನ ಕಾರಣವಾ ಗಿರುತ್ತೆ. ಈ ರೀತಿ ಪ್ರಪಂಚದಲ್ಲಿ ಘಟಾದಿ ಪದಾರ್ಥಗಳು ಉತ್ಪನ್ನ ವಾಗುವಾಗ ಉಪಾದಾನ, ನಿಮಿತ್ತ, ಸಹಕಾರಿ–ಕಾರಣ ಅವಶ್ಯಕವಾಗುತ್ತೆ. ಅದು ಬೇರೆಬೇರೆಯಾಗಿರುವುದನ್ನು ನೋಡುತ್ತೇವೆ. ಜಗತ್ಕಾರಣನಾದ ಈಶ್ವರತತ್ತ್ವವು ವಿಲಕ್ಷಣತತ್ತ್ವವಾದ್ದರಿಂದ ಇದು ಒಂದೇ ತ್ರಿವಿಧತತ್ತ್ವ ವಾಗಿರುತ್ತೆ. ಇದೇ ಇದರ ಅದ್ಭುತತತ್ತ್ವವಾಗಿರುತ್ತೆ.

ಶ್ರೀ ಗಡೋಂದ್ಯಳ್ವಾರ್ ಈ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡೇ 'ಅದ್ಭುತಕಾರಣನಾಯೆ' ಎಂದನು. ಈಶ್ವರನು ಹಾಗಲ್ಲದೆ ತ್ರಿವಿಧ ಕಾರಣ

ಭೂತನಾಗಿರುತ್ತಾನೆ. ಈಶ್ವರನ ಸರ್ವಜ್ಞತ್ವ, ಸರ್ವಶಕ್ತಿತ್ವ, ನಿಮಿತ್ತತ್ವ, ಉಪಾದಾನತ್ವ ಉಪಯೋಗಿಗಳೆಂದು ಶ್ರುತ ಪ್ರಕಾಶಿಕೆಯಲ್ಲಿ ತಿಳಿಸಿದುತ್ತೆ. ಸರ್ವಜ್ಞನಾದ್ದರಿಂದ ನಿಮಿತ್ತಕಾರಣನಾಗಿರುತ್ತಾನೆ. ಸರ್ವಶಕ್ತಿಯುಕ್ತನಾದ್ದರಿಂದ ಉಪಾದಾನ ಕಾರಣನಾಗುತ್ತಾನೆ. ಸಮಸ್ತ ವಿಕಾಸಕ್ಕೆ ಕಾಲ ಸಹಕಾರಿಯೇಕು. ಅದ್ದರಿಂದ ಕಾಲಶರೀರಕ ಪರಮಾತ್ಮನು ಸಹಕಾರಿ ಕಾರಣನೂ ಸಹ ಆಗಿರುತ್ತಾನೆ. ಹೀಗೆ ನಿಳಮಾತ್ರ ಈಶ್ವರನು ತ್ರಿವಿಧ ಕಾರಣನು. ಇದರ ವಿಚಾರವಾಗಿ ಕಾರಣವಸ್ತು ವಿನ ವಿಷಯದಲ್ಲಿ ಶರಣಾಗತಿ ಮಾಡುವಾಗ 'ಉಪ್ತತಕಾರಣಾಯ' ಎಂದರು.

ಶ್ರೀನವ್ಯಾಳ್ ಪಾರ್ಥವರು "ವೇರ್ ಮುದಲಾಯೆ ವಿತ್ತಾಯ್" [2-8-10] ವೇರ್ ಎಂದರೆ ಸಹಕಾರಿ ಕಾರಣ, ಮುದಲ್ ಎಂದರೆ ನಿಮಿತ್ತ ಕಾರಣ, ವಿತ್ತು ಎಂದರೆ ಉಪಾದಾನ ಕಾರಣ ಎಂದು ಹೇಳಿರುತ್ತಾರೆ. "ಮುದಲ್ ತನಿ ವಿತ್ತಾಯೋ" [ತಿ.ಮೊಳಿ 10-10-6] 'ಮುದಲ್' ಎಂದರೆ ನಿಮಿತ್ತ ಕಾರಣ, 'ತನಿ' ಎಂದರೆ ಸಹಕಾರಿ ಕಾರಣ, 'ವಿತ್ತು' ಎಂದರೆ ಉಪಾದಾನ ಕಾರಣ ಎಂದು. ಶ್ರೀ ವೇದವ್ಯಾಸರು – "ಪ್ರಕೃತಿಶ್ಚ" [ಬ್ರ. ಸೂತ್ರ 1-4-23] "ಸಾಕ್ಷಾಚ್ಚ ಉಭಯಾಮ್ನಾನಾತ್", [ಬ್ರ. ಸೂತ್ರ 1-4-25] "ಬ್ರಹ್ಮನನಂ ಬ್ರಹ್ಮಣ ವ್ಯಕ್ಷ ಅಸೀತ್" ಎಂದು ಉಪನಿಷತ್ತು ಸಹ ಈಶ್ವರತತ್ತ್ವರೂಪೀ ಬ್ರಹ್ಮತತ್ತ್ವವೂ ಜಗತ್ತಿಗೆ ಅಭಿನ್ನನಿಮಿತ್ತೋಪಾದಾನವೆಂದು ಹೇಳಿರುತ್ತೆ. ಈಶ್ವರನು ಪ್ರಕಂಪಿತ ಸ್ವತಂತ್ರನು. ಜಡರಿಗೆ ಉಂಟಾಗುವ ಪರಿಶ್ರಿತಪಾರತಂತ್ರ್ಯವೂ ಸಹ ಈ ಸ್ವಾತಂತ್ರ್ಯದ ಪೀಠಭೂಮಿಯಾಗಿರುತ್ತೆ. ಈಶ್ವರನೆಂಬ ಬ್ರಹ್ಮ ಸ್ವರೂಪವು ಒಂದೇ ಆದರೂ ಅವನ ದಿವ್ಯಶರೀರವು ಐದು ವಿಧವಾಗಿರುತ್ತೆ.

ಈಶ್ವರ ಸ್ವರೂಪವೇ ಪರತತ್ತ್ವ, ವ್ಯೂಹ, ವಿಭವ, ಅಂತರ್ಯಾಮಿತ್ವ ಮತ್ತು ಅರ್ಚಾ ಹೀಗೆ ಐದು ವಿಧ. ಶ್ರೀನವ್ಯಾಳ್.ವಾರ್ಥವರು "ನಿಱ್ಱ ನೀರ್ಮೇ ನಿಲೈಯಾಯ್, ಪುಲ್ಗಳೇಲ್ ಪಿರಾಯೆ" [ತಿ.ಮೊಳಿ.6-9-5] ಎಂದು ಈ ಐದು ವಿಧದ ನಿರೂಪಣೆ ಮಾಡುತ್ತಾರೆ. ಶ್ರೀ ಕೂರತ್ತಾಳ್. ಪ್ರಾಸ್ ಸಹ – "ಆಕ್ಕೀಡಭೂಮಿತ್ವ" [ಸುಂ. ಚಾ. ಸ್ತವ 58] ಅನಂದ

ಮುಂದಿರ, [ಸುಂ. ಬಾ. 79] ಪ್ರತ್ಯರ್ಥಿನೀ, [ಸುಂ. ಬಾ. 80] ಇತ್ಯಾದಿ ಶ್ಲೋಕಗಳಲ್ಲಿ ಪರತ್ವವನ್ನು "ದೇವಸ್ಯ ಸುಂದರ ಭುವಸ್ಯ" [ಸುಂ. ಬಾ. ಸ್ತ. 84] ಮುಂತಾದುವುಗಳಿಂದ ವಿಭವಾವತಾರವನ್ನು ತಿಳಿಸಿರುತ್ತಾರೆ. "ತ್ವಂ ಹಿ ಸುಂದರ" [ಸುಂ. ಬಾ. ಸ್ತವ. 117] ಇತ್ಯಾದಿಗಳಿಂದ ಅರ್ಚಾವತಾರದ ವಿವರಣೆಯನ್ನು ಮಾಡಿರುತ್ತಾರೆ. ಭಗವದ್ಯೂಹಗಳನ್ನು ಅನುಭವಿಸಿರುತ್ತಾರೆ. ವರದರಾಜಸ್ತವದಲ್ಲಿ "ಗುಣೈಸ್ತ್ವದ್ವಿಪ್ಸೈರ್ವ್ಯೂಹೈಃ" [ಶ್ಲೋ 16] "ಇಯಮಪಿ ವೈಹಿ" [ವರ. ಸ್ತವ 17] "ಪರೋವಾ ವ್ಯೂಹೋ ವಾ [ವ. ಸ್ತವ. 18] ಇತ್ಯಾದಿಗಳಿಂದ ಭಗವಂತನ ರೂಪವನ್ನು ಅನುಭವಿಸಿರುತ್ತಾರೆ.

ಶ್ರೀ ಪರಾಶರಭಟ್ಟರು "ಋಡಾಗುಣ್ಯಾಶ್ ವಾಸುದೇವ" [ಶ್ರೀರಂ. ಸ್ತವ. ಉ. 39] "ಜಾಗ್ರತಸ್ವಪ್ನ" [ಶ್ರೀ ರಂ. ಸ್ತ. 40] ಮುಂತಾದವುಗಳಿಂದ ಪರವ್ಯೂಹಗಳನ್ನೂ "ಧೃತಿನಿಯಮನ ಶ್ರೀರಂಗ" [ಶ್ರೀರಂ. 48] ವಿಭವಾವತಾರವನ್ನೂ ಸ್ಪಷ್ಟಪಡಿಸುತ್ತಾರೆ. ಶ್ರೀ ವಾಕ್ಯ್ರವರದಾಚಾರ್ಯ ಸ್ವಾಮಿಯವರು 'ಪರಾದಿ ಪಂಚಕ' ಎಂಬ ಪ್ರಬಂಧದಲ್ಲಿ "ಉದ್ಯದ್ಭಾನು" ಎಂಬ ಪ್ರಥಮ ಶ್ಲೋಕದಿಂದ 'ಪರತ್ವ'ವನ್ನೂ 'ಅವೋದೇ' ಎಂಬ ಎರಡನೆಯ ಶ್ಲೋಕದಿಂದ 'ವ್ಯೂಹ'ವನ್ನೂ 'ವೇದಾನ್ವೇಷಣ'ದಿಂದ ವಿಭವಾವತಾರವನ್ನೂ 41ನೆಯ ಶ್ಲೋಕದಿಂದ 'ಅಂತರ್ಯಾಮಿತ್ವ'ವನ್ನೂ 'ಶ್ರೀರಂಗಸ್ಥಲ' ಎಂಬುವುದರಿಂದ 'ಅರ್ಚಾವತಾರವನ್ನೂ' ತಿಳಿಸಿರುತ್ತಾರೆ. ಅವುಗಳಲ್ಲಿ ಪರತ್ವವೆಂದರೆ ಏನು?

ಪರತ್ವವೆಂದರೆ: "ನ ಕಾಲಸ್ಯೇಶ ವೈ ಪ್ರಭುಃ"; ಭಾರತದಲ್ಲಿ "ಕಾಲಃ ಯದ್ವಿಭೂತೇಃ ಪರಿಣಾಮಯೇತುಃ", "ಯೋ ವೈ ನ ಜಾತು ಪರಿಣಾಮಪದಾಸ್ಪದಃ ಸಕಲಾತಿಗಾ ತವ ಪರಾ ಮಹತೀ ವಿಭೂತಿಃ", "ಯತ್ಕಾಲಾಖ್ ಅಪಜೀವಮವ್ಯ" [ಶ್ರೀಗುಣರತ್ನಕೋಶ] ಹೀಗೆ ಹೇಳುವಂತೆಯೇ ಕಾಲಕೃತ ಪರಿಣಾಮವನ್ನು – "ನಲಮುಲ್ಲಮಿಂದ ದೋರ್ದಾನಾಟ್ಟಲ್" [ತಿ. ಮೊ. 2-8-4] ಎನ್ನುವಂತೆಯೇ "ಅನಂದ ಅಳವಿರಂದು" ಅದ್ವಿತೀಯವಾಗಿರುವ ಶ್ರೀ ವೈಕುಂಠದಲ್ಲಿ ನಿತ್ಯ ಅಸಂಕುಚಿತ ಜ್ಞಾನವಾಗಿ ಇರುವ ಅನಂತ, ಗರುಡ, ವಿಷ್ವಕ್ಸೇನಾದಿ ನಿತ್ಯಸೂರಿಗಳ

"ಯಸ್ಮಿನ್ ಪರೇ ವಿದ್ಯಾದಂತೇ ಮುಕ್ತಾಃ ಸಂಸಾರಬಂಧನ್ಮೈಃ" [ಲಕ್ಷ್ಮೀ ತಂತ್ರ] ರಾಗೆಯೇ ನಿವೃತ್ತ ಸಂಸಾರಿ ಅಸಂಕುಚಿತ ಜ್ಞಾನರೂಪೀ ಮುಕ್ತರಿಗೆ ಅನುಭವವಿಷಯಭೂತನಾಗಿರುವ ಸ್ಥಿತಿ.

ವ್ಯೂಹವೆಂದರೆ :- ಸೃಷ್ಟಿ-ಸ್ಥಿತಿ-ಸಂಹಾರಾರ್ಥವಾಗಿಯೂ, ಸಂಸಾರಿ ಸಂರಕ್ಷಣಾರ್ಥವಾಗಿಯೂ ಭು ಜಾ ಸ ಕ ರ ಅನುಗ್ರಹಾರ್ಥವಾಗಿಯೂ ಸಂಕರ್ಷಣ-ಅನಿರುದ್ಧ-ಪ್ರದ್ಯುಮ್ನರೂಪೇಣ ಇರುವ ಸ್ಥಿತಿ.

ಪರತತ್ವದಲ್ಲಿ ಜ್ಞಾನಾದಿ ಆರು ಗುಣಗಳು ಪೂರ್ಣವಾಗಿರುತ್ತೆ. ವ್ಯೂಹದಲ್ಲಿ ಎರಡು ಗುಣಗಳು ಪ್ರಕಟರೂಪದಲ್ಲಿರುತ್ತೆ.

ಸಂಕರ್ಷಣ :- ಜ್ಞಾನ-ಬಲ ಎರಡೂ ಸೇರಿ ಶಾಸ್ತ್ರ ಪ್ರವರ್ತನೆ ಮತ್ತು ಜಗತ್ಸಂಹಾರವನ್ನು ಮಾಡುತ್ತಾನೆ. ಇವನು ಜೀವತತ್ತ್ವ ಅಧಿಷ್ಠಾತಾ.

ಪ್ರದ್ಯುಮ್ನ :- ಐಶ್ವರ್ಯ-ವೀರ್ಯ ಎರಡೂ ಸೇರಿ ಧರ್ಮೋಪದೇಶವನ್ನು "ಮಖೋನಾಂ ಸರ್ಪಮುಕರೋತ್ ಮುಖಬಾಹೂರುಜಾದತಃ [ಚತುರ್ಣಾಂ ಬ್ರಾಹ್ಮಣಾದೀನಾಂ ಸರ್ಗದ್ವಾರಂ ಜಗತ್ಪತಿಃ" ಹೀಗೆಂದು ವಿಷ್ಣುಸ್ಮೃತಿ ಸಂಹಿತೆಯಲ್ಲಿ ತಿಳಿಸಿರುವ ಪ್ರಕಾರ ಬ್ರಾಹ್ಮಣಾದಿ ನಮ್ಮ ಚತುಷ್ಟಯ ಸಾಧಂಭದಿಂದ ಶುದ್ಧವರ್ಗ ಸೃಷ್ಟಿಯನ್ನು ಮಾಡುತ್ತಾನೆ. ಇವನು ಮನಸ್ತತ್ವ ಅಧಿಷ್ಠಾತನು.

ಅನಿರುದ್ಧ :- ಶಕ್ತಿ-ತೇಜಸ್ಸು ಎರಡೂ ಸೇರಿ ತತ್ತ್ವಜ್ಞಾನ ಪ್ರಧಾನವಾಗಿ ಕಾಲಸೃಷ್ಟಿ ಮತ್ತು ಮಿಶ್ರಸೃಷ್ಟಿ ಮಾಡುವನು. ಇವನು ಅಹಂಕಾರತತ್ತ್ವ ಅಧಿಷ್ಠಾತಾ.

ಈ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧಾದಿಜೀವಗಳು, ಮನ-ಅಹಂಕಾರ ತತ್ವಗಳಿಗೆ ಅಧಿಷ್ಠಾತರು. ಜಿದ್ದರಿಂದ ಸಂಕರ್ಷಣನನ್ನು ಜೀವ ಶಬ್ದದಿಂದ ಪ್ರದ್ಯುಮ್ನನನ್ನು ಮನಶ್ಶಬ್ದದಿಂದ, ಅನಿರುದ್ಧನನ್ನು ಅಹಂಕಾರ ಶಬ್ದದಿಂದ ಜಾಂಬವರಾಜ್ರ ಆಗಮಿಸಿ-

"ಸಂಕರ್ಷಣೋನಾಮ ಜೀವೋ ಜಾಯತೇ" "ಪ್ರದ್ಯುಮ್ನ

ಸಂಜ್ಞಕ ಮನೋ ಜಾಯತೇ" "ಅನಿರುದ್ಧ ಸಂಜ್ಞಕ ಅಹಂಕಾರೋ ಜಾಯತೇ" ಹೀಗೆಂದು ಪಾಂಚರಾತ್ರ ಸಂಹಿತೆಯಲ್ಲಿ ಹೇಳಿದೆ.

ಸಂಕರ್ಷಣೋನಾಮ ಜೀವೋ ಜಾಯತೇ ವಾಕ್ಯವನ್ನು ನೋಡಿ, ಜೀವನಿಗೆ ಉತ್ಪತ್ತಿಯಾಗುವ ಕಾರಣ ಜೀವ ನಿತ್ಯತ್ವ ಪ್ರತಿಪಾದಕ ನಾರಾಯಣನಿಗೆ ಪರತ್ವವೆನ್ನುವದು ಸತ್ಯವಾದರೂ ನಾರಾಯಣನ ಆರಾಧನೆ ಹೆಚ್ಚು ಶ್ರೇಷ್ಠವೆಂದೂ, ಜೀವನಿಗೆ ಉತ್ಪತ್ತಿಯನ್ನು ಹೇಳುವುದು ವೇದಾಂತ ವಿರುದ್ಧವಾದ ಕಾರಣ ಈ ಒಂದು ವಿಷಯದಲ್ಲಿ ಪಾಂಚರಾತ್ರ ಅಪ್ರಮಾಣ. ಹೀಗೆ ಶ್ರೀ ವೇದವ್ಯಾಸರು ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ, ಶೈವ ಮತಗಳ ಖಂಡನೆ ಮಾಡುವಂತೆಯೇ ಪಾಂಚರಾತ್ರ ಮತವನ್ನೂ ಖಂಡನೆ ಮಾಡಿದ್ದಾರೆಂದು ಶಂಕರಾಚಾರ್ಯರ ಅಭಿಪ್ರಾಯ.

ಅಪರೆ ಸ್ವಾಮಿ ರಾಮಾನುಜಾಚಾರ್ಯರು 'ಶ್ರೀ ಭಾಷ್ಯ'ದ 'ಉತ್ಪತ್ಯಧಿಕರಣ'ದಲ್ಲಿ ಹೀಗೆ ತಿಳಿಸಿರುತ್ತಾರೆ. ಶ್ರೀ ವೇದವ್ಯಾಸರು ಬ್ರಹ್ಮಸೂತ್ರದಲ್ಲಿ ಅನುಗ್ರಹಿಸಿರುವಂತೆಯೇ, ಮಹಾಭಾರತದಲ್ಲಿ ಪಾಂಚರಾತ್ರ ಪ್ರಮಾಣವನ್ನು ಮೋಕ್ಷಧರ್ಮ ಪ್ರಕರಣದ ಜ್ಞಾನಕಾಂಡದಲ್ಲಿ ವಿಸ್ತಾರದಿಂದ ತಿಳಿಸಿರುತ್ತಾರೆ. ಬ್ರಹ್ಮಸೂತ್ರದಲ್ಲಿ ಇದೇ ಪಾಂಚರಾತ್ರವನ್ನು ಏಕದೇಶ ಸಪ್ರಮಾಣವಾಗಿ ಖಂಡಿಸಿಲ್ಲ. ಶ್ರೀ ವೇದವ್ಯಾಸರ ಅಭಿಪ್ರಾಯವೇನೆಂದರೆ ಪಾಂಚರಾತ್ರ ಸಂಪೂರ್ಣ ಪ್ರಮಾಣ; ಪಾಂಚರಾತ್ರವೆಂಬ ಶಬ್ದವೇ ಈ ಅರ್ಥವನ್ನು ತಿಳಿಸುತ್ತೆ-'ಪಂಚರಾತ್ರ್ಯಂಶೇ ಆತಃ ಪಾಂಚರಾತ್ರಪ್ರಮ್' ಪರಮ ಪ್ರಮಾಣರೂಪ ಸಪ್ತನಿಧಿಯಲ್ಲಿ ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ, ಶೈವ—ಈ ಐದು ಮತವು ರಾತ್ರಿಯಾಧಿಕ್ಯ, ಅಪ್ರಕಾಶವಾಯಿತು. ಅದ್ದರಿಂದ ಪಾಂಚರಾತ್ರದ ಪ್ರಕಾಶವನ್ನು ಅಂದರೆ—ಖಂಡನ ಅಪೇಕ್ಷವನ್ನು ಮತ್ತು ಸಾಂಖ್ಯಾದಿಗಳ ಮತಖಂಡನ ಮಾಡಿದ ಅವಂಕರವೇ ತರ್ಕಜಾಲದಲ್ಲಿ ಪಾಂಚರಾತ್ರ ಪ್ರಾಮಾಣ್ಯವನ್ನು ಸ್ಥಾಪಿಸುತ್ತಾರೆ. ಅದ್ದರಿಂದ ಪಾಂಚರಾತ್ರದಲ್ಲಿ 'ಸಂಕರ್ಷಣನಾಮಾ ಜೀವೋ ಜಾಯತೇ' ಹೀಗೆ ಜೀವೋತ್ಪತ್ತಿಯನ್ನು ವೇದಾಂತವು ವಿಪರೀತವಾಗಿ ಹೇಗೆ ಹೇಳುತ್ತೆ? ಅಂದರೆ ಎಲ್ಲಾ ಪಾಂಚರಾತ್ರಸಂಹಿತೆಗಳೂ ಜೀವನ ನಿತ್ಯತ್ವವನ್ನೇ ತಿಳಿಸುತ್ತೆ.

ಜೀವತತ್ತ್ವದೊಪ ಉತ್ಪತ್ತಿಯನ್ನು ಪಾಂಚರಾತ್ರದಲ್ಲಿ ಹೇಳಿಲ್ಲ. ಅದರಲ್ಲಿ "ಸಂಕರ್ಷಣಾನಾಮಾ ಜೀವೋತ್ಪಾಯತೇ" ಎಂಬ ವಾಕ್ಯವು ಜೀವೋತ್ಪತ್ತಿಯ ವಿಷಯದಲ್ಲಿ ಇಲ್ಲ; ಜೀವತತ್ತ್ವದ ಅಧಿಷ್ಠಾತಾ ಸಂಕರ್ಷಣ ರೂಪ ವ್ಯೂಹಅವತಾರದ ಉತ್ಪತ್ತಿಯನ್ನು ಮಾತ್ರ ಹೇಳುತ್ತೆ.

"ಪ್ರದ್ಯುಮ್ನ ಸಂಜ್ಞಕ ಮನೋಜಾಯತೇ" ಇಲ್ಲಿ ಮನಃತತ್ತ್ವದ ಅಧಿಷ್ಠಾತಾ ಪ್ರದ್ಯುಮ್ನರೂಪ ವ್ಯೂಹಾವತಾರವನ್ನು ಹೇಳುತ್ತೆ.

"ಅನಿರುದ್ಧ ಸಂಜ್ಞಕ ಅಹಂಕಾರೋಜಾಯತೇ" ಎಂದು ಅಹಂಕಾರತತ್ತ್ವ ಅಧಿಷ್ಠಾತಾ ಅನಿರುದ್ಧರೂಪ ವ್ಯೂಹಾವತಾರ ಉತ್ಪತ್ತಿಯನ್ನು ಹೇಳುತ್ತೆ. ಅದರಿಂದ ಜೀವ, ಮನೋ, ಅಹಂಕಾರ ತತ್ತ್ವಗಳ ಅಧಿಷ್ಠಾತರಾದ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರು ಜೀವ, ಮನ, ಅಹಂಕಾರ ಶಬ್ದಗಳನ್ನು ತಿಳಿಸುತ್ತೆ.

ಆದರಿಂದ ಈ ವಾಕ್ಯ ಜೀವೋತ್ಪತ್ತಿಯ ವಿಷಯದಲ್ಲಿ ಅಲ್ಲ; ವ್ಯೂಹಾವತಾರವನ್ನು ತಿಳಿಸುವುದಾಗಿದೆ. ಈ ರೀತಿ ಭಗವದ್ಭಾವನು ಪಾಚಾರ್ಯರು "ಉತ್ಪತ್ಯಭಾವಾಧಿಕರಣ"ದಲ್ಲಿ ಪಾಂಚರಾತ್ರಅಪ್ರಮಾಣತಂತ್ರಾಪರಿಹಾರ ಮಾಡಿರುತ್ತಾರೆ. ಆದರಿಂದ ವ್ಯೂಹಮೂರ್ತಿ ಎರಡೆರಡು ಗುಣಗಳನ್ನು ಪ್ರಬಲವಾಗಿ ಪಡೆದು ಸಂಹಾರಾದಿ ಕಾರ್ಯಗಳನ್ನ ನಡೆಸುತ್ತಾರೆ.

ಶ್ರೀ ವಿಷ್ಣು ಸಹಸ್ರನಾಮಾಧ್ಯಾಯದ ಪ್ರಥಮ 122 ಶುಭ ನಾಮಗಳಿಂದ ಭಗವಂತನ ಪರತ್ವವನ್ನು ಹೇಳಿ ಮುಗಿಸಿದನಂತರ, 123ನೇ ಹೆಸರಿನಿಂದ ವ್ಯೂಹಾವತಾರವನ್ನೂ, 147 ರಿಂದ ವಿಭವಾವತಾರವನ್ನೂ, 640ರಿಂದ 660ರ ವರೆಗೆ ಅರ್ಚಾವತಾರವನ್ನೂ ವಿವರಿಸುತ್ತಾರೆ. 125-26 ಐಶ್ವರ್ಯ-ವೀರ್ಯ ವಿಶಿಷ್ಟನಾದ ಪ್ರದ್ಯುಮ್ನನ ವಿಷಯವಾಗಿಯೂ, 127-28 ಶಕ್ತಿ-ತೇಜೋ ವಿಶಿಷ್ಟನಾದ ಅನಿರುದ್ಧನ ವಿಷಯವಾಗಿಯೂ 129, 30, 31, 32—ಈ ನಾಲ್ಕು ಶ್ರೇಷ್ಠ ಹೆಸರುಗಳಿಂದ ಜ್ಞಾನ-ಬಲವಿಶಿಷ್ಟನಾದ ಸಂಕರ್ಷಣನ ವಿಷಯವಾಗಿಯೂ 135, 36, 37—ಈ ಮೂರು ಹೆಸರು ಗಳಿಂದ ಶೌರ್ಯ ಅನಿರುದ್ಧನ ವಿಷಯವಾಗಿಯೂ ಹೇಳ

ಲಾಗಿದೆ. ಈ ವಿವರಣೆ ಶ್ರೀ ಪರಾಶರಭಟ್ಟರ "ಭಗವದ್ಗುಣದರ್ಪಣ" ಎಂಬ ಸಹಸ್ರನಾಮ ಭಾಷ್ಯದಲ್ಲಿದೆ.

ಭಗವಂತನ ವಿಭವಾವತಾರ ಅನಂತ. ಆದರೂ ಸಹ ಗೌಣ-ಮುಖ್ಯ ವೆಂಬ ವ್ಯತ್ಯಾಸದಿಂದ ಎರಡು ಪ್ರಕಾರದ್ದಾಗಿರುತ್ತೆ.

ಗೌಣಾವತಾರವೆಂದರೆ ಅಮುಖ್ಯಾವತಾರ ಅಥವಾ ಅವೇಶಾವತಾರ ವೆಂದು ಹೇಳುತ್ತಾರೆ. ಅವೇಶಾವತಾರ ಸ್ವರೂಪಾವತಾರ ಮತ್ತು ಶಕ್ತ್ಯಾವತಾರವೆಂದು ಎರಡು ವಿಧ. ಸ್ವರೂಪಾವತಾರವೆಂದರೆ ಖಂಡ ರಾಮಾವತಾರ ಮುಂತಾಗಿ ಜೀವನ ಶರೀರದಲ್ಲಿ ಅವೇಶಗೊಳ್ಳುವುದು. ಶಕ್ತ್ಯಾವತಾರವೆಂದರೆ ಕಾರ್ಯಕಾಲದಲ್ಲಿ ವಿಧಿ, ಶಿವ ಮೊದಲಾದವರು ಕಾರ್ಯವೀರ್ಯಾರ್ಜುನನೆಂಬ ಜೀವನಲ್ಲಿ ಶಕ್ತ್ಯಾವಾಕ್ಯಸ್ಫುರಣ ಮಾಡುವುದು.

ಮುಖ್ಯಾವತಾರವೆಂದರೆ-ರಾಮ-ಕೃಷ್ಣಾದ್ಯವತಾರಗಳು.

ಮುಖ್ಯಾವತಾರ ಪ್ರಾದುರ್ಭಾವ; ಅಮುಖ್ಯಾವತಾರ ಪ್ರಾದುರ್ಭಾವ ವಾಗುವುದಿಲ್ಲ. ಮುಖ್ಯಾವತಾರ ಪ್ರಾದುರ್ಭಾವಪಾದ ರಾಮಕೃಷ್ಣಾದಿಗಳು ಮುಮುಕ್ಷುಗಳಿಗೆ ಉಪಾಸಕರು. ಪ್ರಾದುರ್ಭಾವಾಂತರವಾದ ಅಮುಖ್ಯಾವ ತಾರ ಮುಮುಕ್ಷುಗಳಿಗೆ ಅಮುಖ್ಯ. ಶಾಸ್ತ್ರದಲ್ಲಿ ಹೀಗೆಂದು ತಿಳಿಸಿದೆ.

ಅಂತರ್ಯಾಮಿತ್ವವೆಂದರೆ:— "ಅಂತಃ ಪ್ರವಿಶ್ಯ ನಿಯಂತಾ" ವಾಗಿರುವುದು. ಇವು ಎರಡು ವಿಧ 1) ಚಿಕ್ಕನ ಒಳಗೆ ತನ್ನ ಸ್ವರೂಪಾನು ರೂಪವಾಗಿ ವ್ಯಾಪ್ತನಾಗಿ ನಿಯಮಿಸುವುದು. 2) ವಿಗ್ರಹವಿಶಿಷ್ಟನಾಗಿ ಹೃದಯ ಪ್ರದೇಶದಲ್ಲಿ ವ್ಯಾಪ್ತನಾಗಿ ನಿಯಮಿಸುವುದು. "ಇರಾವಾಡ ಮೂಟ್ಟುವಾರೈಪ್ಪೋಲೇ ಉಳ್ಳೆ ಹದಿಕಿಡಂದು ಸತ್ತೈ ಪಿಡಿತ್ತು ಸೋಕ್ಕೆ ಕೊಂಡು ಪೋರುವರ್" ಎಂಬಾರಾತ್ಮಹೃದಯ ಅದರ ಅನಂತರ— "ಅಂಗುಷ್ಠ ಮಾತ್ರಃ ಪುರುಷಃ" [ಕ. ಉ. 2-4-13], "ನೀಲತೋಯದ ಮಧ್ಯಸ್ಥಾ" [ತೈ. ಉಪ. 3-11] ಈ ರೀತಿಯಾಗಿ ಜ್ಯೋತಿರೂಪ ದಿವ್ಯ ಮಂಗಳ ವಿಗ್ರಹ ರೂಪವಿಂದ ಭಕ್ತರ ಹೃದಯದಲ್ಲಿ ನೆಲೆಸಿರುವ ಸ್ಥಿತಿ.

ಅರ್ಚಾವತಾರವೆಂದರೆ:— "ತನುರುಹಂದದು ಎಪ್ಪುರವಮ್"

[ಮೊದಲ ತಿರುವಂದಾದಿ 49] ಆಶ್ರಿತರು ಯಾವುದನ್ನು ಭಗವದ್ವಿಗ್ರಹ ರೂಪವಾಗಿ ಪ್ರೀತಿಸುತ್ತಾರೋ ಅದರಲ್ಲಿಯೇ ಮುಖಮಂಡಲದ ರೂಪವನ್ನು ಅಯೋಧ್ಯಾ, ಮಥುರಾ ಮುಂತಾದ ದೇಶ ವಿಶೇಷ ನಿಯಮವಿಲ್ಲದೆ, ಹನ್ನೊಂದು ಸಾವಿರ ಸಂವತ್ಸರ ಮತ್ತು ಒಂದು ನೂರು ಸಂವತ್ಸರವೆಂಬ ಕಾಲ ನಿಯಮಕ್ಕನುಸಾರವಾಗಿ ಅಲ್ಲದೆ, ದಶರಥ-ವಾಸುದೇವ ಮುಂತಾದ ಅಧಿಕಾರಿ ನಿಯಮವಿಲ್ಲದೆ- "ಭೌಮನಿಕೇತನೇಷು ಬಸಿಕುಷ್ಠೇಕುಂಜೇಷು" [ಶ್ರೀರಂ. ಸ್ತ ಉ. 74] ಎಂಬ ಭೇದಭಾವವಿಲ್ಲದೆ ಎಲ್ಲಾ ಸ್ಥಳದಲ್ಲಿಯೂ, ಸರ್ವತ್ರ, ಎಲ್ಲಾ ಕಾಲದಲ್ಲಿಯೂ ಅರ್ಚಕ ಪರಾಧೀನನಾಗಿ ತನ್ನ ಸಮಸ್ತ ವ್ಯಾಪಾರದೊಂದಿಗೆ ಇರುವ ಸ್ಥಿತಿ. ಅರ್ಚಾ ಎನ್ನುವ ಶಬ್ದವು ಹೇಗೆ ಪೂಜಾವಾಚಕವೋ ಹಾಗೆಯೇ ಪ್ರತಿಮಾವಾಚಕವೂ ಸಹ ಆಗಿರುತ್ತೆ. ಅರ್ಚಾವತಾರದಲ್ಲಿ ರುಚಿಜನಕತ್ವ, ಶಕ್ತಾಶ್ರಯತ್ವ, ವಿಶೇಷಭೋಗ್ಯ ಶರಣ್ಯತ್ವ, ಅನುಭಾವ್ಯತ್ವವೆಲ್ಲವೂ ಸಂಪೂರ್ಣವಾಗಿರುತ್ತೆ.

"ಸ್ವತ್ವಮಾತ್ಮನಿ ಸಂಜಾತವಸ್ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತವಸ್" ಹಾಗೆಯೇ ಜೀವನಲ್ಲಿ ಸ್ವತ್ವಕೂಡ, ಭಗವಂತನ ಸ್ವಾಮಿತ್ವವು ಶಾಸ್ತ್ರ ವ್ಯವಸ್ಥಿತವಾದ್ದರಿಂದ ಅರ್ಚಾವತಾರದಲ್ಲಿ ಭಗವಂತನು ಜೀವಾತ್ಮನ ಸಂಪತ್ತಿಯ ಜೊತೆಗೆ ತನ್ನನ್ನು ಜೊತೆಯಲ್ಲಿ ಇಟ್ಟು ಸ್ವಾಮಿತ್ವವನ್ನು ಜೀವನ ಅಧೀನ ಸಂಪತ್ತಿಯಾದ ಅಧಿಕಾರವನ್ನು ಸಹ ತನ್ನ ಸ್ವದಿಚ್ಛೆಯಿಂದ ಪರಿವರ್ತನೆ ಮಾಡಿಕೊಂಡಿರುತ್ತಾನೆ.

ಸರ್ವಜ್ಞ, ಸರ್ವಶಕ್ತ, ನಿರಂಕುಶಸ್ವತಂತ್ರನಾದ ತಾನು ಜಜ್ಞನ ಹಾಗೆಯೂ, ಅಶಕ್ತನಿಗೆ ಸಮಾನವಾಗಿಯೂ, ಪರತಂತ್ರನಂತೆಯೂ ಇರುತ್ತಾನೆ. ಅರ್ಚಾವತಾರವು ಕಾರುಣ್ಯವಿಮುಖನಿಗೂ ಬಿಡಾರದವನಂತೆ ಸೀಮಾತೀತ ಕಾರುಣ್ಯವಿಶೇಷದಿಂದ ಕೂಡಿರುತ್ತೆ.

ಅರ್ಚಾವತಾರದಲ್ಲಿ ಪರಮಾತ್ಮನಿಗೆ ಪುತ್ರ, ಧನ, ಧಾನ್ಯ, ಗೃಹ, ಕ್ಷೇತ್ರ ದಾನದಿಂದ ಹಿಡಿದು ಮೋಕ್ಷದಾನ ಪರ್ಯಂತ ಅಧಿಕಾರವಿರುತ್ತೆ. ಜೀವನ ಸಕಲ ಅಪೇಕ್ಷೆಗಳನ್ನೂ ಈಡೇರಿಸುತ್ತಾನೆ.

ಈ ರೀತಿ ಈಶ್ವರನು ಅಖಿಲಹೇಯಪ್ರತ್ಯನೀಕನಾಗಿಯೂ, ಕಲ್ಯಾಣ ಗುಣೈಕತಾನನಾಗಿಯೂ, ಸ್ವೇತರಸಮಸ್ತವಸ್ತುವಿಲಕ್ಷಣನಾಗಿ, ಜಗತ್ಸೃಷ್ಟ್ಯಾದಿ ಕಾರಣಭೂತನಾಗಿ, ಸರ್ವಸಮಾಶ್ರಯಣನೆಂದು ಕಡೆಯುಳ್ಳಟ್ಟು, ಸರ್ವಫಲಪ್ರದನಾಗಿ, ವಿಲಕ್ಷಣ ವಿಗ್ರಹಯುಕ್ತನಾಗಿ, ಶ್ರೀಭೂನೀಳಾ ನಾಯಕನಾಗಿ, ಉಭಯ ವಿಭೂತಿಯುಕ್ತನೆಂದು, ಪರಜ್ಞಾದಿ ಪಂಚಪ್ರಕಾರ ವಿಶಿಷ್ಟನೆನ್ನಲ್ಪಡುತ್ತಾನೆ.

ಜೀಯರ್ ತಿರುವಡಿಗಳೇ ಶರಣಂ.

ಕೃತಜ್ಞತೆ

ವಿದ್ವಾನ್ ಶ್ರೀ. ಉ. ವೇ. ಕೆ. ತಿರುವೆಂಕಟಾಚಾರ್ಯರವರು ಮತ್ತು ಶ್ರೀ. ಉ. ವೇ. ಎ. ಅನಂತಾಚಾರ್ಯರವರು, ಅತ್ಯಂತ ಆದರದಿಂದ ಈ ಕೃತಿಯ ಕರಡು ಪ್ರತಿಯನ್ನು ತಿದ್ದಿ ಕೊಟ್ಟಿರುತ್ತಾರೆ. ಅವರಿಗೂ ಮತ್ತು ಭಾರತ ವರ್ಷದ ಪ್ರಸ್ತುತ ಮಾಲೀಕರಾದ ವಿದ್ವಾನ್ ಶ್ರೀ ಕೇಶವ ಸುಬ್ರಹ್ಮಣ್ಯ ಕೌಶಿಕ್‌ರವರಿಗೂ ಈ ಕೃತಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟು ಸಹಕರಿಸಿದ್ದಕ್ಕಾಗಿ ಮಂಡ್ಯದ ಶ್ರೀ ಲಕ್ಷ್ಮೀ ಜನಾರ್ದನಸ್ವಾಮಿಯು ಸಕಲ ಸೌಭಾಗ್ಯಗಳನ್ನೂ ಅನುಗ್ರಹಿಸಲಿ ಎಂದು ಪ್ರಾರ್ಥಿಸಿ ಈ ಮೂಲಕವಾಗಿ ನನ್ನ ವಂದನೆಯನ್ನು ಸಲ್ಲಿಸುತ್ತೇನೆ.

ಶ್ರೀದೇವಿ,
ಯಾದವಾದ್ರಿ, ಮಂಡ್ಯ.

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
22	3-4	ಏಕ ವಿಕಾಯನ ? ಮಾನರವರಿಗಿನವು	ಏಕಯಾನರವರಿಗಿನವು
26	22	ವಿಭಾಗ	ವಿಭಾಗದ
27	1	ವಿಭಾಗ	ವಿಭಾಗದ
28	11	ಪ್ರಥೊಕ್ತೇನ	ಪ್ರದ್ಯೋತೇನ
32	ಕಡೇ ಪಂಕ್ತಿ	ಪ್ರಯತಂತೇ ಕರೋತಿ	ಪ್ರಯತತೇ ಕರೋತಿ
35	ಕಡೇ ಪಂಕ್ತಿ	ಕವರಾಧಾ	ಕವರಾಜಾ
37	2	ಜಹ್ಯಾ	ಜಹ್ಯತ
40	11	ಗುಣಮಾ	ಗುಣಾಮೊ
"	"	ಯೋ ಮಾಂ ಭೋಜ	ಪ್ಯೋವಮಾಂಭೋಜ
41	15	ಪಾಳಂ	ಪಾಳುಂ
43	1	ಅಕ್ಷರಾಧ್ಯವಸ್ಥಾ	ಅಕ್ಷರಾದ್ಯವಸ್ಥಾ
46	15	ಲೀಜಾ ವಿಭೂತಿ	ಲೀಲಾ ವಿಭೂತಿ
47	8	ಕಾಲ ತಪ್ಪನ್ನೇ ಅಲ್ಲ	ಕಾಲವೇ ಇಲ್ಲವೆಂದರು.
49	28	ಉಕಾಶ	ಆಕಾಶ
56	17	41 ನೆಯ	4 ನೆಯ
"	22	ಸಕಲಾತಿಗಾ	ಸ ಕಾಲಾತಿಗಾ

ಪುಸ್ತಕ ದೊರೆಯುವ ಸ್ಥಳ :—

ಶ್ರೀ ಎನ್. ಎ. ಶಿಂಗ್ಲಾಚಾರ್,
ಕಸ್ಬಾನಾಕ,
ಶ್ರೀ ಲಕ್ಷ್ಮೀಜನಾರ್ದನ ದೇವಸ್ಥಾನದ ರಸ್ತೆ,
ಮಂಡ್ಯ.

ಶ್ರೀದೇವಿ,
C/o ಎಂ. ಆರ್. ತಿರುನಾರಾಯಣ್,
ನಂ. 3018, 100 ಅಡಿ ರಸ್ತೆ, ನೆಹರು ನಗರ,
ಮಂಡ್ಯ.

ಕ್ರಯ : ರೂ. 1-50

ಶ್ರೀಮದನನ್ತಾರ್ಯ ಮಹಾಗುರವೇ ನಮಃ

ಶ್ರೀ ಅನಂದಾಳ್ವಾರ್



ಮೇಷೇ ಚಿತ್ತಾಸಮುದ್ಭೂತಂ ಯತಿರಾಜಪದಾಶ್ರಿತಮ್ ।
ಶ್ರೀವೇಂಕಟೇಶಸದ್ಭಕ್ತಂ ಅನನ್ತಾರ್ಯಮಹಂ ಭಜೇ ॥



ಶ್ರೀಮದ್ವೇದಪುರಾಧೀಶಂ ವೇದಲಕ್ಷ್ಮೀಸಮನ್ವಿತಂ ।
ವೇದಾಂತವೇದ್ಯಂ ವರದಂ ಜನಾರ್ದನಮುಪಾಸ್ಮಹೇ ॥

Bharatha Darshana Press, Bangalore-28